ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ಅಬ್ ಕೀ ಬಾರ್ ಟ್ರಂಪ್ ಸರ್ಕಾರ್!

ಸಂಪುಟ 10 | ಸಂಚಿಕೆ 47 ಪುಟ 16 | ನವೆಂಬರ್ 20,2016 | ರೂ. 10/-

web: www.janashakthi.co.in | e-mail : js_weekly@yahoo.com

500/1000 ನೋಟು ರದ್ಧತಿ



ಟೊಳ್ಳು ರಾಜಕೀಯ ಪ್ರೋಸು

ಭೂಮಿ-ವಸತಿಗಾಗಿ

ನ.18 ಜೈಲ್ ಭರೋದತ್ತ ಮುನ್ನಡೆಯಿರಿ...



ರೈತ-ಕಾರ್ಮಿಕ-ಕೂಲಿಕಾರ-ದಲಿತ
ಆದಿವಾಸಿ - ಮಹಿಳೆ-ವಿದ್ಯಾರ್ಥಿ
ಯುವಜನ ಸಂಘಟನೆಗಳು ಭಾಗಿ

ಖಳ ನಟರ ಸಾವು ನ್ಯಾಯವೇ?

ಟಿಪ್ಪು : ಸರ್ಕಾರಿ ಆಚರಣೆ ಸಾಕೆ?

ನಜೀಬ್ ಎಲ್ಲಿ?

ಎಲ್ಲೆಡೆ ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ



500/ 1000ರೂ. ನೋಟುಗಳ ರದ್ದತಿ ಒಂದು ಟೊಳ್ಳು ಪೋಸು

ಶೋಚನೀಯ ವಿಫಲತೆಯನ್ನು ಮರೆಮಾಚುವ ಕ್ರಮ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ನವಂಬರ್ 8ರ ಮಧ್ಯರಾತ್ರಿಯ ನಂತರ 500ರೂ. ಮತ್ತು 1000ರೂ.ಗಳ ಕರೆನ್ಸಿ ನೋಟುಗಳನ್ನು ಅಮಾನ್ಯಗೊಳಿಸಲಾಗಿದೆ ಎಂಬ ಪ್ರಧಾನ ಮಂತ್ರಿಗಳ ಪ್ರಕಟಣೆ ಕಪ್ಪು ಹಣವನ್ನು ಹೊರಗೆಳೆಯುವ ಅಪೇಕ್ಷಿತ ಫಲಿತಾಂಶವನ್ನು ಕೊಡಲಾರದು, ಅದರ ಪರಿಣಾಮ ಸೀಮಿತವಾಗಿರುತ್ತದೆ, ಅದು ಹೆಚ್ಚಾಗಿ ನಟನೆಯಂತೆಯೇ ಆಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಈ ರೀತಿಯ ಅನಾಣ್ಯೀಕರಣ ಕಪ್ಪು ಹಣವನ್ನು, ಭ್ರಷ್ಟಾಚಾರವನ್ನು ಮತ್ತು ಭಯೋತ್ಪಾದನೆಯನ್ನು ತಡೆಯುತ್ತದೆ ಎಂಬ ಸಮರ್ಥನೆಯಲ್ಲಿ ಸಾರವಿಲ್ಲ. ಬಹುಪಾಲು ಕಪ್ಪುಹಣದ ಉತ್ಪತ್ತಿ ಮತ್ತು ದಾಸ್ತಾನು ಸಾಗರದಾಚೆಗಿನ ವಿದೇಶಿ ಕರೆನ್ಸಿಗಳಲ್ಲಿ ಇದೆ ಎಂದು ಪ್ರಧಾನ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಯಾವುದೇ ಮೊತ್ತದ ನಕಲಿ ನೋಟುಗಳನ್ನು ಉತ್ಪತ್ತಿ ಮಾಡಬಹುದು. ಇನ್ನೊಂದು 500ರೂ. ನೋಟಿನೊಂದಿಗೆ , ಹೊಸದಾಗಿ 2000ರೂ. ನೋಟುಗಳನ್ನು ಮುದ್ರಿಸಲಾಗುವುದು ಎಂದು ಪ್ರಕಟಿಸಲಾಗಿದೆ, ಇದು ಮುಂದೆ ಆಗಬಹುದಾದ ನಕಲಿ ನೋಟುಗಳ ಚಲಾವಣೆಯನ್ನು ತಡೆಯಲಾರದು. ಭಯೋಪತ್ಪಾದಕರಿಗೆ ಹಣ ವರ್ಗಾವಣೆ ಕರೆನ್ಸಿ ವ್ಯವಹಾರಗಳ ಮೂಲಕ ಆಗುವುದಿಲ್ಲ, ಬದಲಾಗಿ ಇಲೆಕ್ಟ್ರಾನಿಕ್ ವರ್ಗಾವಣೆಗಳ ಮೂಲಕ ಆಗುತ್ತದೆ ಎಂಬುದು ಸಾಬೀತಾಗಿರುವ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್‌ಬುರೊ ಹೇಳಿದೆ.

ನಿಗದಿತ ಸಮಯ ಮಿತಿಯೊಳಗೆ 1000ರೂ. ಮತ್ತು 500ರೂ. ನೋಟುಗಳ ಪರಿವರ್ತನೆಗೆ ಅವಕಾಶ ಕೊಟ್ಟಿದ್ದು, ಬೇನಾಮಿ ಪರಿವರ್ತನೆಗಳನ್ನು ತಡೆಯುವ ಯಾವುದೇ ಪರಿಣಾಮಕಾರಿ ಕ್ರಮ ಇಲ್ಲವಾಗಿದೆ. ಅಲ್ಲದೆ ಪ್ಲಾಸ್ಟಿಕ್‌ಹಣ (ಕಾರ್ಡುಗಳು) ಮೂಲಕ ವ್ಯವಹಾರಗಳು ಎಂದಿನಂತೆ ಮುಂದುವರಿಯುತ್ತವೆ ಎಂಬ ಸಂಗತಿಯತ್ತವೂ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ವಾಸ್ತವ ಪರಿಣಾಮವೆಂದರೆ ನಮ್ಮ ದೈನಂದಿನ ಆರ್ಥಿಕ ಜೀವನದ ಭಾಗವಾದ ಪಾವತಿಗಳು ಮತ್ತು ಇತ್ಯರ್ಥಗಳು ಪೂರ್ಣವಾಗಿ ಅಸ್ತವ್ಯಸ್ತಗೊಳ್ಳುತ್ತವೆ. **ಇದು ನಮ್ಮ ವಿಶಾಲ ಜನಸಮೂಹಗಳ ಮೇಲೆ, ದಿನಗೂಲಿಗಳು, ಮೀನುಗಾರರು, ಸಣ್ಣ ವ್ಯವಹಾರಸ್ಥರು, ವ್ಯಾಪಾರಿಗಳು ಮತ್ತು ಮನೆ-ಮನೆ ತಿರುಗಿ ಮಾರಾಟ ಮಾಡುವವರ ಮೇಲೆಹೊರೆ ಹಾಕುತ್ತದಷ್ಟೇ.** ಕರೆನ್ಸಿ ನೋಟುಗಳನ್ನು ಬದಲಾಯಿಸ ಬಯಸುವ ಸಾಮಾನ್ಯ ಜನರ ಬದುಕು ಅಸ್ತವ್ಯಸ್ತಗೊಳ್ಳುತ್ತದೆ ಮತ್ತು ಅವರು ಅಧಿಕಾರಶಾಹೀ ಕಿರುಕುಳಗಳನ್ನೂ ಎದುರಿಸಬೇಕಾಗುತ್ತದೆ ಎಂದು ಸಿಪಿಐ(ಎಂ) ಆತಂಕ ವ್ಯಕ್ತಪಡಿಸಿದೆ.

ಕಪ್ಪು ಹಣವನ್ನು ಬಿಳಿಯಾಗಿಸುವ ಮೂಲ ದಾರಿಗಳಾದ ಪಾರ್ಟಿಸಿಪೇಟರಿ ನೋಟ್‌ಗಳು ಮತ್ತು ತೆರಿಗೆಮುಕ್ತ ಧಾಮಗಳ ಮೂಲಕ ವ್ಯವಹಾರಗಳನ್ನು ಈಗಲೂ ಮುಟ್ಟಿಲ್ಲ. ರಿಯಲ್ ಎಸ್ಟೇಟ್ ವಲಯದಂತಹ ಕಪ್ಪು ಹಣ ಉತ್ಪತ್ತಿಯ ಮೂಲಗಳನ್ನು ಹತ್ತಿಕ್ಕುವ ಪ್ರಯತ್ನವನ್ನೇನೂ ಮಾಡಿಲ್ಲ ಎಂಬ ಸಂಗತಿಯತ್ತವೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಇದು ಆರ್ಥಿಕ ರಂಗದಲ್ಲಿ ಮೋದಿ ಸರಕಾರದ ಶೋಚನೀಯ ವಿಫಲತೆಯನ್ನು ಮುಚ್ಚಿಕೊಳ್ಳುವ ಒಂದು ಕ್ರಮ ಎಂದು ಸಿಪಿಐ(ಎಂ) ಹೇಳಿದೆ. ಉದ್ಯೋಗಹೀನತೆ, ವಿಪರೀತ ಬೆಲೆಗಳು, ಆಂತರಿಕ ಬೇಡಿಕೆಗಳು ಹೆಚ್ಚದಿರುವುದು ಮುಂತಾದವುಗಳು ನಮ್ಮ ಎಲ್ಲ ಜನವಿಭಾಗಗಳನ್ನು, ವಿಶೇಷವಾಗಿ ದುಡಿಯುವ ವರ್ಗಗಳನ್ನು ಅಸಹಾಯಕರನ್ನಾಗಿ ಮಾಡುತ್ತಿರುವುದನ್ನು, ರೈತಾಪಿಗಳನ್ನು ನಾಶಪಡಿಸುತ್ತಿರುವುದನ್ನು ಮರೆಮಾಚುವ ಪ್ರಯತ್ನ ಇದು ಎಂದು ಸಿಪಿಐ(ಎಂ) ಟೀಕಿಸಿದೆ.

ಈ ಸರಕಾರ ನಿಜವಾಗಿಯೂ ಕಪ್ಪು ಹಣವನ್ನು ಹೊರತೆಗೆಯಲು ಮತ್ತು ಅದರ ಉತ್ಪತ್ತಿಯನ್ನು ತಡೆಯಲು ಬದ್ಧವಾಗಿದ್ದರೆ, ಅದು ತೆರಿಗೆ ತಪ್ಪಿಸಲು ಅವಕಾಶ ಕೊಡುವ ದೇಶ-ಪ್ರದೇಶಗಳಲ್ಲಿ ಬ್ಯಾಂಕ್ ಠೇವಣಿಗಳನ್ನು ಹೊಂದಿರುವವರ ಪಟ್ಟಿಯನ್ನು ಮತ್ತು ಒಟ್ಟು 11ಲಕ್ಷ ಕೋಟಿ ರೂ.ಗಳಷ್ಟು ರಾಷ್ಟ್ರೀಕೃತ ಬ್ಯಾಂಕುಗಳ ಸಾಲಗಳನ್ನು ಮರುಪಾವತಿಸಲು ನಿರಾಕರಿಸುವವರ ಪಟ್ಟಿಯನ್ನು ಸಾರ್ವಜನಿಕಗೊಳಿಸಲಿ ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಕಿಸಾನ್ ಸಂಘರ್ಷ ಜಾತಾ: ನಾಲ್ಕೂ ದಿಕ್ಕುಗಳಿಂದ ದಿಲ್ಲಿಯತ್ತ

ಕನ್ಯಾಕುಮಾರಿ, ಕೊಲ್ಕತ ಮತ್ತು ಜಮ್ಮು ಜಾತಾಗಳೂ ಆರಂಭ



ನವಂಬರ್ 9ರಂದು ಕನ್ಯಾಕುಮಾರಿಯ 'ಕಿಸಾನ್ ಸಂಘರ್ಷ ಜಾತಾ'ದ ನಾಲ್ಕನೇ ಹಾಗೂ ಕೊನೆಯ ತಂಡ ತನ್ನ ಪಯಣವನ್ನು ಆರಂಭಿಸಿತು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ನಾಗರ್‌ಕೋಯ್ಲ್‌ನ ಒಂದು ಬೃಹತ್ ರ‍್ಯಾಲಿಯಲ್ಲಿ ಇದನ್ನು ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ತಮಿಳುನಾಡು ಮತ್ತು ಕೇರಳ ರೈತ ಸಂಘಗಳ ಮುಖಂಡರು, ಎಐಕೆಎಸ್ ಉಪಾಧ್ಯಕ್ಷ ಕೆ ವರದರಾಜನ್ ಹಾಗೂ ಈ ತಂಡದ ಮುಖಂಡರಾದ ಎಐಕೆಎಸ್ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್ ಮತ್ತು ಜಂಟಿ ಕಾರ್ಯದರ್ಶಿ ಡಾ.ಅಶೋಕ ಧವಳೆ ಮಾತನಾಡಿದರು.

ರೈತರು ಫಲದಾಯಕ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಕೇಂದ್ರ ಸರಕಾರ ಹಲವು ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿ ಅಗ್ಗದ ಕೃಷಿ ಉತ್ಪನ್ನಗಳು ಆಮದಾಗುವಂತೆ ಮಾಡಿ ಇಲ್ಲಿನ ರೈತರು ಬೆಳೆದ ಉತ್ಪನ್ನಗಳಿಗೆ ಬೆಲೆ ಸಿಗದಂತೆ ಮಾಡುತ್ತಿದೆ ಎಂದರು. ರಬ್ಬರ್ ಬೆಲೆಗಳು ಕುಸಿದು ರೈತರು ಕಂಗಾಲಾದರೆ ದೊಡ್ಡ ಕಂಪನಿಗಳು ಅದ-ರಿಂದ ಅಪಾರ ಲಾಭ ಮಾಡಿಕೊಳ್ಳುತ್ತಿವೆ ಎಂದು ಅವರು ಹೇಳಿದರು.

ಈ ಜಾತಾ ಕೇರಳ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ರಾಜಸ್ತಾನದಲ್ಲಿ ಸಂಚರಿಸಿ ನವಂಬರ್ 23 ರಂದು ದಿಲ್ಲಿ ಸೇರುತ್ತದೆ. ಇದಕ್ಕೆ ಮೊದಲು ನವಂಬರ್ 8 ರಂದು ಕೊಲ್ಕತಾದಿಂದ ಬಂದು ಜಮ್ಮುವಿನಿಂದ ಎರಡನೇ ಹಾಗೂ ಮೂರನೇ ಜಾಥಾಗಳು ಹೊರಟವು.

ಕೊಲ್ಕತಾದಲ್ಲಿ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಜಾತಾಕ್ಕೆ ಹಸಿರು ನಿಶಾನೆ ತೋರಿದರು. ರಾಜ್ಯ ರೈತಸಂಘ ಮತ್ತು ಕೃಷಿಕೂಲಿಕಾರರ ಸಂಘದ ಮುಖಂಡರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಇದಕ್ಕೆ ಮೊದಲು ಪಶ್ಚಿಮ ಬಂಗಾಲದ ವಿವಿಧೆಡೆಗಳಿಂದ ಉಪಜಾತಾಗಳು ಕೊಲ್ಕತಾ ಬಂದು ಸೇರಿದ್ದವು.

ಅದೇ ದಿನ ಜಮ್ಮುವಿನಿಂದ ಮೂರನೇ ಜಾತಾ ಆರಂಭವಾಯಿತು. ಈ ಉತ್ತರ ವಿಭಾಗೀಯ ಕಿಸಾನ್ ಸಂಘರ್ಷ ಜಾತಾ ಕೇಂದ್ರದ ರೈತ-ವಿರೋಧಿ ನವ ಉದಾರೀಕರಣ ಆರ್ಥಿಕ ನೀತಿ ಮತ್ತು ರಾಜ್ಯ ಸರಕಾರದ ರೈತದ್ರೋಹೀ ನೀತಿಯನ್ನು ಜನರ ಮುಂದೆ ಬಹಿರಂಗ ಪಡಿಸುತ್ತ ಸಾಗಿದೆ.

ಎಐಕೆಎಸ್ ಅಧ್ಯಕ್ಷ ಅಮ್ರ ರಾಮ್ ಅವರು ಉದ್ಘಾಟನಾ ರ‍್ಯಾಲಿಯನ್ನುದ್ದೇಶಿಸಿ ಮಾತಾಡಿದರು. ಕೆಂಬಾವುಟ ಹಿಡಿದಿದ್ದ ರೈತರು ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ಮೇಲೆ ಹೇರಿರುವ ಸಂಕಟಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.

ಪುಟ 14 ನೋಡಿ

ಎನ್‌ಡಿಟಿವಿ ಮೇಲೆ ನಿಷೇಧ: ಮಾಧ್ಯಮಗಳ ಬಾಯಿ ಮುಚ್ಚಿಸುವ ನಗ್ನ ಕ್ರಮ-ಸಿಪಿಐ(ಎಂ)

ಕೇಂದ್ರ ಸರಕಾರ ಎನ್‌ಡಿಟಿವಿ ಇಂಡಿಯಾ ವಾಹಿನಿ ಪಠಾಣಕೋಟ್ ಉಗ್ರಗಾಮಿ ದಾಳಿಯ ಸಮದರ್ಭದಲ್ಲಿ ದವಿಶದ ಭದ್ರತೆಗೆ ಕುಂದು ತರುವ ಕಾರ್ಯಕ್ರಮ ಪ್ರಸಾರ ಮಾಡಿದೆ ಎಂದು ಆಪಾದಿಸಿ ಅದು ಒಂದು ದಿನ, ನವಂಬರ್ 9ರಂದು ಪ್ರಸಾರ ಮಾಡುವಂತಿಲ್ಲ ಎಂಬ ನಿಷೇಧ ಹಾಕಿತು. ಇದು ಮಾಧ್ಯಮ ಸ್ವಾತಂತ್ರ್ಯದ ನಗ್ನ ದಾಳಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಷೇಧಿಸುವ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಮೋದಿ ಸರಕಾರದ ಹೆಚ್ಚುತ್ತಿರುವ ಸರ್ವಾಧಿಕಾರಿ ಪ್ರವೃತ್ತಿಯನ್ನು ಇದು ಪ್ರದರ್ಶಿಸುತ್ತಿದೆವಿ ಎಂದು ಅದು ಹೇಳಿದೆ. ಈ ನಿಷೇಧವನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಮತ್ತು ಇನ್ನು ಮುಂದೆ ಇಂತಹ ಸ್ವೇಚ್ಛಾಚಾರದ ಕ್ರಮಗಳನ್ನು ಕೈಗೊಳ್ಳುವದಿಲ್ಲ ಎಂಬ ಭರವಸೆ ನೀಡಬೇಕು ಎಂದು ಆಗ್ರಹಿಸಿದೆ.

ಕೇಂದ್ರ ಸರಕಾರದ ಈಕ್ರಮಕ್ಕೆ ಎಲ್ಲಡೆಗಳಿಂದ ತೀವ್ರ ಪ್ರತಿಭಟನೆ ಬಂದಿದೆ. ಸಂಪಾದಕರುಗಳ ಸಂಘಟನೆ ಎಡಿಟರ್ಸ್ ಗಿಲ್ಡ್ ಇದು ಪತ್ರಿಕಾ ಸ್ವಾತಂತ್ರ್ಯದ ನೇರ ಉಲ್ಲಂಘನೆ ಎಂದು ಖಂಡಿಸುತ್ತ ಇದನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿತು.

ಸರಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳು ಪ್ರಯತ್ನಿಸಿದರೂ, ವ್ಯಾಪಕ ಪ್ರತಿಭಟನೆ ಕಂಡು ಈ ಕ್ರಮವನ್ನು ಸದ್ಯಕ್ಕೆ ತಡೆಹಿಡಿದಿರುವುದಾಗಿ ಹೇಳಿದೆ.

ಛತ್ತೀಸ್‌ಗಡದಲ್ಲಿ ಸರ್ವಾಧಿಕಾರಶಾಹಿ ದಾಳಿ: ಸುಳ್ಳು ಕೇಸುಗಳ ವಿರುದ್ಧ ಪ್ರತಿಭಟನೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಛತ್ತಿಸ್‌ಗಡ ಸರಕಾರ ಬಸ್ತಾರ್ ಬುಡಕಟ್ಟು ಪ್ರದೇಶದಲ್ಲಿ ನವಂಬರ್ 4ರಂದು ನಡೆದ ಒಂದು ಕೊಲೆಯ ಸುಳ್ಳು ಆಪಾದನೆಯನ್ನು ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರೊ. ಅರ್ಚನಾ ಪ್ರಸಾದ್, ದಿಲ್ಲಿ ವಿವಿಯ ಪ್ರೊ. ನಂದಿನಿ ಸುಂದರ್, ದಿಲ್ಲಿಯ ಜೋಶಿ ಅಧಿಕಾರಿ ಸಂಶೋಧನಾ ಸಂಸ್ಥೆಯ ವಿನೀತ್ ತಿವಾರಿ ಮತ್ತು ಸಿಪಿಐ(ಎಂ) ಛತ್ತಿಸ್‌ಗಡ ರಾಜ್ಯ ಕಾರ್ಯದರ್ಶಿ ಸಂಜಯ್ ಪರಾಟೆಯವರ ಮೇಲೆ ದಾಖಲಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಸೆಕ್ಷನ್ 302, 120ಬಿ, 147,148,149,452 ಮುಂತಾದವುಗಳ ಅಡಿಯಲ್ಲಿ ಎಫ್‌ಐಆರ್ ಹಾಕಲಾಗಿದೆ.

ಬಸ್ತಾರ್ ಪ್ರದೇಶದಲ್ಲಿ ಬುಡಕಟ್ಟು ಜನಗಳ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ವರದಿಗಳು ಬರುತ್ತಿರುವ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಈ ಮೇಲಿನವರಿದ್ದ ಒಂದು ತಂಡ ಮೇ 12ರಿಂದ 16 ವರೆಗೆ ಈ ಪ್ರದೇಶಕ್ಕೆ ಭೇಟಿ ನೀಡಿತ್ತು. ಆಗಲೂ ಜಿಲ್ಲಾ ಆಡಳಿತ ಒಂದು ಸುಳ್ಳು ದೂರನ್ನು ಬರೆಸಿಕೊಂಡು ಇವರನ್ನು ಸುಳ್ಳು ಕೇಸಿನಲ್ಲಿ ಸಿಗಿಸಲು ಸರ್ವ ಪ್ರಯತ್ನ ನಡೆಸಿತ್ತು.

ಸಿಪಿಐ(ಎಂ) ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿಗಳು ಆಗ ಕಾನೂನುಬದ್ಧದ ರಾಜಕೀಯ ಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ಮತ್ತು ಛತ್ತಿಸ್‌ಗಡ ಜನತೆಯ ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಬೇಕು ಎಂದು ರಾಜ್ಯ ಮುಖ್ಯಮಂತ್ರಿ ಹಾಗೂ ಕೇಂದ್ರ ಗೃಹಮಂತ್ರಿಗಳಿಗೆ ಪತ್ರ ಬರೆದಿದ್ದರು.

ಈ ಹಿನ್ನೆಲೆಯಲ್ಲಿ ಈ ವಾರವಷ್ಟೆ ನಡೆದ ಕೊಲೆಯ ಆಪಾದನೆಯ ಮೇಲೆ ಆರು ತಿಂಗಳ ಹಿಂದೆ ಅಲ್ಲಿಗೆ ಭೇಟಿ ನೀಡಿದ್ದವರ ಮೇಲೆ ಸುಳ್ಳು ಕೇಸ್ ಸೃಷ್ಟಿಸಿರುವುದು ಪ್ರಜಾಸತ್ತಾತ್ಮಕ ರಾಜಕೀಯದ ಮೇಲೊಂದು ನೇರವಾದ ಪ್ರಹಾರ, ರಾಜ್ಯದಲ್ಲಿ ಸರ್ವಾಧಿಕಾರಶಾಹಿತ್ವ ಪ್ರವೃತ್ತಿ ಹೆಚ್ಚುತ್ತಿರುವುದನ್ನು

ಪುಟ 14 ನೋಡಿ

> *ಮಾತೆಂದರೆ ಇದು*
>
> "ಹಣದ ರಾಶಿ ಒಟ್ಟಿಕೊಳ್ಳುವುದರಿಂದ ಲಾಭ ಉಂಟಾಗುವುದಿಲ್ಲ, ಹಣವನ್ನು ಪ್ರಸರಣದಲ್ಲಿ ತೊಡಗಿಸುವುದರಲ್ಲಿ ಲಾಭವಿದೆ. ಜಿಪುಣರು ಮೊದಲನೆಯದನ್ನು ಮಾಡುತ್ತಾರೆ, ಬಂಡವಾಳಗಾರರು ಎರಡನೆಯದನ್ನು ಆಯ್ದುಕೊಳ್ಳುತ್ತಾರೆ. ಕಾಳ ಧಂಧೆಯಲ್ಲಿ ಬಂಡವಾಳಗಾರರು ತೊಡಗುತ್ತಾರೆಯೇ ವಿನಾ ಜಿಪುಣರಲ್ಲ. ಆದ್ದರಿಂದ ಕಪ್ಪು ಹಣವೂ ದಾಸ್ತಾನು ರೂಪದಲ್ಲಿ ಇರುವುದಿಲ್ಲ."
>
> ~ ಕಾರ್ಲ್ ಮಾರ್ಕ್ಸ್

ದಿಲ್ಲಿ ಪೋಲೀಸರ ವಿರುದ್ಧ ಕ್ರಮ ಕೈಗೊಳ್ಳಿ: ಸಿಪಿಐ(ಎಂ)ಪೊಲಿಟ್‌ಬ್ಯುರೊ ಆಗ್ರಹ



ಜವಹರಲಾಲ್ ನೆಹರೂ ವಿಶ್ವದ್ಯಾಲಯದಲ್ಲಿ ಬಯೋಟೆಕ್ನಾಲಜಿ ಸ್ನಾತಕೋತ್ತರ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿ ನಜೀಬ್ ಎಬಿವಿಪಿ ಉಪಟಳದ ನಂತರ ಕಾಣೆಯಾಗಿ ತಿಂಗಳಾಗುತ್ತ ಬಂದರೂ ಆತನನ್ನು ಪತ್ತೆ ಹಚ್ಚಲು ವಿಫಲರಾಗಿರುವ ದಿಲ್ಲಿ ಪೊಲೀಸರು ಅದನ್ನು ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳನ್ನು ಎಳೆದಾಡಿದ್ದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿನಿಯರನ್ನೂ ಮತ್ತು ಮಗನ ಪತ್ತೆಯಾಗದ ನೋವಿನಿಂದ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನಜೀಬ್ ತಾಯಿಯನ್ನು ಕೂಡ ರಸ್ತೆಯ ವರೆಗೆ ಎಳೆದೊಯ್ದು ಬಂಧಿಸಿದ ಘಟನೆ ವರದಿಯಾಗಿದೆ. ಈ ಪೋಲೀಸರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ದಿಲ್ಲಿ ಪೋಲೀಸ್ ನೇರವಾಗಿ ಕೇಂದ್ರ ಸರಕಾರದ ಅಡಿಯಲ್ಲಿದ್ದಾರೆ. ಪೋಲೀಸ್ ಆಯುಕ್ತರು ಕಾಣೆಯಾದ ವಿದ್ಯಾರ್ಥಿಯ ಬಗ್ಗೆ ಕ್ರಿಮಿನಲ್ ನಿರ್ಲಕ್ಷ್ಯ ತೋರಿದ್ದಾರೆ. ಇಂತಹ ಘಟನೆಗಳು ನಡೆವಾಗ ಕೇಂದ್ರ ಗೃಹ ಮಂತ್ರಿಗಳು ರಾಜಧಾನಿಯಲ್ಲಿ ಮೌನವಾಗಿ ಕೂತಿದ್ದಾರೆ. ಅವರು ತಕ್ಷಣ ಮಧ್ಯಪ್ರವೇಶಿಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಭೂಮಿ–ಮನೆ–ನಿವೇಶನಕ್ಕಾಗಿ ನ.18ರ ಜೈಲು–ಭರೋದತ್ತ ಮುನ್ನಡೆಯೋಣ!

ಸಂಪಾದಕೀಯ

ಭಾರತದಲ್ಲಿ ಕೃಷಿ ಮೇಲೆ ಆಧಾರಿತರಾದ– ರೈತರು, ಕೃಷಿ ಕೂಲಿಕಾರರು – ಎಲ್ಲಾರಿಗೂ ಭೂಮಿಯ ಪ್ರಶ್ನೆ ಜೀವನ–ಮರಣದ ಪ್ರಶ್ನೆಯಾಗಿದೆ. ಭಾರತದ ಎಲ್ಲಾ ದುಡಿಯುವ ಜನರಿಗೆ (ಮಧ್ಯಮ ವರ್ಗದವರೂ ಸೇರಿದಂತೆ) ನಗರಗಳಲ್ಲೂ ಗ್ರಾಮೀಣ ಪ್ರದೇಶದಲ್ಲೂ ಮನೆ–ನಿವೇಶನದ ಸಮಸ್ಯೆ ಅಷ್ಟೇ ತೀವ್ರವಾಗಿದೆ.

ಪ್ರತಿ 26 ನಿಮಿಷಕ್ಕೊಬ್ಬ ರೈತ ಆತ್ಮಹತ್ಯೆಗೆ ಕಾರಣವಾಗುವ ಇಂದಿನ ಕೃಷಿ ಬಿಕ್ಕಟ್ಟಿಗೆ ಕಳೆದ 25 ವರ್ಷಗಳ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೃಷಿ ನೀತಿಗಳೇ ಕಾರಣ. ಅವು ರೈತ ಕೃಷಿ ಕೂಲಿಕಾರರನ್ನು ಹಳ್ಳಿ ಮತ್ತು ಕೃಷಿಯಿಂದ ಆಚೆಗೆ ದೂಡಿ, ಕೃಷಿಯನ್ನು ದೇಶಿ–ವಿದೇಶಿ ಕಂಪನಿಗಳಿಗೆ ವಹಿಸಿಕೊಡುವ ಉದ್ದೇಶ ಹೊಂದಿವೆ.

ಈ ನೀತಿಗಳು 1990ರ ದಶಕದಿಂದ ಹಂತಹಂತವಾಗಿ ರೈತ–ಆಧಾರಿತ ಕೃಷಿಯ (ಕೃಷಿಗೆ ಆವಶ್ಯಕವಾದ ಬೀಜ, ಗೊಬ್ಬರ, ಕೀಟನಾಶಕ, ನೀರು, ವಿದ್ಯುತ್ ಬೆಲೆ ಏರಿಸುವ ಮೂಲಕ) ಉತ್ಪಾದನಾ ವೆಚ್ಚವನ್ನು ಗಂಭೀರವಾಗಿ ಹೆಚ್ಚಿಸಿವೆ. ಕಡಿಮೆ ಬಡ್ಡಿಯ ಸಾರ್ವಜನಿಕ ಸಂಸ್ಥೆಯ ಸಾಲ ಸಿಗದಂತೆ ಮಾಡಿವೆ. ಅಗ್ಗ ದರದ ವಿದೇಶಿ ಕೃಷಿ ಉತ್ಪನ್ನಗಳ ಆಮದಿನಿಂದ ಮತ್ತು ಕನಿಷ್ಠ ಬೆಂಬಲ ಬೆಲೆಯನ್ನು ದುರುದ್ದೇಶ ಪೂರ್ವಕವಾಗಿ ಖರ್ಚಿಗಿಂತ ಕಡಿಮೆ ನಿಗದಿಸಿ, ಕಟಾವು ಸಮಯದಲ್ಲಿ ಲಾಭದಾಯಕ ಬೆಲೆ ಸಿಗದಂತೆ ಮಾಡಿವೆ. ದೊಡ್ಡ ಸಂಖ್ಯೆಯಲ್ಲಿ ರೈತರನ್ನು ಆತ್ಮಹತ್ಯೆಗಳಿಗೆ ತಳ್ಳಲಾಗಿದೆ. ಇದರಿಂದಾಗಿ ಸಣ್ಣ, ಬಡ, ಮಧ್ಯಮ ರೈತರೂ ಭೂಮಿಯನ್ನು ಗುತ್ತಿಗೆಗೆ ಕೊಟ್ಟು ಅಥವಾ ಮಾರಾಟ ಮಾಡಿ ಕೃಷಿ ತೊರೆಯುವ ಸ್ಥಿತಿ ಬಂದಿದೆ.

ಸಾಲಬಾಧಿತರಿಂದ ಭೂಮಾಲಕ ಬಂಡವಾಳದಾರರ ಕೈಗೆ ಕೃಷಿ ಭೂಮಿಗಳ ವ್ಯಾಪಕ ಕೇಂದ್ರೀಕರಣಕ್ಕೆ ಮರಳಿ ಅವಕಾಶ ನೀಡಲಾಗಿದೆ. ಇದಕ್ಕಾಗಿ ವ್ಯಾಪಕವಾಗಿ ಭೂಮಿಯನ್ನು ಹೊಂದಲು ಭೂ ಸುಧಾರಣೆ ಕಾನೂನುಗಳಿಗೆ ತಿದ್ದುಪಡಿಯನ್ನು ಮಾಡಲಾಗಿದೆ. ಗ್ರಾಮೀಣ ಪ್ರದೇಶ ಹಾಗೂ ವ್ಯವಸಾಯದಲ್ಲಿ ಆಧುನೀಕರಣವು ನುಸುಳಿ ಉದ್ಯೋಗಾವಕಾಶಗಳನ್ನು ವ್ಯಾಪಕವಾಗಿ ಕಡಿತಗೊಳಿಸಿ ನಗರಗಳಿಗೆ ವಲಸೆಯನ್ನು ಹೆಚ್ಚಿಸಿದೆ. ಬೇಸಾಯದಲ್ಲಿ ತೊಡಗಲು ಇಚ್ಚಿಸಿರುವ ದಲಿತರಿಗೆ ಭೂಮಿ ನೀಡಿಕೆಯನ್ನು ನಿರಾಕರಿಸಲಾಗುತ್ತಿದೆ. ಹಲವು ದಶಕಗಳಿಂದ ಸರಕಾರದ ನೆರವು ಪಡೆಯದೇ ಸ್ವಂತ ಕುಟುಂಬದ ಶ್ರಮ ಹಾಗೂ ದುಬಾರಿ ಬಡ್ಡಿ ಸಾಲದ ಬಂಡವಾಳ ವ್ಯಯಿಸಿ ಅಭಿವೃದ್ಧಿ ಪಡಿಸಿದ ಮಿಲಿಯಾಂತರ ಹೆಕ್ಟಾರ್ ಸರಕಾರಿ ಜಮೀನಿನ ಬಡ ಉಳುಮೆದಾರರಿಗೆ ಹಕ್ಕು ಪತ್ರ ನೀಡಿ ಬೆನ್ನು ತಟ್ಟುವ ಬದಲು ಭೂಗಳ್ಳರೆಂಬ ಹಣೆಪಟ್ಟಿ ನೀಡಿ ಒಕ್ಕಲೆಬ್ಬಿಸಲು ಕ್ರಮವಹಿಸಲಾಗಿದೆ. ಅರಣ್ಯ ಅಥವಾ ಅಂಚಿನ ಪ್ರದೇಶಗಳಲ್ಲಿ ವಾಸಿಸುವ ಭಾಗಶಃ ಕೃಷಿ ಭಾಗಶಃ ಅರಣ್ಯ ಉತ್ಪನ್ನ ಅಥವಾ ಅದರ ಆಧಾರಿತ ಕೈಕಸುಬುಗಳಿಂದ ಜೀವನಸಾಗಿಸುತ್ತಿರುವ ಆದಿವಾಸಿಗಳನ್ನು ಅರಣ್ಯ ಪ್ರಾಕೃತಿಕ ರಕ್ಷಣೆಯ ಹೆಸರಲ್ಲಿ ಅವರ ಭೂಮಿ–ಮನೆಗಳಿಂದ ಓಡಿಸಲಾಗುತ್ತಿದೆ.

ವಿಶೇಷ ಕೈಗಾರಿಕಾವಲಯಗಳಂತೆಯೇ ವಿಶೇಷ ಕೃಷಿವಲಯಗಳನ್ನು ರಚಿಸಲು ಕ್ರಮವಹಿಸಲಾಗುತ್ತದೆ. ಇದಕ್ಕೂ ಮತ್ತು ಮೂಲ ಸೌಕರ್ಯಕ್ಕೆ ಕೋಟ್ಯಾಂತರ ಎಕರೆ ಜಮೀನಿನ ಬಲವಂತದ ಸ್ವಾಧೀನವನ್ನು ಪ್ರಗತಿಯಲ್ಲಿಡಲಾಗಿದೆ. ಇದಕ್ಕಾಗಿ ಭೂಸ್ವಾಧೀನ ಕಾಯ್ದೆಗಳನ್ನು ತಿದ್ದುಪಡಿಗೊಳಪಡಿಸಲಾಗಿದೆ. ಕಂಪೆನಿ ಕೃಷಿಯನ್ನು ಬಲಪಡಿಸಲು, ಕಂಪೆನಿಗಳಿಗೆ ಗುತ್ತಿಗೆ ಆಧಾರದಲ್ಲಿ ಸಾವಿರಾರು ಹೆಕ್ಟಾರ್ ಪ್ರದೇಶದ ಕೃಷಿ ಭೂಮಿ ಸಿಗುವಂತೆ ಕ್ರಮವಹಿಸಲಾಗುತ್ತಿದೆ.


ಇದೆಲ್ಲವೂ ದೇಶದ ಕೊಂಡುಕೊಳ್ಳುವ ಶಕ್ತಿಯನ್ನು ಒಂದೆಡೆ ವ್ಯಾಪಕವಾಗಿ ಕಡಿತಗೊಳಿಸಿದರೇ, ಮತ್ತೊಂದೆಡೆ ವಿದೇಶಿ ಉತ್ಪನ್ನಗಳ ಹಾವಳಿಯಿಂದ ಕೈಗಾರಿಕಾ ಬಿಕ್ಕಟ್ಟನ್ನು ಹೆಚ್ಚಿಸುವ ಮೂಲಕ ಕಾರ್ಮಿಕರನ್ನು ಬೀದಿಗೆ ತಳ್ಳುತ್ತಿದೆ. ಹೊಸ ಉದ್ಯೋಗಗಳು ದೊರೆಯುವುದರ ಬದಲಿಗೆ ಇರುವ ಉದ್ಯೋಗಗಳು ಮಾಯವಾಗುತ್ತಿವೆ. ನಿರುದ್ಯೋಗ ಹಲವು ಪಟ್ಟು ಬೆಳೆದಿದೆ. ಗ್ರಾಮೀಣ ವಲಸೆಯು ಕಡಿಮೆ ಕೂಲಿಯ ಮಾರುಕಟ್ಟೆಯನ್ನು ಬೆಳೆಸಿದೆ. ಇದೆಲ್ಲವೂ ಕಾರ್ಮಿಕರ ಉದ್ಯೋಗದ ಭದ್ರತೆಗೆ ಧಕ್ಕೆಯನ್ನುಂಟು ಮಾಡುತ್ತಿದೆ. ಇದೇ ಸಂದರ್ಭದಲ್ಲಿ ಕಾರ್ಮಿಕರ ನಡುವೆ ಖಾಯಂ ಹಾಗೂ ಗುತ್ತಿಗೆ ಮತ್ತು ಗೌರವ ವೇತನದ ಕೆಲಸಗಾರರನ್ನು ನಿರ್ಮಿಸಿ, ಕಾರ್ಮಿಕ ವರ್ಗವನ್ನು ಆತಂಕದಲ್ಲಿಟ್ಟು ಒಡೆದಾಳಲಾಗುತ್ತಿದೆ.

ಈ ಎಲ್ಲವೂ ಹಸಿವಿನ ಹಾಗೂ ಅಪೌಷ್ಠಿಕತೆಯ ಸಾವುಗಳನ್ನು ಹೆಚ್ಚಿಸಿದೆ. ಅದೇ ರೀತಿ, ಬಡವರು, ದಲಿತರ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ವ್ಯಾಪಕಗೊಳಿಸಿದೆ.

ಒಂದೆಡೆ ಉದ್ಯೋಗವಿಲ್ಲ ಇನ್ನೊಂದೆಡೆ ವ್ಯಾಪಕವಾದ ಬೆಲೆಏರಿಕೆ, ಕೂಲಿಯ ಇಳಿತ ನಿವೇಶನ ಮತ್ತು ವಸತಿಯನ್ನು ಕೊಳ್ಳಲಾಗದ ಸ್ಥಿತಿಯು ಮತ್ತು ಅದೇ ರೀತಿ, ರೈತ ಹಾಗೂ ಕೂಲಿಕಾರರ ಪರವಾದ ಬೇಸಾಯ ಮತ್ತು ಭೂಮಿಯಲ್ಲಿ ಹಿತಾಸಕ್ತಿ ಹೊಂದಿದ ದಲಿತರು ಮತ್ತಿತರ ಒತ್ತಾಸೆಯು ಒಟ್ಟಾರೆ, ಬಡವರ ಪರವಾದ ಭೂಮಿಯ ಪ್ರಶ್ನೆಯನ್ನು ಕರ್ನಾಟಕದಲ್ಲಿ ಮರಳಿ ಮುನ್ನೆಲೆಗೆ ತಂದಿದೆ.

ಈ ಹಿನ್ನೆಲೆಯಲ್ಲಿ, ಉಳುವ ಬಡವರಿಗೆ ಭೂಮಿ ಒದಗಿಸುವಂತೆ, ಕಂಪೆನಿ ಕೃಷಿಯನ್ನು ಹಾಗೂ ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ, ಸರಕಾರಿ ಜಮೀನಿನಲ್ಲಿ ಸಾಗುವಳಿದಾರರನ್ನು ಭೂಗಳ್ಳರೆಂದು ವಿಶೇಷ ನ್ಯಾಯಾಲಯಕ್ಕೆಳೆಯುವುದನ್ನು ವಿರೋಧಿಸಿ ಹಾಗು ಅವರಿಗೆ ಹಕ್ಕುಪತ್ರಕ್ಕಾಗಿ, ಭೂಮಿಯಲ್ಲಿ ಹಿತಾಸಕ್ತಿಹೊಂದಿರುವ ದಲಿತಕುಟುಂಬಗಳಿಗೆ ಭೂಮಿ ನೀಡುವಂತೆ ಪ್ರಗತಿಪರ ಭೂ ಸುಧಾರಣೆಗಾಗಿ, ರಾಜ್ಯದ ಎಲ್ಲಾ ಬಡವರಿಗೆ ಬದುಕು ಕಟ್ಟಿಕೊಡುವ ಉಚಿತ ಹಿತ್ತಲು ಮತ್ತು ನಿವೇಶನ ಸಹಿತ ವಸತಿಗಾಗಿ ಒತ್ತಾಯಿಸಿ, ನಗರ ಪ್ರದೇಶಗಳಲ್ಲಿ ಮನೆ ಇಲ್ಲದವರಿಗೆ ಮನೆ ಅಥವಾ ನಿವೇಶನ ಕೊಡಲು ಒತ್ತಾಯಿಸಿ ಐಕ್ಯ ಚಳುವಳಿಯ ಅಗತ್ಯವಿದೆ.

ಭೂಮಿ–ಮನೆ–ನಿವೇಶನದ ಹಕ್ಕು ರೈತರು, ಕೃಷಿ ಕೂಲಿಕಾರರು, ದಲಿತರು, ಆದಿವಾಸಿಗಳು, ಬಗರ್ ಹುಕುಂ ಸಾಗುವಳಿದಾರರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಇವರೆಲ್ಲರಿಗೂ ಜೀವನ–ಮರಣಗಳ ಪ್ರಶ್ನೆಯಾಗಿದೆ. ಇದರಿಂದಾಗಿಯೇ ಈ ಎಲ್ಲಾ ಜನವಿಭಾಗಗಳ – ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಕೃಷಿ ಕೂಲಿಕಾರರ ಸಂಘ, ಸಿ.ಐ.ಟಿ.ಯು., ಎಸ್.ಎಫ್.ಐ., ಡಿ.ವೈ.ಎಫ್.ಐ., ಜನವಾದಿ ಮಹಿಳಾ ಸಂಘಟನೆ ಇತ್ಯಾದಿ – ಸುಮಾರು 15 ಸಾಮೂಹಿಕ ಸಂಘಟನೆಗಳು ನವೆಂಬರ್ 18 ರಂದು ರಾಜ್ಯವ್ಯಾಪಿ ಜೈಲುಭರೋ ಯೋಜಿಸಿವೆ. ಜಿಲ್ಲೆ ಮತ್ತು ತಾಲೂಕಾಗಳಲ್ಲಿ ಸಭೆ–ಸಮಾವೇಶಗಳು, ಪ್ರಚಾರಾಂದೋಲನಗಳು, ಜಾಥಾಗಳು ನಡೆಯುತ್ತಿವೆ. ರಾಜ್ಯದಾದ್ಯಂತ ಎಲ್ಲಾ ತಾಲೂಕಾ ಕೇಂದ್ರಗಳಲ್ಲಿ ಸಾವಿರಾರು ಜನರನ್ನು ಅಣಿ ನೆರೆಸಲಾಗುತ್ತಿದೆ. ಒಂದು ಲಕ್ಷ ಜನರನ್ನು ಹೋರಾಟದಲ್ಲಿ ತೊಡಗಿಸುವ ಮತ್ತು ನ.18ರಂದು ಸುಮಾರು 10 ಸಾವಿರ ಜನರನ್ನು ಜೈಲು ತುಂಬುವ ಚಳುವಳಿಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.



ನವೆಂಬರ್ 18 ರಂದು ರಾಜ್ಯವ್ಯಾಪಿ ಜೈಲುಭರೋ ದತ್ತ ಮುನ್ನಡೆಯೋಣ!

ದೇಶ ಹಾಗೂ ರಾಜ್ಯದಲ್ಲಿ ವ್ಯವಸಾಯ ಮತ್ತು ಭೂಮಿಯ ಪ್ರಶ್ನೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಬದಲಾಯಿಸಲು, ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಡೆಗೆ ತೀವ್ರ ಪ್ರತಿರೋಧ ಒಡ್ಡೋಣ!

ಭೂಮಿಯ ಪ್ರಶ್ನೆಯನ್ನು ಬಡವರು, ಉಳುವವರು ಮತ್ತು ದಲಿತರ ಪರವಾಗಿ ಇತ್ಯರ್ಥ ಪಡಿಸುವತ್ತ ಮುನ್ನಡೆಯೋಣ!

ನ.7-16 : ಬಸವಕಲ್ಯಾಣದಿಂದ ಬೆಳಗಾವಿ ವರೆಗೆ

ಕಿಸಾನ್ ಸಂಘರ್ಷ ಜಾಥಾದ ಉಪ ಜಾಥಾ

ರೈತರ ಸಾಲ ಮನ್ನಾ, ರೈತ ಕೂಲಿಕಾರರಿಗೆ ಮಾಸಿಕ ರೂ. 3,000 ಪಿಂಚಣಿಗಾಗಿ, ರೈತರ ಬೆಳೆಗೆ ಡಾ॥ಎಂ.ಎಸ್.ಸ್ವಾಮಿನಾಥನ್ ವರದಿಯಂತೆ ಬೆಲೆ ನಿಗದಿಗೊಳಿಸಲು, ಬಹುರಾಷ್ಟ್ರೀಯ ಸಂಸ್ಥೆಗಳ ಕಂಪನಿ ಕೃಷಿಯನ್ನು ವಿರೋಧಿಸಿ, ರೈತರು, ಕೃಷಿಕೂಲಿಕಾರರ ಆಧಾರಿತ ಕೃಷಿಯ ಸಂರಕ್ಷಣೆಗಾಗಿ ಹಕ್ಕುಪತ್ರಕ್ಕಾಗಿ, ಮನೆ, ನಿವೇಶನ ಮಂಜೂರಾತಿಗಾಗಿ ಇನ್ನಿತರ ರೈತಪರ ಬೇಡಿಕೆಗಳನ್ನು ಒಳಗೊಂಡ ಅಖಿಲ ಭಾರತ ಮಟ್ಟದಲ್ಲಿ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಜಾಥಾದ ಅಂಗವಾಗಿ ನವೆಂಬರ್ 07ರಿಂದ 16ರವರೆಗೆ ಬಸವಕಲ್ಯಾಣದಿಂದ ಬೆಳಗಾವಿ ವರೆಗೆ ರಾಜ್ಯ ಮಟ್ಟದ ಉಪಜಾಥಾವನ್ನು ಹಮ್ಮಿಕೊಳ್ಳಲಾಗಿದೆ.

ಇದರ ಅಂಗವಾಗಿ ನವೆಂಬರ್ 7ರಂದು ಬಸವಕಲ್ಯಾಣದ ಪೂಜ್ಯ ಶ್ರೀ ಸಿದ್ದರಾಮ ಬೆಲ್ದಾಳ ಶರಣರು ಉದ್ಘಾಟಿಸುವ ಮೂಲಕ ಚಾಲನೆ ನೀಡಿದರು.



ಉದ್ಘಾಟನಾ ಸಮಾರಂಭದಲ್ಲಿ ಕೆಪಿಆರ್‌ಎಸ್ ರಾಜ್ಯಾಧ್ಯಕ್ಷರಾದ ಕಾಂ॥ಮಾರುತಿ ಮಾನ್ಪಡೆ, ಧಾರವಾಡ ಜಿಲ್ಲಾಧ್ಯಕ್ಷರಾದ ಕಾ. ಬಿ.ಎಸ್.ಸೊಪ್ಪಿನ್, ಸಿಐಟಿಯು ಬೀದರ್ ಜಿಲ್ಲಾಧ್ಯಕ್ಷರಾದ ಕಾ. ಶ್ರೀದೇವಿ ಚಿವಡೆ, ಮುಖಂಡರಾದ ಭುಜಂಗರಾವ್, ರುದ್ರಮುನಿಸ್ವಾಮಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಬಸವಕಲ್ಯಾಣದಿಂದ ಹೊರಟ ಜಾಥಾವು ಹುಮನಾಬಾದ್‌ನಲ್ಲಿ ರೈತರು ಸ್ವಾಗತಿಸಿದರು. ರಾಜ್ಯ ಮುಖಂಡರಲ್ಲದೇ ಅಂಗನವಾಡಿ ನೌಕರರ ಸಂಘದ ಶ್ರೀಮತಿ ಸುಮಿತ್ರಾ, ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಪೂಜಾರ್, ಗದಗ ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಮಹೇಶ ಹಿರೇಮಠ, ಗ್ರಾಮ ಪಂಚಾಯತಿ ನೌಕರರ ಸಂಘದ ಮುಖಂಡರಾದ ಅಬ್ರಹಾಂ, ರೈತ ಮುಖಂಡರಾದ ಮಲ್ಲಪ್ಪ, ಶಿವಪ್ಪ ಸೇರಿದಂತೆ ಇತರರು ಹಾಜರಿದ್ದರು.

ಅಲ್ಲಿಂದ ಮುಂದೆ ಸಾಗಿದ ಜಾಥಾವು ಚಾಂಗಲೇರ ಪ್ರದೇಶಲ್ಲಿ ಬಂದಿತು. ದಲಿತ ಕಾಲೋನಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾರುತಿ ಮಾನ್ಪಡೆ, ಬಿ.ಎಸ್.ಸೊಪ್ಪಿನ್, ಮಾತನಾಡಿದರು.

ಹುಮಾನಾಬಾದ್ ಕಡೆಗೆ ಸಾಗಿದ ಜಾಥವನ್ನು ಅಲ್ಲಿಯ ರೈತ ಬಂಧುಗಳು ಸ್ವಾಗತಿಸಿದರು. ನವೆಂಬರ್ 8ರಂದು ತುಮಕುಂಟಾ ಗ್ರಾಮದಲ್ಲಿ ರೈತ ಸಂಘರ್ಷ ಜಾಥಾವನ್ನು ರೈತರು ಅಭೂತಪೂರ್ವವಾಗಿ ಸ್ವಾಗತ ಕೋರಿದರು.

ನವೆಂಬರ್ 9ರಂದು ಚಿಂಚೋಳಿ, ನವೆಂಬರ್ 10ರಂದು ಕಲಬುರಗಿ ಜಿಲ್ಲೆಯ ವಿವಿಧ ತಾಲ್ಲೂಕು, ಗ್ರಾಮಗಳಿಗೆ ಜಾಥಾ ಸಂಚರಿಸಿ ಜಾಥಾದ ಮಹತ್ವದ ಬಗ್ಗೆ ರೈತರಿಗೆ ವಿವರಿಸಲಾಯಿತು

ವರದಿ : ಬಸವರಾಜ ಪೂಜಾರ್

ಜಾತಿನಿಂದನೆ ಮಾಡಿದ ಭಜರಂಗದಳದ ಮುಖಂಡನ ಬಂಧನಕ್ಕೆ ಆಗ್ರಹ

ಸೆಪ್ಟೆಂಬರ್ 2 ರಂದು ನಡೆದ ಅಖಿಲ ಭಾರತ ಮುಷ್ಕರ ವೇಳೆ ಮೂಡಬಿದರೆ ಬಳಿ ಬೆಳುವಾಯಿ ಎಂಬಲ್ಲಿ ಸಿಪಿಐ(ಎಂ)ನ ದಲಿತ ಕಾರ್ಯಕರ್ತೆಯರಿಬ್ಬರ ಮೇಲೆ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ ಬಜರಂಗದಳದ ಮುಖಂಡ ಸೋಮನಾಥ ಕೋಟ್ಯಾನ್‌ನನ್ನು ಬಂಧಿಸುವಂತೆ ಒತ್ತಾಯಿಸಿ ಸಿಐಟಿಯು ಕಾರ್ಯಕರ್ತರು ನವಂಬರ್ 4 ರಂದು ಮೂಡಬಿದರೆ ಪೋಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಬಜರಂಗದಳದ ಮುಖಂಡ ಸೋಮನಾಥ ಕೋಟ್ಯಾನ್ ದಲಿತ ಮಹಿಳೆಯರ ಮೇಲೆ ಹಲ್ಲೆ ನಡೆಸಿದ್ದಲ್ಲದೆ ಅಸಭ್ಯವಾಗಿ ವರ್ತಿಸಿದ್ದಾನೆ. ಆತನ ವಿರುದ್ಧ ಪೋಲೀಸು ಠಾಣೆಯಲ್ಲಿ ದೂರು ದಾಖಲಾದರೂ, ಪೋಲೀಸರು ಆರೋಪಿಯನ್ನು ಬಂಧಿಸದೆ ರಾಜಾರೋಷವಾಗಿ ತಿರುಗಾಡಲು ಬಿಟ್ಟಿದ್ದಾರೆ. ಆದರೆ ಆತನು ನೀಡಿದ ದೂರಿನ ಮೇಲೆ ಸಿಐಟಿಯು ಕಾರ್ಯಕರ್ತರ ತನಿಖೆ ನಡೆಸಿದ್ದಾರೆ. ಪೋಲಿಸರು ಈ ರೀತಿ ಪಕ್ಷಪಾತ ತೋರುವ ಮೂಲಕ ಬಜರಂಗದಳದ ಗೂಂಡಾ ಪ್ರವೃತ್ತಿಗೆ ಸಹಕಾರ ನೀಡುವುದನ್ನು ನಿಲ್ಲಿಸಬೇಕು ಮತ್ತು ಸೋಮನಾಥ ಕೋಟ್ಯಾನ್‌ನನ್ನು ಬಂಧಿಸಬೇಕು ಎಂಬುದಾಗಿ ಸಿಐಟಿಯು ಮೂಡಬಿದರೆ ಘಟಕದ ಅಧ್ಯಕ್ಷೆ ರಮಣಿ ಆಗ್ರಹಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ಹಲ್ಲೆ ಪ್ರಕರಣದ ಆರೋಪಿ ಬಜರಂಗದಳದ ಸೋಮನಾಥ ಕೋಟ್ಯಾನ್‌ನನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳದಿದ್ದಲ್ಲಿ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಸಿಪಿಐ(ಎಂ) ಮೂಡಬಿದ್ರೆ ವಲಯ ಕಾರ್ಯದರ್ಶಿ ಯಾದವ ಶೆಟ್ಟಿ, ಡಿವೈಎಫ್ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ, ದಲಿತ ಹಕ್ಕುಗಳ ಸಮಿತಿ ದ.ಕ.ಜಿಲ್ಲಾ ಮುಖಂಡ ಲಿಂಗಪ್ಪ ನಂತೂರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಾಸುದೇವ್ ಉಚ್ಚಿಲ್

ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪಿಸಬೇಕೆಂದು ಸರ್ಕಾರಕ್ಕೆ ಮನವಿ

ಖಾಸಗಿ ಆಸ್ಪತ್ರೆಗಳು, ವೈದ್ಯರು ರೋಗಿಗಳಿಗೆ ದುಬಾರಿ ಶುಲ್ಕ ವಿಧಿಸುತ್ತಿದ್ದಾರೆ. ಅನಗತ್ಯ ಪರೀ-ಕ್ಷೆ, ಚಿಕಿತ್ಸೆಗಳನ್ನು ನಡೆಸುತ್ತಾರೆ. ಖಾಸಗಿ ಆಸ್ಪತ್ರೆಗಳು ಯಾವುದೇ ನಿಯಮಗಳನ್ನು ಪಾಲಿಸುತ್ತಿಲ್ಲ. ದರ ನಿಗದಿಗೆ ಸಂಬಂಧಿಸಿ ಯಾವುದೇ ಮಾನದಂಡವನ್ನು ವೈದ್ಯರಾಗಲಿ, ಆಸ್ಪತ್ರೆಗಳ ಆಡಳಿತವಾಗಲಿ ಪಾಲಿಸುತ್ತಿಲ್ಲ.

ಅದಲ್ಲದೇ ಸರಕಾರಿ ಆರೋಗ್ಯ ಸೇವೆ ಜಿಲ್ಲೆಯಲ್ಲಿ ಸಂಪೂರ್ಣ ಹದಗೆಟ್ಟಿದೆ. ಜಿಲ್ಲೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಇರಬೇಕಾದ ಪ್ರಾಥಮಿಕ ಆರೋಗ್ಯ-ಕೇಂದ್ರ, ಸಮುದಾಯ ಆಸ್ಪತ್ರೆಗಳು ಸರಾಸರಿಗಿಂತ ತೀರಾ ಕೆಳಮಟ್ಟದಲ್ಲಿದೆ. ತಾಲೂಕು, ಜಿಲ್ಲಾ ಆಸ್ಪತ್ರೆಗಳಿಗೆ ಜನ ಚಿಕಿತ್ಸೆಗೆ ತೆರಳಲು ಭಯಪಡುವಂತಾಗಿದೆ. ಐದಾರು ಜಿಲ್ಲೆಗಳ ಜನಸಾಮಾನ್ಯರ ಪಾಲಿಗೆ ಏಕೈಕ ದೊಡ್ಡಾಸ್ಪತ್ರೆ ವೆನ್ಲಾಕ್ ತುರ್ತು ಚಿಕಿತ್ಸಾ ಘಟಕ ಸಹಿತ ಮೂಲಭೂತ ಸೌಲಭ್ಯಗಳಿಲ್ಲದೆ ಬಡರೋಗಿಗಳ ಪಾಲಿಗೆ ನರಕದಂತಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವೆನ್ಲಾಕ್, ಲೇಡಿಗೋಷನ್ ಆಸ್ಪತ್ರೆಗಳನ್ನು ಬಳಸಿ ಸರಕಾರಿ ಮೆಡಿಕಲ್ ಕಾಲೇಜು ತೆರೆಯಲು ಎಲ್ಲಾ ಅವಕಾಶಗಳಿವೆ. ಈ ಹಿನ್ನೆಲೆಯಲ್ಲಿ ಸರಕಾರ ಖಾಸಗಿ ಮೆಡಿಕಲ್ ಕಾಲೇಜು ತೆರೆಯಲು ನಿರಾಸಕ್ತಿವಹಿಸಿದೆ. ಈ ಬಗ್ಗೆ ಸರ್ಕಾರ ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ಡಿವೈಎಫ್ಐ ಜಿಲ್ಲಾ ಸಮಿತಿಯು ನವೆಂಬರ್ 08ರಂದು ಮನವಿ ಸಲ್ಲಿಸಿತು.

ಅಕ್ರಮ ಮರಳುಗಾರಿಕೆ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕಾಗಿ ಮನವಿ



ಮಂಗಳೂರು ನೇತ್ರಾವತಿ ನದಿ ತೀರದ ಅಡ್ಯಾರ್, ಕಣ್ಣೂರು, ವಳಚ್ಚಿಲ್, ಉಳಿಯಕುದ್ರು, ಹರೇಕಳ, ಇನೋಳಿ ಮುಂತಾದ ನದಿ ದಂಡೆಗಳಲ್ಲಿ ಅಕ್ರಮ ಮರಳುಗಾರಿಕೆ ರಾಜಾರೋಷವಾಗಿ ನಡೆಯುತ್ತಿದೆ. ಅದರಲ್ಲೂ ಸರಕಾರದ ನಿಯಮವನ್ನು ಉಲ್ಲಂಘಿಸಿ ಯಂತ್ರೋಪಕರಣಗಳ ಮೂಲಕ ಮರಳುಗಾರಿಕೆ ನಡೆಸುವುದಲ್ಲದೆ, ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಮಾತ್ರ ಮರಳು ಪಟ್ಟಿಯಿಂದ ಮರಳು ತೆಗೆದು ಸಾಗಾಣಿಕೆ ಮಾಡಲು ಅವಕಾಶ ಇದ್ದರೂ ದಿನದ 24 ಗಂಟೆಯೂ ಯಥೇಚ್ಛವಾಗಿ ಮರಳುಗಾರಿಕೆ ನಡೆಸುತ್ತಿದ್ದಾರೆ.

ಇವರ ಅಕ್ರಮಗಳ ಬಗ್ಗೆ ಧ್ವನಿ ಎತ್ತುವವರ ವಿರುದ್ಧ ಹಲ್ಲೆ ಮಾಡುವಂತಹ, ಬೆದರಿಸುವಂತಹ ಕೆಲಸಗಳು ನಡೆಯುತ್ತಿವೆ. ಈ ಹಿಂದೆ ಆರ್‌ಟಿಐ ಕಾರ್ಯಕರ್ತ ಮಾಧವ ಕುಲಾಲ್ ಎಂಬವರನ್ನು ಅಕ್ರಮ ಮರಳುಗಾರಿಕೆ ನಡೆಸುವ ಗೂಂಡಾಗಳು ಕೊಲೆ ಮಾಡಿರುವುದನ್ನು ನೆನಪಿಸಬಹುದು.

ಅಕ್ರಮ ಮರಳುಗಾರಿಕೆ ವಿರುದ್ಧ ಆಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ನವೆಂಬರ್ 8ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸ್ಥಳೀಯ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಿದರೂ ಯಾವುದೇ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಇವರ ಅಕ್ರಮಗಳಿಗೆ ಸ್ಥಳೀಯ ಪೊಲೀಸರ ಸಹಕಾರವೂ ಕೂಡಾ ಇದೆ ಎಂಬ ಆರೋಪವಿದೆ.

ನಿಯೋಗದಲ್ಲಿ: ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ದಯಾನಂದ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಕೋಶಾಧಿಕಾರಿ ಜೀವನ್‌ರಾಜ್ ಕುತ್ತಾರ್, ಸಾದಿಕ್ ಕಣ್ಣೂರು, ನೌಷಾದ್ ಬಾವು, ಉಸ್ಮಾನ್ ಉಪಸ್ಥಿತರಿದ್ದರು.

ವರದಿ : ಸಂತೋಷ್ ಬಜಾಲ್

ಶಾಸಕ ಗೋಪಾಲ ಪೂಜಾರಿ ರಾಜೀನಾಮೆ ನೀಡಬೇಕು

ಉಡುಪಿ ಜಿಲ್ಲೆ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಕಾಂಗ್ರೆಸ್ ಪಕ್ಷದ ಜಿಲ್ಲಾ ಮುಖಂಡರಾದ ಗೋಪಾಲ ಪೂಜಾರಿಯವರು ಅಕ್ರಮ-ಸಕ್ರಮ ಸಮಿತಿಯ ಅಧ್ಯಕ್ಷರಾಗಿದ್ದು-ಕೊಂಡು ಸಮಿತಿಯ ಸದಸ್ಯರಿಗೆ ಅಕ್ರಮವಾಗಿ ಭೂಮಿ ಹಂಚಿಕೆಯಾಗಿದೆಯೆಂದು ಕುಂದಾಪುರ ಲೋಕಾಯುಕ್ತ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಾಗಿರುವ ಹಿನ್ನೆಲೆಯಲ್ಲಿ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಆಗ್ರಹಿಸಿದೆ.

ಸಾಮಾನ್ಯ ರೈತರು ಹಲವಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಕುಮ್ಕಿ ಮತ್ತಿತರೆ ಜಮೀನಿನ ಕುರಿತು ಅಕ್ರಮ-ಸಕ್ರಮ ಸಮಿತಿ ವಿವೇಚನೆಯಿಂದ ಸಕ್ರಮಗೊಳಿಸುವ ಕ್ರಮ ತೆಗೆದುಕೊಳ್ಳಬೇಕಾಗಿದೆ. ಹಲವಾರು ವರ್ಷಗಳ ನಂತರವೂ ಕ್ರಮತೆಗೆದುಕೊಂಡಿಲ್ಲ.

ಆದರೆ ಅಕ್ರಮ-ಸಕ್ರಮ ಸಮಿತಿಯ ಸದಸ್ಯರೊಬ್ಬರು ತನ್ನ ಹೆಂಡತಿಯ ಹೆಸರಿಗೆ ಭೂಮಿ ಮಂಜೂರು ಮಾಡಿಸಿಕೊಂಡಿರುವುದು ಮಾತ್ರವಲ್ಲದೇ ಆ ಭೂಮಿಯಲ್ಲಿ ಕೆಂಪು ಕಲ್ಲುಕೋರೆ ನಡೆಸುತ್ತಿರುವುದಾಗಿ ವರದಿಯಾಗಿದೆ. ಇದು ಸತ್ಯವಾಗಿದ್ದಲ್ಲಿ, ಖಂಡಿತಾ ಇದು ಶಾಸಕರ ಗಮನದಲ್ಲಿದೆ. ಆದ್ದರಿಂದ ಪಾರದರ್ಶಕವಾಗಿ ತನಿಖೆ ನಡೆಸಲು ಅನುವಾಗುವಂತೆ ಶಾಸಕರು ರಾಜೀನಾಮೆ ನೀಡಬೇಕೆಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿರವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಹಿಂದೆ ಹೆಮ್ಮಾಡಿಯ ಜನತಾ ಹೈಸ್ಕೂಲಿಗೆ ಸೇರಿದ ಜಾಗದ ವಿಚಾರದಲ್ಲಿಯೂ ಶಾಸಕರ ಮೇಲೆ ಆಪಾದನೆಗಳು ಬಂದಿತ್ತು ಎಂಬುದನ್ನು ಗಮನಿಸಬೇಕು.

ಗುತ್ತಿಗೆಯಾಗಿ ಕೆಲಸ ಮಾಡಬೇಕೆಂಬ ಆದೇಶ ಸರಿಯಲ್ಲ

ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡಿಕೊಂಡು ಬಂದಿರುವ ಈಗಿನ ಪಟ್ಟಣ ಪಂಚಾಯಿತಿ ಸಿಬ್ಬಂದಿಗಳನ್ನು ಖಾಯಂ ಮಾಡುವ ಕುರಿತು ಹಾಗೂ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಬೇಕು ಎಂಬ 24-10-2016ರ ಸುತ್ತೋಲೆ ರದ್ದು ಮಾಡುವಂತೆ ಒತ್ತಾಯಿಸಿ ಪಟ್ಟಣ ಪಂಚಾಯಿತಿ ನೌಕರರ ಸಂಘ ಜಿಲ್ಲಾ ಸಂಘಟನಾ ಸಮಿತಿ ವತಿಯಿಂದ ನವೆಂಬರ್ 09ರಂದು ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಸುಮಾರು 10-20 ವರ್ಷಗಳಿಂದ ಅತ್ಯಂತ ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಾ ಬಂದಿದ್ದೇವೆ. ಕೆಲವರು ಮಂಡಲ ಪಂಚಾಯತ ಇದ್ದಾಗಿನಿಂದಲು ಕೆಲಸ ಮಾಡುತ್ತಾ ಬಂದಿದ್ದಾರೆ. ಈಗ ನಮ್ಮ ಗ್ರಾಮ ಪಂಚಾಯತಗಳು "ಪಟ್ಟಣ ಪಂಚಾಯತಿ"ಗಳಾಗಿ ಮೇಲ್ದರ್ಜೆಗೆ ಏರಿವೆ. ಈ ಸಂದರ್ಭದಲ್ಲಿ ಕೆಲವು ಜನ ಸಿಬ್ಬಂದಿಗಳನ್ನು ಮಾತ್ರ ಖಾಯಮಾತಿ ಆದೇಶ ನೀಡಿದ್ದು ಇನ್ನುಳಿದ ಸಿಬ್ಬಂದಿಗಳನ್ನು ಖಾಯಂ ಮಾಡಿರುವುದಿಲ್ಲ, ಈ ಬಗ್ಗೆ ಮೇಲಾಧಿಕಾರಿಗಳಿಗೆ ವಿಚಾರಿಸಿದರೆ ನಿಮ್ಮ ಬಗ್ಗೆ ಪಂಚಾಯತ ಠರಾವು ಇಲ್ಲ, ಜಿಲ್ಲಾ ಪಂಚಾಯತ ಅನುಮೋದನೆ ಇಲ್ಲ, ವಯಸ್ಸು ಆಗಿದೆ, ಶಿಕ್ಷಣ ಇಲ್ಲ ಮುಂತಾದ ಕಾರಣಗಳನ್ನು ನೀಡಿ ಖಾಯಂ ಮಾಡಲಾಗುತ್ತಿಲ್ಲ ಎಂದು ಮುಖಂಡರಾದ ಅಣ್ಣಾರಾಯ ಈಳಿಗೇರಾ ತಿಳಿಸಿದರು.

ಅಕ್ಟೋಬರ್ 24ರ ಸುತ್ತೋಲೆ ರದ್ದು ಮಾಡಬೇಕೆಂದು ಆಗ್ರಹಿಸಿದ ಅವರು "ಆಡಳಿತದ ಈ ಕ್ರಮ ಸರಿಯಾದುದ್ದಲ್ಲ. ಹಲವು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುವ ಸಿಬ್ಬಂದಿಗಳಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಆದ-ರೆ ಈಗ ನಮ್ಮನ್ನು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಬೇಕೆಂದು ಹೇಳಿರುವ ಪೌರಾಡಳಿತ ಯೋಜನಾ ಅಧಿಕಾರಿಗಳ ಸುತ್ತೋಲೆಯಿಂದ ನಾವುಗಳೆಲ್ಲ ಅಘಾತಗೊಂಡಿದ್ದೇವೆ.

ನಮ್ಮ ಬದುಕನ್ನೆ ಕಸಿದುಕೊಳ್ಳಲು ಹೊರಟಂತಿದೆ. ಮಂಡಲ ಪಂಚಾಯತದಿಂದ ಬಂದಿರುವ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತ ಅನುಮೋದನೆಯ ಅವಶ್ಯಕತೆ ಇಲ್ಲ ಎಂದು ಸರಕಾರದ ಈ ಹಿಂದಿನ ಸುತ್ತೋಲೆ ಹೇಳುತ್ತವೆ. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ವೇತನ ಬಟವಾಡೆ ಮಾಡಬೇಕು. ಯಾರದೋ ತಪ್ಪಿಗೆ ಸಿಬ್ಬಂದಿಗಳಿಗೆ ಶಿಕ್ಷೆಕೊಡುವುದು ತರವಲ್ಲ. ಅದರಿಂದ ಸುತ್ತೊಲೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.



ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರಾದ ಭೀಮಶಿ ಕಲಾದಗಿ, ಲಕ್ಷ್ಮಣ ಹಂದ್ರಾಳ, ಮಲ್ಲಿಕಾರ್ಜುನ ಹೂಗಾರ, ಎಂ.ಎಸ್. ದೊಡಮನಿ, ಶಾಂತಾಬಾಯಿ ತಳಕೇರಿ, ಅಶೋಕ ಚಲವಾದಿ, ಸಿದ್ರಾಮ ಬಂಗಾರಿ, ಶೋಭಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಇದಕ್ಕೂ ಮುಂಚೆ ಎಪಿಎಂಸಿ ರೈತ ಸಂಘದ ಕಚೇರಿಯಲ್ಲಿ ಸಮಾವೇಶಗೊಂಡಿದ್ದ ಪಟ್ಟಣ ಪಂಚಾಯಿತಿ ನೌಕರರು ಸಂಘಟನಾ ಸಮಿತಿಯನ್ನು ರಚಿಸಿದರು. ಹಾಗೂ ಅಣ್ಣಾರಾಯ ಈಳಿಗೇರಾ ಸಂಚಾಲಕರು, ಮಲ್ಲಿಕಾರ್ಜುನ ಹೂಗಾರ ಸಹ ಸಂಚಾಲಕರು, ಎನ್.ಎಸ್. ದೊಡ್ಡಮನಿ 15 ಜನರ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ನವೆಂಬರ್ 18 ಭೂಮಿ–ನಿವೇಶನಕ್ಕಾಗಿ ಜೈಲುಭರೋ ಚಳುವಳಿ ಯಶಸ್ವಿಗೊಳಿಸಲು ರಾಜ್ಯದ ತುಂಬಾ ಭರದಿಂದ ತಯಾರಿ ನಡೆದಿದೆ. ರೈತರ, ನಿವೇಶನರಹಿತರ ಸಮಾವೇಶಗಳು, ಸಾಮೂಹಿಕ ಸಂಘಟನೆಗಳ ಜಂಟಿ ಸಭೆಗಳು ನಡೆದಿವೆ. ಬಂದಿರುವ ಕೆಲವು ವರದಿಗಳು ಇಲ್ಲಿವೆ.

ನ.18 ಜೈಲ್ ಭರೋದತ್ತ

ಮನೆ–ನಿವೇಶನ ಅರ್ಜಿ ಸ್ವೀಕರಿಸದ ಹಾಸನ ನಗರಸಭೆ ಆಡಳಿತಕ್ಕೆ ಧಿಕ್ಕಾರ



ಹಾಸನ ನಗರ ಸಭೆಯ ವ್ಯಾಪ್ತಿಯಲ್ಲಿ ಸ್ವಂತ ಮನೆಗಳಿಲ್ಲದೆ ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿರುವ ಸಾವಿರಾರು ಕುಟುಂಬಗಳಿವೆ. ಆರ್ಥಿಕವಾಗಿ ಹಿಂದುಳಿದಿರುವ ಈ ಕುಟುಂಬಗಳಿಗೆ ವಾಸಕ್ಕೆ ಸ್ವಂತ ಸೂರು ಕಟ್ಟಿಕೊಳ್ಳಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಎದುರಾಗಿದೆ. ಇಂತಹ ಕುಟುಂಬಗಳಿಗೆ ಸ್ವಂತಕ್ಕೆ ವಾಸಯೋಗ್ಯ ಸೂಕ್ತ ಮನೆ, ನಿವೇಶನಗಳನ್ನು ಒದಗಿಸಿಕೊಡಬೇಕೆಂದು ನವೆಂಬರ್ 08ರಂದು ನಗರದ ವಿವಿಧ ಬಡಾವಣೆಗಳಿಂದ ಬಂದಿದ್ದ ನೂರಾರ ಜನ ಮನೆ, ವಸತಿ ನಿವೇಶನ ರಹಿತರು ಮನೆ, ನಿವೇಶನ ರಹಿತರ ಹೋರಾಟ ಸಮಿತಿ ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ನಗರ ಸಭೆ ಕಛೇರಿಗೆ ಒಳಪ್ರವೇಶಿಸಿ ಧರಣಿ ಮಾಡಿದರು.


ಹಾಸನ ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ಬಹುತೇಕ ಎಲ್ಲ ಪ್ರದೇಶಗಳಲ್ಲೂ ಸ್ವಂತ ಮನೆ ಇಲ್ಲದ ಬಡ, ಕೂಲಿಕಾರ, ಕಾರ್ಮಿಕ ಮತ್ತು ಸಾಮಾನ್ಯ ಜನ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಸರ್ಕಾರಗಳು ಈಗಾಗಲೇ ಹಲವು ವಸತಿ ಯೋಜನೆಗಳನ್ನು ಜಾರಿಗೊಳಿಸಿದ್ದರೂ ಸಹ ಎಲ್ಲರಿಗೂ ಮನೆಗಳನ್ನು ಒದಗಿಸಲು ಸಾಧ್ಯವಾಗಿಲ್ಲ ಎನ್ನುವುದೇ ಸಮಸ್ಯೆಯ ತೀವ್ರತೆಯನ್ನು ಬಿಂಬಿಸುತ್ತದೆ. ಇಂತಹ ನಿಜವಾದ ಫಲಾನುಭವಿಗಳನ್ನು ಗುರುತಿಸಿ ಅವರುಗಳಿಗೆ ಮನೆ, ನಿವೇಶನಗಳನ್ನು ಮಂಜೂರು ಮಾಡಬೇಕಾದದ್ದು ನಗರಸಭೆಯ ಆದ್ಯ ಕರ್ತವ್ಯವಾಗಿದೆ. ಎಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಕಾ. ಎಸ್. ವರಲಕ್ಷ್ಮಿರವರು ಆಗ್ರಹಿಸಿದರು.

ನಿವೇಶನಕ್ಕಾಗಿ ವೈಯಕ್ತಿಕ ಅರ್ಜಿಗಳನ್ನು ಹಿಡಿದು ನಗರದ ಹೇಮಾವತಿ ಪ್ರತಿಮೆಯಿಂದ ನಗರಸಭೆವರೆಗೆ ಮೆರವಣಿಗೆ ಮಾಡಿ ಮನವಿಯೊಂದಿಗೆ ಅರ್ಜಿಗಳನ್ನು ಸ್ವೀಕರಿಸಲು ನಿರಾಕರಿಸಿದ ನಗರ ಸಭೆಯ ಆಯುಕ್ತರು ಮತ್ತು ಅಧ್ಯಕ್ಷರ ಕ್ರಮವನ್ನು ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದ ಜನರು ಅರ್ಜಿಗಳನ್ನು ಮತ್ತು ಮನವಿಪತ್ರವನ್ನು ಸ್ವೀಕರಿಸಲು ಒತ್ತಾಯಿಸಿದರು,

ಸಿಐಟಿಯು ಜಿಲ್ಲಾಧ್ಯಕ್ಷರಾದ ಕಾಂ॥ಧರ್ಮೇಶ್ ರವರು ಮಾತನಾಡಿ "ವಿವಿಧ ಬಡಾವಣೆಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ಸಾವಿರಾರು ಜನರನ್ನು ಗುರುತಿಸಿ ಅವರಿಗೆ ಕಾನೂನಾತ್ಮಕವಾಗಿ ಮನೆಗಳಿಗೆ ಹಕ್ಕುಪತ್ರವನ್ನು ನೀಡಬೇಕು. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸವಿರುವ ಮನೆ, ನಿವೇಶನ ರಹಿತರನ್ನು ಸಂಘಟಿಸಿ ಅವರ ಮೂಲಕ ಸಂಬಂಧಿಸಿದ ಸ್ಥಳೀಯ ನಾಗರೀಕ ಸರ್ಕಾರಗಳಿಗೆ ಅರ್ಜಿ ಸಲ್ಲಿಸಿ ಅವರಿಗೆ ಸೂಕ್ತವಾದ ಮನೆ, ನಿವೇಶನಕ್ಕಾಗಿ ರಾಜ್ಯಾದ್ಯಂತ ಹೋರಾಟ ನಡೆಸಲು ಸಿಐಟಿಯು ರಾಜ್ಯಾದ್ಯಂತ ಚಳುವಳಿ ತೀವ್ರಗೊಳಿಸುತ್ತಿದೆ ಎಂದು ತಿಳಿಸಿದರು.

ಜನತೆಯನ್ನು ಗುರುತಿಸಿ ಅವರಿಂದ ನಗರ ಸಭೆಗೆ ವೈಯಕ್ತಿಕ ಅರ್ಜಿಗಳನ್ನು ಸಾಮೂಹಿಕವಾಗಿ ಸಲ್ಲಿಸುತ್ತಿದ್ದು ಆ ಅರ್ಜಿಗಳಿಗೆ ಹಿಂಬರಹ ನೀಡಿ ಸೂಕ್ತವಾಗಿ ಪರಿಶೀಲಿಸಿ ಸರ್ಕಾರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ನಿವೇಶನ ರಹಿತರಿಗೆ ನಿವೇಶನ ಮತ್ತು ಮನೆ, ಹಾಗೂ ಹಕ್ಕುಪತ್ರ ಇಲ್ಲದವರ ಮನೆಗಳಿಗೆ ಹಕ್ಕುಪತ್ರಗಳನ್ನು ನೀಡಬೇಕೆಂದು ಧರಣಿ ಮೂಲಕ ಮನವಿ ಮಾಡಿಕೊಂಡರು.

ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಜಿ.ಪಿ.ಸತ್ಯನಾರಾಯಣ ಮತ್ತು ಜಿಲ್ಲಾ ಕಾರ್ಯದರ್ಶಿ ಅರವಿಂದ ಮಾತನಾಡಿದರು. ಧರಣಿ ತೀವ್ರಗೊಂಡರೂ ಸಹ ಮನವಿ ಮತ್ತು ಜನರ ಅರ್ಜಿಗಳನ್ನು ಸ್ವೀಕರಿಸದ ನಗರ ಸಭೆಯ ಅಧ್ಯಕ್ಷರು ಮತ್ತು ಆಯುಕ್ತರ ಸಂವಿಧಾನ ವಿರೋಧಿ ಕ್ರಮವನ್ನು ಖಂಡಿಸಿ ಅಲ್ಲಿಂದ ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಕಛೇರಿ ಬಳಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಅರಣ್ಯ ಅತಿಕ್ರಮಣದಾರರ ಸಭೆ

ಹೊಸ ಹೊಸ ಶರತ್ತುಗಳನ್ನು ವಿಧಿಸಿ ಅರಣ್ಯ ಅತಿಕ್ರಮಣ ಅರ್ಜಿಗಳನ್ನು ತಿರಸ್ಕಾರ ಮಾಡುತ್ತಿರುವ ಸರಕಾರದ ಧೋರಣೆ ವಿರುದ್ಧ ನವೆಂಬರ್ 18ರಂದು ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲೂ 'ಜೈಲ್ ಭ–ರೋ' ಚಳುವಳಿಗೆ ಮುಂದಾಗಬೇಕೆಂದು ತಾಲೂಕ ಮಟ್ಟದ ಅರಣ್ಯ ಅತಿಕ್ರಮಣದಾರರ ಸಭೆಯಲ್ಲಿ ಘೋಷಿಸಲಾಯಿತು. ನವೆಂಬರ್ 07ರಂದು ಕೆ–ರೆಕೋಣದ ಸಹಯಾನ ಸಭಾ ಭವನದಲ್ಲಿ ಸಭೆ ನಡೆಯಿತು.



ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕರವರು "ಸರ್ಕಾರದ ಅಧಿಕಾರಿಗಳು 1 ಗುಂಟೆ, 2 ಗುಂಟೆ ಹಿಡುವಳಿ ಹೊಂದಿದ್ದರೂ ಅರ್ಜಿ ತಿರಸ್ಕರಿಸುತ್ತಿದ್ದಾರೆ. 75 ವರ್ಷದ ದಾಖಲೆ ಇಲ್ಲ ಎಂದು ಅರ್ಜಿ ತಿರಸ್ಕರಿಸಿ, ಹಿರಿಯ ನಾಗರಿಕರ ಹೇಳಿಕೆ ಮತ್ತು ಅರಣ್ಯ ಹಕ್ಕು ಸಮಿತಿ ಅಭಿಪ್ರಾಯಗಳಿಗೆ ಮಾನ್ಯ ಮಾಡುತ್ತಿಲ್ಲ. ಗ್ರಾಮ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಲೆಕ್ಕಿಸದೆ ಅತಿಕ್ರಮಣ ಅರ್ಜಿಗಳನ್ನು ಸಾವಿರ ಸಾವಿರ ಸಂಖ್ಯೆಯಲ್ಲಿ ತಿರಸ್ಕರಿಸುತ್ತಿದ್ದು, ಹಲವಾರು ದಶಕಗಳಿಂದ ಭೂಮಿ ಸಾಗುವಳಿ ಮಾಡಿ, ಮನೆ ಕಟ್ಟಿ–ಕೊಂಡು ಜೀವಿಸುತ್ತಿರುವ ರೈತಾಪಿ ಜನತೆ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಮಂತ್ರಿ ಕಾಗೋಡ ತಿಮ್ಮಪ್ಪನವರು ಹೇಳುತ್ತಿರುವುದು ಒಂದು, ವಾಸ್ತವವಾಗಿ ನಡೆಯುವುದೇ ಬೇರೆ ಆಗಿದೆ. ಹಾಗಾಗಿ ಉಗ್ರ ಚಳುವಳಿ ನಡೆಸುವ ಅನಿವಾರ್ಯತೆ ಬಂದಿದೆ" ಎಂದರು.

ಸಭೆಯಲ್ಲಿ ಕಾರ್ಮಿಕ ಮುಖಂಡರಾದ ಯಮುನಾ ಗಾಂವಕರ ಮಾತನಾಡಿ "2005ರ ವರೆಗಿನ ಎಲ್ಲಾ ಅರಣ್ಯ ಅತಿಕ್ರಮಣ ಮಂಜೂರಿ ಮಾಡಬೇಕೆಂದು ಒತ್ತಾಯಿಸಿ ಜೈಲ್‌ಭರೋ ಹೋರಾಟಕ್ಕೆ ಮುಂದಾಗಬೇಕೆಂದು" ಕರೆ ನೀಡಿದರು.

ಸಿ.ಐ.ಟಿ.ಯು. ಜಿಲ್ಲಾಧ್ಯಕ್ಷ ತಿಲಕ ಗೌಡ ಮಾತನಾಡಿ ಕಾರ್ಮಿಕರು ಸಹ ಈ ಹೋರಾಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದಾಗಿ ಘೋಷಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕ ಸಮಿತಿ ಕಾರ್ಯದರ್ಶಿ ಗಣೇಶ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು. ವೇದಿಕೆ ಮೇಲೆ ಗಜಾನನ ನಾಯ್ಕ, ಸುಬ್ಬು ಹೆಗಡೆ, ನಾರಾಯಣ ಶೆಟ್ಟಿ, ಮಹಾಬಲ ನಾಯ್ಕ ಮುಂತಾದವರು ಹಾಜರಿದ್ದರು.

ಬಗರ್‌ಹುಕುಂ ಸಾಗುವಳಿದಾರರ 'ಭೂಮಿ ಸಮಾವೇಶ'

ಸಕಲೇಶಪುರ:

ರೈತ ವಿರೋಧಿ ನೀತಿಗಳನ್ನು ಸರ್ಕಾರಗಳು ಅನುಸರಿಸುತ್ತಿರುವುದರಿಂದ ರೈತರ ಸಾಲು–ಸಾಲು ಆತ್ಮಹತ್ಯೆಗಳ ಸರಣಿಗಳು ನಡೆಯುತ್ತಿದ್ದು ಇಂತಹ ಸಂದಿಗ್ಧ ಸಂದರ್ಭದಲ್ಲಿ ಬಡ ಬಗರ್‌ಹುಕುಂ ಸಾಗುವಳಿದಾರರು ಭೂಮಿಯ ಮೇಲಿನ ತಮ್ಮ ಹಕ್ಕಿಗಾಗಿ ಸಂಘಟಿತ ಹೋರಾಟವನ್ನು ನಡೆಸಬೇಕಾದ ಅನಿವಾರ್ಯತೆಯಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಹೆಚ್. ಆರ್.ನವೀನ್‌ಕುಮಾರ್ ಹೇಳಿದರು. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಚಂಗಡಿಹಳ್ಳಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಕ್ಟೋಬರ್ 30ರಂದು ಬಗರ್‌ಹುಕುಂ ಸಾಗುವಳಿದಾರರ "ಭೂಮಿ ಸಮಾವೇಶ"ವನ್ನು ಉಧ್ಘಾಟಿಸಿ ಅವರು ಮಾತನಾಡಿದರು.

ಹತ್ತಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ರೈತರ ಭೂಮಿಗೆ ಹಕ್ಕುಪತ್ರ ಕೊಟ್ಟು ಸಕ್ರಮ ಮಾಡಬೇಕಾದ ಸರ್ಕಾರಗಳು ರೈತ–ರಿಂದ ಭೂಮಿಯನ್ನು ಕಿತ್ತು "ಅಭಿವೃದ್ಧಿ"ಯ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ, ರಿಯಲ್ ಎಸ್ಟೇಟ್‌ಗಳಿಗೆ ನೀಡಿ ರೈತರನ್ನು ಬೀದಿಗೆ ತಳ್ಳುವ ಹುನ್ನಾರ ನಡೆಸಿವೆ. ರೈತರು ಉಳಿಯದಿದ್ದರೆ ಭಾರತ–ಕ್ಕೆ ಭವಿಷ್ಯವಿಲ್ಲದಂತಹ ಸ್ಥಿತಿ ನಿರ್ಮಾಣವಾಗುತ್ತದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಗರ್ ಹುಕುಂ ಸಾಗುವಳಿಯ ಸಕ್ರಮೀಕರಣಕ್ಕೆ ಇರುವ ಕಾನೂನಿನ ತೊಡಕುಗಳಿಗೆ ತಿದ್ದುಪಡಿ ತರುವ ಮೂಲಕ ಬಡ ರೈತರಿಗೆ ದಲಿತರಿಗೆ ಭೂಮಿಯ ಹಕ್ಕನ್ನು ಖಾತ್ರಿಪಡಿಸಬೇಕಾಗಿದೆ. ಅದಕ್ಕಾಗಿ ನವೆಂಬರ್ 18 ರಂದು ಭೂಮಿ ಮತ್ತು ಮನೆ ವಸತಿ ನಿವೇಶನಕ್ಕಾಗಿ ನಡೆಯುತ್ತಿರುವ ಐತಿಹಾಸಿಕ ಜೈಲ್ ಭರೋ ಚಳುವಳಿಯಲ್ಲಿ ರೈತ, ಕೂಲಿಕಾರರು, ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸಕಲೇಶಪುರ ತಾಲ್ಲೂಕು ಅಧ್ಯಕ್ಷರಾದ ಕೆ.ಎಲ್.ಶಂಕರ್ ಮತ್ತು ಹಿರಿಯ ಮುಖಂಡರಾದ ಮಹದೇವಪ್ಪ ಭಾಗವಹಿಸಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಪ್ರಾಂತ ರೈತ ಸಂಘದ ಚಂಗಡಿಹಳ್ಳಿ ಗ್ರಾಮ ಪಂಚಯಿತಿ ಸಮಿತಿಯ ಅಧ್ಯಕ್ಷರಾದ ರುದ್ರೇಗೌಡ ವಹಿಸಿದ್ದರು, ಕಾರ್ಯದರ್ಶಿ ವೀರೇಶ್ ಸ್ವಾಗತಿಸಿ ಕಾರ್ಯಕ್ರಮವನ್ನು ನಿರ್ವಹಿಸಿದರು.

ದಕ್ಷಿಣ ಕನ್ನಡ

ಉಳ್ಳಾಲ:

ಕರ್ನಾಟಕ ಪ್ರಾಂತ ರೈತ ಸಂಘವು ಇತರ ಸಂಘಟನೆಗಳೊಂದಿಗೆ ಹಮ್ಮಿಕೊಂಡಿರುವ ಭೂಮಿ ಹೋರಾಟದ ಭಾಗವಾಗಿ ನವೆಂಬರ್ 18ರಂದು ನಡೆಯಲಿರುವ ಜೈಲ್‌ಭರೋ ಕಾರ್ಯಕ್ರಮಕ್ಕೆ ದ.ಕ. ಜಿಲ್ಲೆಯ ನಗರ, ತಾಲೂಕುಗಳಲ್ಲಿ ಸಿದ್ಧತೆಗಳು ನಡೆಯುತ್ತಿವೆ. ಕೆಪಿಆರ್‌ಎಸ್ ಕೋಟೆಕಾರ್ ಸರ್ಕಲ್ ಸಮಿತಿ ನವೆಂಬರ್ 6ರಂದು ನಿವೇಶನ ರಹಿತರ ಸಮಾವೇಶವನ್ನು ಹಮ್ಮಿಕೊಂಡಾಗ 300ರಷ್ಟು ಸಂಖ್ಯೆಯ ನಿವೇಶನ ರಹಿತರು ಅದರಲ್ಲಿ ಭಾಗವಹಿಸಿದ್ದರು.

ರಾಜ್ಯದಲ್ಲಿ ನ.18ರ ಪ್ರತಿಭಟನೆಯಲ್ಲಿ ಒಂದು ಲಕ್ಷ ಜನ ಭಾಗವಹಿಸಲಿದ್ದು, 10,000 ಮಂದಿ ಜೈಲು ಸೇರಲು ಸಿದ್ಧರಾಗಿದ್ದಾರೆ ಎಂಬುದಾಗಿ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ತಿಳಿಸಿ, ನಿವೇಶನ ರಹಿತರಿಗೆ ಹೋರಾಟಕ್ಕೆ ಸ್ಫೂರ್ತಿ ನೀಡಿದರು.

ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಕೋಟೆಕಾರ್ ಸರ್ಕಲ್ ಸಮಿತಿ ಸಂಜೀವ ಪಿಲಾರ್, ಕಾರ್ಯದರ್ಶಿ ಜಯಂತ ಅಂಬ್ಲಮೊಗರು, ಕೋಟೆಕಾರ್ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಟ್ಟಡ ನಿರ್ಮಾಣ ಕಾರ್ಮಿಕ ಸಂಘದ ವಲಯಾಧ್ಯಕ್ಷ ಜನಾರ್ಧನ ಕುತ್ತಾರ್, ಕಾರ್ಯದರ್ಶಿ ಜಯಂತ ನಾಯ್ಕ್, ಪಿಂಚಣಿದಾರರ ಸಂಘದ ವಲಯಾಧ್ಯಕ್ಷ ಸುಂದರ ಕುಂಪಲ, ಮೊದಲಾದವರು ಸಮಾವೇಶದಲ್ಲಿ

ಪುಟ 11 ಕ್ಕೆ

'ಬುದ್ಧಿಜೀವಿಗಳು ಹಿಂದೂ ಧರ್ಮದ ವಿರೋಧಿಗಳು' ಎಂದು ಪೇಜಾವರ ಮಠಾಧೀಶರು ಹೇಳಿದರೆಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಯಿತು. ಇದಕ್ಕೆ ನಾಟಕದ ಪ್ರಸನ್ನ, ಅಕೆಡಮಿಕ್ ಚಿಂತಕರಾದ ಪೃಥ್ವಿ ದತ್ತ ಚಂದ್ರಶೋಭಿ ತಮ್ಮ ಪತ್ರಿಕಾ ಅಂಕಣಗಳಲ್ಲಿ ಸುದೀರ್ಘ ಪ್ರತಿಕ್ರಿಯೆ ನೀಡಿ ದಲಿತರು ಮತ್ತು ಜಾತಿಶೋಷಿತರ ಪರವಾಗಿ ಸ್ಪಂದಿಸುವ ಬುದ್ಧಿಜೀವಿಗಳು ಮಾನವೀಯತೆಯನ್ನು ಆಧರಿಸಿ ಯೋಚಿಸುವ ಪ್ರಗತಿಪರರು, ಮತ್ತು ವೈಚಾರಿಕ ನೆಲೆಯುಳ್ಳವರು. ಪೇಜಾವರರಿಗೆ ದಲಿತರ ನೋವನ್ನು ಅರ್ಥಮಾಡಿಕೊಳ್ಳಬಲ್ಲ ಸಂವೇದನಾಶೀಲತೆ ಬೇಕು ಎಂದು ಹೇಳಿದರು. ಕರಿಕಲ್ಲಿನಲ್ಲಿ ಪ್ರೇಮದ ಪ್ರತೀಕವಾದ ಕೃಷ್ಣನ್ನು ಭಾವಿಸುವ ಮನಸ್ಸಿಗೆ ಸಮಾಜದ ಸಹಜೀವಿಗಳಲ್ಲಿನ ಜಾತಿ ಭೇದದ ಅವಮಾನ ನೋವು, ನರಳಿಕೆ, ಕ್ರೋಧಗಳನ್ನು ಪ್ರೀತಿ–ವಿಶ್ವಾಸ–ನಂಬಿಕೆ–ಸಮಾನತೆಗಳ ಹಂಬಲವನ್ನು ಭಾವಿಸುವುದು ಕಷ್ಟವೇ? ಕಷ್ಟ ಎಂದಾದರೆ, ಭಾವಿಸುವ ಮನಸ್ಸನ್ನು ವೈಧಾನಿಕವಾಗಿ ಪೂಜಿಸುವ ಕಲ್ಲಿನೊಂದಿಗೆ ಕಲ್ಲಾಗಿಸುವ ತರ್ಕಬದ್ಧತೆಯನ್ನು ಕೊಳೆತ ಕುಂಬಳಕಾಯಿಯಂತೆ ತಿಪ್ಪೆಗೆಸೆಯಬೇಕು, ಅಲ್ಲವೇ?



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಬುದ್ಧಿಜೀವಿಗಳು ಮತ್ತು ಮಠಾಧೀಶರು

ಸಿದ್ಧಾರ್ಥ ಜ್ಞಾನೋದಯವಾಗಿ ಗೌತಮ ಬುದ್ಧನಾದ ಮೇಲೆ ಅಲ್ಲಿ ಇಲ್ಲಿ ಸಂಚರಿಸುತ್ತಾ ಹೊಲ ಉಳುತ್ತಿರುವ ಬ್ರಾಹ್ಮಣನೊಬ್ಬನನ್ನು ಅನ್ನಕ್ಕಾಗಿ ಯಾಚಿಸುತ್ತಾನೆ. ಶ್ರಮಪಟ್ಟು ದುಡಿದು ಅನ್ನ ತಿನ್ನುತ್ತಿರುವ ತಾನು, ಏನೂ ಮಾಡದೆ ಭಿಕ್ಷೆ ಯಾಚಿಸುತ್ತಿರುವ ಬುದ್ಧನಿಗೆ ಯಾಕೆ ಅನ್ನ ನೀಡಬೇಕೆಂದು ಆ ಬ್ರಾಹ್ಮಣ ಬುದ್ಧನನ್ನು ನೇರವಾಗಿ ಕೇಳುತ್ತಾನೆ. ಬುದ್ಧ ತಾನೂ ಶ್ರಮಪಡುತ್ತಿದ್ದೇನೆಂದೂ, ದೈಹಿಕ ಶ್ರಮದಲ್ಲಿ ತನ್ನನ್ನು ತೊಡಗಿಸಿಕೊಂಡ ಬ್ರಾಹ್ಮಣ ತಾನು ಉಣ್ಣುವುದಲ್ಲದೆ ಸಮಾಜಕ್ಕೂ ಉಪಕಾರಿಯಾಗಿರುವಂತೆ ತನ್ನನ್ನು ಬೌದ್ಧಿಕ ಶ್ರಮದಲ್ಲಿ ತೊಡಗಿಸಿಕೊಂಡು ಜ್ಞಾನವನ್ನು ಹಂಚುವ ಮೂಲಕ ಸಮಾಜಕ್ಕೆ ಉಪಕಾರಿಯಾಗಿರುವೆನೆಂದು, ಆದ್ದರಿಂದ ತಾನೂ ಅನ್ನ ಪಡೆಯಲು ಅರ್ಹನೆಂದು ತನ್ನ ಯಾಚನೆಯನ್ನು ಬುದ್ಧನು ಸಮರ್ಥಿಸಿಕೊಳ್ಳುತ್ತಾನೆ. ಗೌತಮ ಬುದ್ಧ ಭಾರತದ ಚರಿತ್ರೆಯಲ್ಲಿ ಗಮನಾರ್ಹ ಸ್ಥಾನ ಪಡೆದಿರುವ ಜ್ಞಾನಜೀವಿ ಅಥವಾ ಆಧುನಿಕ ಪರಿಭಾಷೆಯಲ್ಲಿ ಹೇಳುವ ಬುದ್ಧಿಜೀವಿ.

ಬುದ್ಧನಿಗೂ ಮೊದಲಿದ್ದ ವೈದಿಕ ಸಮಾಜದ ಜ್ಞಾನಜೀವಿಗಳು ಅರಣ್ಯವಾಸಿಗಳಾಗಿ ಬದುಕುತ್ತಾ ಜ್ಞಾನಾರ್ಜನೆ ಮತ್ತು ಜ್ಞಾನಪ್ರಸರಣದಲ್ಲಿ ತೊಡಗಿದ್ದ ಸನಾತನ ಬುದ್ಧಿಜೀವಿಗಳು. ಅವರು ತಮ್ಮ ಅಧ್ಯಯನ, ಚಿಂತನೆ, ಮತ್ತು ಅನ್ವೇಷಣೆಗಳ ಮೂಲಕ ಪಡೆದ ತಿಳಿವನ್ನು ಅವರ ಬಳಿಗೆ ಬಂದ ಜ್ಞಾನದಾಹಿಗಳೊಂದಿಗೆ ಉಚಿತ ರೀತಿಯಲ್ಲಿ ಹಂಚಿಕೊಳ್ಳುತ್ತಿದ್ದರು. ಅವರ ದೈನಂದಿನ ಜೀವನ ನಿರ್ವಹಣೆಗೆ ಅರಣ್ಯದ ಉತ್ಪನ್ನಗಳ ಸಂಗ್ರಹಣೆ, ಸೀಮಿತ ಮಟ್ಟದ ಕೃಷಿ, ಪಶುಸಂಗೋಪನೆಗಳನ್ನಲ್ಲದೆ ಹತ್ತಿರದ ರಾಜರು ಕೊಡಮಾಡುತ್ತಿದ್ದ ಧನ–ಧಾನ್ಯ ಸಹಾಯವನ್ನು ನೆಚ್ಚಿದ್ದರು. ಅಂದಿನ ನಗರವಾಸಿಗಳಿಗೆ ಹೋಲಿಸಿದರೆ ಕನಿಷ್ಠತಮ ಜೀವನಾಗತ್ಯಗಳ ಪೂರೈಕೆಯಿಂದ ನಡೆಸಬಹುದಾದ ಸರಳ ಜೀವನವನ್ನು ನಡೆಸುತ್ತಿದ್ದರು. ಇಂದಿನ ಆದಿವಾಸಿ ಜನರಂತೆ ಬಂಡೆಗಲ್ಲುಗಳ ನಡುವಿನ ಗುಹೆ, ಅರಣ್ಯಜನ್ಯ ವಸ್ತುಗಳಿಂದ ನಿರ್ಮಿಸಿದ ಎಲೆಮನೆಗಳು, ಜೋಪಡಿ, ಕುಟೀರ ಮುಂತಾಗಿ ತಾವೇ ನಿರ್ಮಿಸಿಕೊಂಡ ವಾಸಸ್ಥಳಗಳಲ್ಲಿ ತಮ್ಮ ಕಾಯಕವನ್ನು ನಡೆಸುತ್ತಿದ್ದರು. ಹೆಂಡತಿ, ಮಕ್ಕಳು, ಶಿಷ್ಯರ ಯೋಗಕ್ಷೇಮದ, ಅತಿಥಿ–ಅಭ್ಯಾಗತರನ್ನು ಸತ್ಕರಿಸುವ ಹೊಣೆಹೊತ್ತ ಸಾಂಸಾರಿಕರಾಗಿದ್ದರು.

ನಗರವಾಸಿಗಳಾದ ಉಚ್ಚ ವರ್ಣದ ಜನರು ಎಂಟು ವರ್ಷಕ್ಕೆ ವಟುಗಳಾಗಿ ಪ್ರಾರಂಭಿಸಿ 12 ವರ್ಷಗಳ ಕಾಲ ಗುರುಕುಲದಲ್ಲಿ ವಿದ್ಯಾರ್ಜನೆ ಮಾಡುವಾಗ ಬ್ರಹ್ಮಚಾರಿಗಳೆಂದು ಕರೆಸಿಕೊಳ್ಳುತ್ತಿದ್ದರು. ವಿದ್ಯಾಭ್ಯಾಸ ಮುಗಿಸಿ ಸ್ನಾತಕರಾಗಿ ಕುಟುಂಬ ನಿರ್ವಹಣೆ, ಸಂತಾನವನ್ನು ಮುಂದುವರೆಸುವ ಜವಾಬ್ದಾರಿಯನ್ನು ಹೊತ್ತಾಗ ಸಂಸಾರಿಗಳೆಂದು ಗುರುತಿಸಿಕೊಳ್ಳುತ್ತಿದ್ದರು. ಇಳಿ ವಯಸ್ಸಿನಲ್ಲಿ, ಕುಟುಂಬದ ಜವಾವಾಬ್ದಾರಿಗಳನ್ನು ನಿರ್ವಹಿಸಿ ಸಾಕಾದಮೇಲೆ ಆಸ್ತಿ ಹಕ್ಕು ಮತ್ತು ಹಣದ ವಹಿವಾಟಿನ ಜವಾಬ್ದಾರಿಗಳನ್ನು ಹಿರಿಯ ಮಕ್ಕಳಿಗೆ ವಹಿಸಿ ಕಾಡಿನಲ್ಲಿ ವಾಸಿಸುವಾಗ ವಾನಪ್ರಸ್ಥರೆನಿಸಿಕೊಳ್ಳುತ್ತಿದ್ದರು. ಸಾವಿಗೆ ಹತ್ತಿರವಾಗಿ ಜೀವಿಸುತ್ತಾ, ಆಯುಷ್ಯ ಕ್ಷೀಣಿಸಿ 'ಸಾಯುವ ಸ್ಥಿತಿ' ತಲುಪಿ ಬದುಕಿನ ಬವಣೆಗಳಿಂದ ಬಿಡುಗಡೆ ಪಡೆದಾಗ 'ಸಂನ್ಯಾಸಿ' ಎನಿಸಿಕೊಳ್ಳುತ್ತಿದ್ದರು. ಹೀಗೆ ಗುರುತಿಸುವ ನಾಲ್ಕು ಬಗೆಯ ಜೀವನಕ್ರಮಗಳನ್ನು 'ಆಶ್ರಮಗಳು' ಎನ್ನುತ್ತಿದ್ದರು.

ಆಧುನಿಕ 'ಆಶ್ರಮ'ಗಳು

ಆಧುನಿಕ ಕಾಲದಲ್ಲಿ 7 ನೇ ವಯಸ್ಸಿನಲ್ಲಿ ಶಾಲೆಗೆ ಸೇರುವುದರಿಂದ ಪ್ರಾರಂಭಿಸಿ 10+02+03 ರ 15 ವರ್ಷಗಳ ಶಿಕ್ಷಣ ಪಡೆಯುವುದು ಮೊದಲ ಹಂತ. ಉದ್ಯೋಗದ ಹಂತ ಎರಡನೆಯದು. ನಿವೃತ್ತಿ ಮೂರನೆಯ ಹಂತ. ಈ ಮೂರು ಹಂತಗಳು ಸನಾತನ ಹಿಂದೂ ಜೀವನಕ್ರಮದ ಮೊದಲ ಮೂರು ಆಶ್ರಮಗಳಿಗೆ ಸಂವಾದಿಯಾಗಿವೆ.

ಸ್ನಾತಕೋತ್ತರ ಅಧ್ಯಯನ, ಪದವಿಗಳು, ನಿವೃತ್ತಿಯಾದ ನಂತರವೂ ಜನರು ಕೈಗೊಳ್ಳುವ ವಿವಿಧ ಉದ್ಯೋಗಗಳು ಆಧುನಿಕ ಸಮಾಜದ ಜೀವನಕ್ರಮಗಳಿಗೆ ಸೇರ್ಪಡೆಯಾದ ಈಚಿನ ಬೆಳವಣಿಗೆಗಳು. ವಟು ಎಂದರೆ ಜುಟ್ಟು–ಜನಿವಾರಗಳನ್ನು ಧರಿಸಿ ಸಂಸ್ಕೃತ ಕಲಿಯುವ ಬಾಲಕನೆಂದು, (ಬಾಲಕಿಗೆ ಇಂಥ ಸೌಕರ್ಯವಿಲ್ಲ), ಬ್ರಹ್ಮಚಾರಿಯೆಂದರೆ ಮದುವೆಯಾಗದ–ಮದುವೆಯೊಲ್ಲದ ಒಂಟಿ ಬದುಕಿನ ಮನುಷ್ಯರೆಂದು, ಸಂನ್ಯಾಸಿಯೆಂದರೆ ಸಾಂಸಾರಿಕ ಜವಾಬ್ದಾರಿಗಳನ್ನು ಹೊರಲೊಲ್ಲದೆ ಅಥವಾ ಕಳಚಿಕೊಂಡು, ಲೈಂಗಿಕ ಬಯಕೆಗಳಿಂದ ಮುಕ್ತವಾಗಿ, ಕಾವಿಧಾರಿಯಾಗಿ ಮೋಕ್ಷವನ್ನು ಬಯಸುತ್ತಾ, ಸಾಂಕೇತಿಕವಾಗಿ 'ಸತ್ತು' ಲೋಕ ಕಲ್ಯಾಣಕ್ಕಾಗಿ ಜೀವಿಸುವ ಸರಳಜೀವಿಗಳೆಂದು ಅರ್ಥಾಂತರವಾಗಿದೆ. ಸಂನ್ಯಾಸಿಯಾಗುವುದೆಂದರೆ ಸಾಂಕೇತಿಕವಾಗಿ ಸತ್ತು ತನ್ನ ಶ್ರಾದ್ಧವನ್ನು ತಾನೇ ಮಾಡಿಕೊಂಡು, ಹಳೆಯ ಸಂಬಂಧಗಳನ್ನು ಮುರಿದುಕೊಂಡು, ಹೊಸ ಜನ್ಮವನ್ನು ಪಡೆದು, ಹೊಸ ಹೆಸರನ್ನು ಪಡೆಯುವ ವೈಧಾನಿಕ ಕ್ರಮವನ್ನು ಅನುಸರಿಸುವುದು. ವೈದಿಕ ಪದ್ಧತಿಗಳನ್ನು ಅನುಸರಿಸುತ್ತಿದ್ದ ಸನಾತನ ಸಮಾಜದಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂಬ ನಾಲ್ಕು ಜೀವನ ವಿಧಾನಗಳನ್ನು ಗುರುತಿಸಲು ಬಳಕೆಯಾಗುತ್ತಿದ್ದ 'ಆಶ್ರಮ' ಪದದ ಅರ್ಥ, ಆಧುನಿಕ ಕಾಲದ ಸಾಧು–ಸನ್ಯಾಸಿಗಳು ಜೀವಿಸುವ ಸ್ಥಳವೆಂದು ಅರ್ಥಾಂತರವಾಗಿದೆ. ಹಿಂದಿನಂತೆ ಪ್ರಾಣಿ–ಪಕ್ಷಿಗಳು ಸಂಚರಿಸುವ ಅರಣ್ಯಗಳಲ್ಲಿ ಆಶ್ರಮ ಕಟ್ಟಿಕೊಂಡು ಜೀವಿಸುವ ಬದಲು, ತಾವಿರುವ ಪ್ರದೇಶಗಳಲ್ಲಿಯೇ ಮರಗಿಡಗಳನ್ನು ಬೆಳೆಸುವುದು, ಪ್ರಾಣಿ–ಪಕ್ಷಿಗಳನ್ನು ತಂದು ಸಾಕುವುದು ಮುಂತಾದ ಕೃತಕ ವಿಧಾನಗಳಲ್ಲಿ ಅರಣ್ಯದಂತೆ ತೋರುವ ಪರಿಸರದ ಆಶ್ರಮವನ್ನು ನಿರ್ಮಿಸಿಕೊಳ್ಳುವ ವಿಧಾನ ಬಳಕೆಗೆ ಬಂದಿದೆ. ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿ ಆಹಾರವನ್ನು ಸಂಪಾದಿಸಿಕೊಳ್ಳುವುದರ ಬದಲು, 'ಭಿಕ್ಷೆ' ಕೊಡುವವರೇ ಆಶ್ರಮಕ್ಕೆ ಬಂದು ಆಹಾರಕ್ಕಾಗಿ ಏರ್ಪಾಟು ಮಾಡುವುದು, ಅಥವಾ ಅದರ ವೆಚ್ಚಕ್ಕಾಗಿ ದಾನ–ಧರ್ಮದ ರೂಪದಲ್ಲಿ ಧನ–ಧಾನ್ಯಗಳನ್ನು ಕೊಡುವುದು ಈ ಕಾಲದಲ್ಲಿ ಜಾರಿಯಲ್ಲಿರುವ ಕ್ರಮ.

ಶಂಕರ ಮೊದಲ 'ಬಾಲಸನ್ಯಾಸಿ'

ವೈದಿಕ ಸಮಾಜದಲ್ಲಿ ಋಷಿ–ಮುನಿ ಎಂಬ ಪದಗಳಿಗೆ ವರ್ಣ, ಜಾತಿ, ಮತ, ಸಿದ್ಧಾಂತ ಅಥವಾ ಜ್ಞಾನಶಾಖೆಗಳ ನಿರ್ದಿಷ್ಟ ಕಟ್ಟುಪಾಡುಗಳಾಗಲಿ, ಆಹಾರ–ಪಾನೀಯ ಪದ್ಧತಿಯ ನಿರ್ಬಂಧ, ಮಡಿವಂತಿಕೆಗಳಾಗಲಿ ಇರಲಿಲ್ಲ. ವೇದಾಂತ ಮೂಲದ ಚಿಂತನೆ–ಪ್ರತಿಪಾದನೆ ಮಾಡಿದ ವಸಿಷ್ಠ–ವಿಶ್ವಾಮಿತ್ರ–ವ್ಯಾಸರು ಋಷಿಗಳು. ಕಾಮಸೂತ್ರವನ್ನು ರಚಿಸಿದ ವಾತ್ಸಾಯನನೂ ಋಷಿಯೇ. ಕಾಡಿನಲ್ಲಿ ಸಿಗುತ್ತಿದ್ದ ಕಂದ ಮೂಲಗಳನ್ನು, ಹಣ್ಣು–ಹಂಪಲುಗಳನ್ನು ತಿಂದು ಜೀವಿಸುತ್ತಿದ್ದ ತಾಪಸಿಗಳೂ ಋಷಿಗಳೇ. ಆಡಿನ ರೂಪದಲ್ಲಿದ್ದ ವಾತಾಪಿಯನ್ನು ತಿಂದು ಜೀರ್ಣಿಸಿಕೊಂಡ ಅಗಸ್ತ್ಯನೂ ಋಷಿಯೇ. ಮೃಚ್ಛಕಟಿಕದಲ್ಲಿ ಕಳ್ಳನ ಪಾಲಿಗೆ ತಾನು ಕನ್ನ ಕೊರೆಯುವ ಮುಂಚೆ ನೆನೆದು ವಂದಿಸುವ ತನ್ನ ಗುರು ತಸ್ಕರಾಚಾರ್ಯನೂ ಋಷಿಯೇ.

ವೈದಿಕ ಧರ್ಮಕ್ಕೆ ಆಧಾರಸ್ತಂಭವೆನಿಸಿರುವ ತತ್ವ, ತರ್ಕ, ವಿಚಾರ, ವಾದಗಳನ್ನು ಮಂಡಿಸುವ ಪ್ರಾಚೀನ ಗ್ರಂಥಗಳನ್ನು, ಕಾವ್ಯ, ಪುರಾಣಗಳನ್ನು ರಚಿಸಿದರೆಂದು ಹೇಳಲಾಗುವ ಯಾವೊಬ್ಬ ಋಷಿ–ಮುನಿಯೂ ಆಧುನಿಕ ಕಾಲದ ಅರ್ಥದಲ್ಲಿ ಬ್ರಾಹ್ಮಣ ಜಾತಿಗೆ ಸೇರಿದವರಲ್ಲ. ಬ್ರಾಹ್ಮಣರೆಂದರೆ ಸತ್ಯ ಹೇಳುವವರು, ಸರಳ ಜೀವನ ನಡೆಸುವವರು, ದಯೆಯುಳ್ಳವರು ಮತ್ತು ಬ್ರಹ್ಮಜ್ಞಾನವನ್ನು ತಿಳಿದವರು, ಅಭ್ಯಸಿಸುವವರು ಎಂಬ ವಿವರಣೆ ಮಹಾಭಾರತದಲ್ಲಿ ಸಿಗುತ್ತದೆ. ಬ್ರಾಹ್ಮಣ ಎಂಬ ಪದ ಈ ಅರ್ಥದಲ್ಲಿ ಆಧುನಿಕ ಕಾಲದಲ್ಲಿ ಬಳಕೆಯಾಗುತ್ತಿಲ್ಲ. ಬ್ರಾಹ್ಮಣ ಎಂದರೆ ಕನಿಷ್ಠ ಜನಿವಾರ ಧರಿಸಿದ ವ್ಯಕ್ತಿಯ ಜಾತಿ ಸೂಚಕ ಪದ ಅಷ್ಟೆ.

ಬುದ್ಧನಿಗೂ ಹಿಂದೆ ವೈದಿಕಧರ್ಮದಲ್ಲಿ ಯಾವ ವಯಸ್ಸಿನಲ್ಲಿ ಯಾರು ಬೇಕಾದರೂ ಸನ್ಯಾಸಿಯಾಗುವ ಸೌಲಭ್ಯ ಇದ್ದಂತೆ ತೋರುವುದಿಲ್ಲ. ಬಾಲ ಸನ್ಯಾಸಿಗಳಂತೂ ಇರಲೇ ಇಲ್ಲ. ಬುದ್ಧನ ಉಪದೇಶದಿಂದ ಆಕರ್ಷಿತರಾಗಿ ಸನ್ಯಾಸಿಯಾದವರಿಂದ ಹಿಡಿದು, ಜೀವನದ ವೈಫಲ್ಯಗಳನ್ನು ಎದುರಿಸಲಾರದೆ ಹೊಣೆಗಾರಿಕೆಯಿಂದ ಪಲಾಯನ ಮಾಡಿದವರು, ಸಾಲ ತೀರಿಸಲಾಗದೆ ತಪ್ಪಿಸಿಕೊಂಡು ಸಂಘದ ಆಶ್ರಯ ಪಡೆದು ಸನ್ಯಾಸಿಗಳಾಗಿ ಬದುಕುತ್ತಿದ್ದವರ ವರೆಗೆ ನಾನಾ ಕಾರಣಗಳಿಗಾಗಿ ಬೌದ್ಧಭಿಕ್ಷುಗಳಾದ ಜನರು ಬುದ್ಧನ ಅನುಯಾಯಿಗಳಾಗಿದ್ದರು ಎಂದರೆ ಉತ್ಪ್ರೇಕ್ಷೆಯಾಗದು. ಬುದ್ಧ ಬಿಕ್ಷುಗಳು ಸಾಂಘಿಕವಾಗಿ ತಂಗಲು ಅನುವಾಗುವಂತೆ ಬೌದ್ಧವಿಹಾರಗಳನ್ನು ಬೌದ್ಧಮತದ ಅನುಯಾಯಿಗಳಾದ ರಾಜ ಮಹಾರಾಜರು ಕಟ್ಟಿಸಿಕೊಡುವುದಲ್ಲದೆ ದತ್ತಿಗಳನ್ನೂ ಕೊಡಮಾಡಿದರು.

ಒಂದು ಕಾಲದಲ್ಲಿ ಅಸ್ಪೃಶ್ಯತೆಯ ಆಚರಣೆಗಾಗಿ ಕುಪ್ರಸಿದ್ಧವಾಗಿದ್ದ ಕೇರಳದ ನಂಬೂದರಿ ಬ್ರಾಹ್ಮಣ ಪಂಗಡಕ್ಕೆ ಸೇರಿದ ಶಂಕರಾಚಾರ್ಯರು ನಮಗೆ ಗೊತ್ತಿರುವ ಮೊದಲ ಬಾಲ ಸನ್ಯಾಸಿ. ಎಂಟು ವರ್ಷಕ್ಕೇ (ವಟುವಾಗುವ ಬದಲು) ಜ್ಞಾನಸಿಂಧುವಾದ ಸನ್ಯಾಸಿಯಾದನೆಂದು ಹೇಳಲಾಗುವ ಅಸಾಮಾನ್ಯ ಪ್ರತಿಭೆಯ ಈ ಬಾಲಕ ತನ್ನ ಎಂಟನೆಯ ವರ್ಷದಲ್ಲಿ ಮೊಸಳೆಗೆ ಬಲಿಯಾಗಿ 'ಸತ್ತು' 'ಸಂನ್ಯಾಸಿ'ಯೆನಿಸಿದ ಮಿತ್ ಇದಕ್ಕೆ ಆಧಾರವೋ ಎಂದು ನಿರ್ಣಯಿಸುವುದು ಈಗ ಸಾಧ್ಯವಿಲ್ಲ. ಆದರೆ ಪ್ರತಿವಾದಿಗಳಿಂದ 'ಪ್ರಚ್ಛನ್ನ ಬೌದ್ಧ'ರೆಂದು ಕರೆಸಿಕೊಂಡ ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದರೆಂದು ಹೇಳಲಾಗುವ 'ಮಠ'ಗಳು, ಬೌದ್ಧವಿಹಾರಗಳ ಮಾದರಿಯನ್ನು ಅನುಸರಿಸಿ ಕಟ್ಟಿದವುಗಳು ಎಂಬುದು ಇಲ್ಲಿ ಪ್ರಸ್ತುತ. ತಾತ್ವಿಕವಾಗಿ ಎಲ್ಲಾ ಭೇದಗಳನ್ನು ನಿರಾಕರಿಸುವ ಅದ್ವೈತಮತವನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ ಸ್ಥಾಪಿಸಿದ ಈ ಮಠಗಳು ಇಂದು ಶಿಷ್ಯಕೋಟಿಯ ನೆಪವೊಡ್ಡಿ ಪೂಜೆ–ಪುನಸ್ಕಾರ, ಯಾಗ–ಹೋಮಗಳ ಮೂಢ ಕ್ರಿಯೆಗಳಲ್ಲಿ ಮುಳುಗಿ ಜಾತಿ ಆಧಾರಿತ ಉತ್ತಮಿಕೆಯ ಬ್ರಾಹ್ಮಣಿಕೆಯ ಮುದ್ರೆಯೊತ್ತುವ ಜಾತಿ ನೋಂದಣಿಯ ಧಾರ್ಮಿಕ ಕೇಂದ್ರಗಳಾಗಿವೆ.

'ರಾಮಕೃಷ್ಣ ಆಶ್ರಮ' ಮಾದರಿ

ವೈಧಾನಿಕವಾಗಿ 'ಸಂನ್ಯಾಸ' ಪಡೆಯದೆಯೂ ಚತುರ ಬುದ್ಧಿಜೀವಗಳಾದವರು ಯಾರು ಬೇಕಾದರೂ ಸಾಧು, ಸಂತ, ಭೈರಾಗಿ, ಬಾಬಾ, ಅವಧೂತ, ಸದ್ಗುರು, ಯತಿ ಎಂಬ ಹೆಸರಿಟ್ಟುಕೊಂಡು ಎಲ್ಲೋ ಕುಳಿತು ಜನರ ಬೆವರಿನ ಗಳಿಕೆಯಲ್ಲಿ ತಮ್ಮ ಶಕ್ತ್ಯಾನುಸಾರ ಸುಲಭ ಅಥವಾ ಐಷಾರಾಮೀ ಜೀವನ ನಡೆಸಬಹುದಾದ ಸೌಲಭ್ಯ ಈ ಆಧುನಿಕ ಕಾಲದಲ್ಲಿದೆ. ಮೌಢ್ಯದಿಂದ ಹೊರಬರಲಾಗದ ಜನಸಾಮಾನ್ಯರ ಮಾನಸಿಕ ಅಸಮತೋಲನಗಳನ್ನು, ಭೌತಿಕ ಕಷ್ಟಗಳನ್ನು ನಗದೀಕರಿಸಿ ರಾಜ್ಯದ ಮುಖ್ಯಮಂತ್ರಿಗಳಿಗಿಂತಾ ಹೆಚ್ಚಿನ ಅಧಿಕಾರ ಚಲಾಯಿಸುವ ಧಾರ್ಮಿಕ ಕೇಂದ್ರಗಳ 'ಧರ್ಮಾಧಿಕಾರಿ'ಗಳು ಸನ್ಯಾಸಿಯಾಗದೆಯೂ, ಶುಭ್ರ ಶ್ವೇತಾಂಬರಧಾರಿಯಾಗಿ ವೈರಾಗ್ಯ ನಿಧಿಯಂತೆ ಕಂಗೊಳಿಸಬಹುದು. ಇಷ್ಟಾದರೂ, ಜಾತಿಯಿಂದ ಬ್ರಾಹ್ಮಣರಲ್ಲದವರಿಗೆ ಸನ್ಯಾಸಿಯಾಗುವ ಅಧಿಕಾರವಿಲ್ಲ ಎಂದು ಹಿಂದೂ ಪುರೋಹಿತಶಾಹಿ ತಕರಾರು ತೆಗೆದು ಜಾತಿಯಿಂದ ಕಾಯಸ್ಥರಾದ 'ವೀರ ಸನ್ಯಾಸಿ' ವಿವೇಕಾನಂದರಿಗೆ ಕಿರುಕುಳ ಕೊಟ್ಟರು. ಆಗ ಅವರು ಬ್ರಹ್ಮಜ್ಞಾನ ಇದ್ದದ್ದೇ ಅಬ್ರಾಹ್ಮಣರ ಕೈಯಲ್ಲಿ. ಅದನ್ನು ಬ್ರಾಹ್ಮಣರು ಕ್ಷತ್ರಿಯರಿಂದ ಪಡೆದುಕೊಂಡರಾದ್ದರಿಂದ ಜಾತಿ ಬ್ರಾಹ್ಮಣರಾದ ಪುರೋಹಿತರಿಗೆ ಸನ್ಯಾಸಕ್ಕೆ ಯಾರು ಯೋಗ್ಯರು ಎಂಬ ಬಗ್ಗೆ ನಿರ್ಣಯಿಸುವ ಅಧಿಕಾರವೇ ಇಲ್ಲ ಎಂದು ತಿರುಗೇಟು ನೀಡಿದರು.

ಪಶ್ಚಿಮದ ಕ್ರೈಸ್ತ ಮಿಷಿನರಿಗಳ ಧಾರ್ಮಿಕ ಸೇವಾಕೇಂದ್ರಗಳ ಮಾದರಿಯನ್ನು ಅನುಸರಿಸಿ ಭಾರತದಲ್ಲಿ ರಾಮಕೃಷ್ಣ ಮಠವನ್ನು ವಿವೇಕಾನಂದರು ಸ್ಥಾಪಿಸಿದರು. ಕ್ರೈಸ್ತ ಮಿಷಿನರಿಗಳ ಕ್ರಿಸ್ತ ಮಠಗಳ ಮಾದರಿಯಂತೆ ದೇವರಿಗೆ ಸೇವೆ ಮಾಡುವುದೆಂದರೆ ದೀನ–ದಲಿತರಿಗೆ ಸೇವೆ ಮಾಡುವುದು ಎಂದು ಪ್ರತಿಪಾದಿಸುವ ರಾಮಕೃಷ್ಣ ಮಠದ ಮುಖ್ಯ ಕೇಂದ್ರದ ಆಡಳಿತ ನಿಯಂತ್ರಣಕ್ಕೊಳಪಟ್ಟು, ಅಧಿಕೃತ ಮಾನ್ಯತೆ ಪಡೆದ ಮಠದ ಉಪಕೇಂದ್ರಗಳು ಭಾರತದ ಎಲ್ಲೆಡೆ,

ಪುಟ 15 ಕ್ಕೆ

ಸರ್ವಾಧಿಕಾರಶಾಹಿಯ ದುರ್ನಾತ ಬರಲಾರಂಭಿಸಿದೆ

ಭಿನ್ನಮತಕ್ಕೆ ರಾಷ್ಟ್ರ-ವಿರೋಧ ಎಂದು ಹಣೆಪಟ್ಟಿ ಹಚ್ಚುವುದು, ಹಿಂದುತ್ವ ಅಜೆಂಡಾ ಈಡೇರಿಸಲು ದಲಿತರು ಮತ್ತು ಮುಸ್ಲಿಮರ ದಮನ, ವಿಶ್ವವಿದ್ಯಾಲಯಗಳಲ್ಲಿ ಪ್ರಭುತ್ವದ ದಮನಕಾರೀ ಹಸ್ತಕ್ಷೇಪ ಮತ್ತು ರಾಜಕೀಯ ವಿರೋಧವನ್ನು ಹತ್ತಿಕ್ಕಲು ಪೋಲೀಸ್ ಅಧಿಕಾರಗಳ ನಗ್ನ ಬಳಕೆ ಇಂತಹ ದುರ್ಗಂಧ ಬೀರಲಾರಂಭಿಸಿರುವುದನ್ನು ಸೂಚಿಸುತ್ತವೆ. ಇದು ಅಪ್ಪಟ ಸರ್ವಾಧಿಕಾರಶಾಹಿಯಲ್ಲದೆ ಬೇರೇನೂ ಅಲ್ಲ.



ಪ್ರಕಾಶ ಕಾರಟ್

ಕಳೆದ ಕೆಲವು ದಿನಗಳಲ್ಲಿ ಸರ್ವಾಧಿಕಾರಶಾಹಿಯ ಆತಂಕ ಹುಟ್ಟಿಸುವ ಅವಲಕ್ಷಣಗಳು ಕಾಣಿಸಿವೆ. ವ್ಯಂಗ್ಯವೆಂದರೆ, ಇದು ದಿಲ್ಲಿಯಲ್ಲಿ ರಾಮನಾಥ್ ಗೊಯಂಕಾ ಪ್ರಶಸ್ತಿ ಸಮಾರಂಭದಲ್ಲಿ ಪ್ರಧಾನ ಮಂತ್ರಿಗಳ ಭಾಷಣದ ಸಮಯದಿಂದ ಕಾಣುತ್ತಿದೆ. ಅಲ್ಲಿ ಅವರು ಪ್ರತಿಯೊಂದು ಪೀಳಿಗೆಯವರು ತುರ್ತು ಪರಿಸ್ಥಿತಿಯ ಬಗ್ಗೆ ಚಿಂತನೆ ನಡೆಸಬೇಕು, ಆಮೂಲಕ ಭವಿಷ್ಯದಲ್ಲಿ ಬೇರಾವ ರಾಜಕೀಯ ನಾಯಕರೂ ತುರ್ತು ಪರಿಸ್ಥಿತಿಯ ಪಾಪ ಮಾಡದಂತೆ ಆಗಬೇಕು ಎಂದಿದ್ದರು.

ಆ ಟಿಪ್ಪಣಿ ಎಷ್ಟು ಧೂರ್ತತನದ್ದು ಎಂಬುದು ಅದೇ ದಿನ (ನವಂಬರ್2 ರಂದು) ಪ್ರಕಟವಾಯಿತು. ಆತ್ಮಹತ್ಯೆ ಮಾಡಿಕೊಂಡ ನಿವೃತ್ತ ಸುಬೇದಾರ್ ರಾಮ್‌ಕಿಶನ್ ಕುಟುಂಬದವರನ್ನು ಭೇಟಿ ಮಾಡಲು ಹೊರಟ ದಿಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಉಪಮುಖ್ಯಮಂತ್ರಿ ಮಾನಿಷ್ ಸಿಸೋಡಿಯ ರವರನ್ನು ಬಂಧಿಸಲಾಯಿತು. ರಾಜಕೀಯ ಮುಖಂಡರ ಸಾಮಾನ್ಯ ಚಟುವಟಿಕೆಗಳು ಸರಕಾರಕ್ಕೆ ಅಪಮಾನ ದಂತಾಗಿದೆ, ಕಾನೂನು ವ್ಯವಸ್ಥೆಯ ಉಲ್ಲಂಘನೆ ಯೆಂದಾಗಿದೆ.

ಪ್ರಧಾನ ಮಂತ್ರಿಗಳ ಭಾಷಣದ ಎರಡು ದಿನಗಳ ಮೊದಲು ಎಂಟು ವಿಚಾರಣಾಧೀನ ಕೈದಿಗಳು, ಸಿಮಿ ಸದಸ್ಯರು ಎನ್ನಲಾದವರು ಭೋಪಾಲ್ ಸೆಂಟ್ರಲ್ ಜೈಲಿನಿಂದ ಪರಾರಿಯಾದರು. ಅವರನ್ನು ಅಲ್ಲಿಂದ 15 ಕಿ.ಮೀ. ದೂರದಲ್ಲೇ ಪೋಲೀಸರು ಗುಂಡಿಟ್ಟು ಕೊಂದರು. ಆ ಮಂದಿ ನಿಶ್ಶಸ್ತ್ರರಾಗಿದ್ದರು, ಪೋಲೀಸರು ಅವರನ್ನು ಸುತ್ತುವರೆದಿದ್ದರು. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಭಯೋತ್ಪಾದಕರನ್ನು ಹಲವು ವರ್ಷಗಳಿಂದ ಜೈಲಿನಲ್ಲಿಟ್ಟು ಚಿಕನ್ ಬಿರ್ಯಾನಿ ತಿನ್ನಿಸಲಾಗುತ್ತಿತ್ತು ಎಂದು ಈ ರೀತಿ ಸಾಯಿಸಿದ್ದನ್ನು ಸಮರ್ಥಿಸಿಕೊಂಡರು. ಮಧ್ಯಪ್ರದೇಶದಲ್ಲಿನ ಬಿಜೆಪಿ ಸರಕಾರಕ್ಕೆ ಯಾರಿಗಾದರೂ ಭಯೋತ್ಪಾದಕ ಎಂದು ಹಣೆಪಟ್ಟಿ ಹಚ್ಚಿದರೆ ಸಾಕು, ಅವರನ್ನು ನ್ಯಾಯಾಂಗ-ಬಾಹಿರವಾಗಿ ಇಲ್ಲದಂತೆ ಮಾಡಲೇನು ಅಡ್ಡಿಯಿಲ್ಲ. ಮೋದಿ ಸರಕಾರದ ನಿಲುವೂ ಏನೂ ಬೇರೆಯಿಲ್ಲ. ಗೃಹರಾಜ್ಯಮಂತ್ರಿ ಕಿರಣ್ ರಿಜ್ಜು ಅಧಿಕಾರಿಗಳನ್ನು, ಪೋಲೀಸರನ್ನು ಪ್ರಶ್ನಿಸಬಾರದು ಎಂದು ಎಚ್ಚರಿಸಿದರು. ಅದು ನಮ್ಮ 'ಸಂಸ್ಕೃತಿ'ಗೆ ವಿರುದ್ಧವಾದದ್ದು ಎಂದರು. ಈ ರೀತಿ ಪ್ರಶ್ನಿಸುವುದು 'ರಾಷ್ಟ್ರ-ವಿರೋಧಿ' ಚಟುವಟಿಕೆ ಎಂಬುದು ಅದರ ಅರ್ಥ.

ಪೋಲೀಸರಿಗೆ ಸ್ವೇಚ್ಛಾಚಾರದ ಮತ್ತು ಪಕ್ಷಪಾತಪೂರ್ಣ ವರ್ತನೆಗೆ ಹೆಚ್ಚೆಚ್ಚು ಪರವಾನಿಗೆ ಸಿಗುತ್ತಿದೆ ಎಂಬುದು ಇನ್ನೆರಡು ಘಟನೆಗಳಲ್ಲೂ ವೇದ್ಯವಾಗಿದೆ. ಮೊದಲನೇಯದ್ದು, ಜೆಎನ್‌ಯು ವಿದ್ಯಾರ್ಥಿ ನಜೀಬ್ ಅಹ್ಮದ್ ಕಾಣೆಯಾಗಿರುವ ವಿಷಯದಲ್ಲಿ ದಿಲ್ಲಿ ಪೋಲೀಸರ ವರ್ತನೆ. ನಜೀಬ್‌ನನ್ನು ದೈಹಿಕವಾಗಿ ಹೊಡೆದ ಎಬಿವಿಪಿ ವಿದ್ಯಾರ್ಥಿಗಳನ್ನು ಮೂರು ವಾರಗಳ ವರೆಗೂ ವಿಚಾರಣೆ ಮಾಡಲು ಅವರು ನಿರಾಕರಿಸಿದರು. ಬದಲಿಗೆ, ಈ ಸಡಿಲತೆಯನ್ನು ಪ್ರತಿಭಟಿಸಿ ಇಂಡಿಯಾ ಗೇಟ್ ಬಳಿ ನೆರೆದ ವಿದ್ಯಾರ್ಥಿಗಳನ್ನೇ ಎಳೆದಾಡಿದರು. ಆ ಪೋಲೀಸರು ನಜೀಬ್ ತಾಯಿಯನ್ನೂ ಬಿಡಲಿಲ್ಲ, ಎಳೆದೊಯ್ದು ಬಂಧಿಸಿದರು.

ಎರಡನೇ ಘಟನೆಯಲ್ಲಿ, ಛತ್ತಿಸ್‌ಗಢ್‌ನ ಪೋಲೀಸರು ದಿಲ್ಲಿ ವಿಶ್ವವಿದ್ಯಾಲಯ ಮತ್ತು ಜೆಎನ್‌ಯು ಇಬ್ಬರು ಪ್ರಾಧ್ಯಾಪಕರು, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮತ್ತಿತರ ಕೆಲವು ಕಾರ್ಯಕರ್ತರ ವಿರುದ್ಧ ಕೊಲೆ ಮತ್ತು ಕೊಲೆಯ ಪಿತೂರಿಯ ಎಫ್‌ಐಆರ್ ದಾಖಲಿಸಿದರು. ನವಂಬರ್4ರಂದು ಬಸ್ತಾರ್‌ನ ಹಳ್ಳಿಯೊಂದರಲ್ಲಿ ಒಬ್ಬ ಆದಿವಾಸಿಯ ಕೊಲೆಯ ನಂತರ ಈ ಆರೋಪಗಳನ್ನು ಹೊರಿಸಲಾಗಿದೆ.

ಆರು ತಿಂಗಳ ಹಿಂದೆ, ಮೇ ತಿಂಗಳಲ್ಲಿ ಅಧ್ಯಯನಕಾರರು ಮತ್ತು ರಾಜಕೀಯ ಕಾರ್ಯಕರ್ತರ ತಂಡವೊಂದು ಆ ಪ್ರದೇಶಕ್ಕೆ ಭೇಟಿ ನೀಡಿತ್ತು. ಆತಂಡ ಪೋಲೀಸರು ಮತ್ತು ಅವರ ಬಾಲಂಗೋಚಿಗಳು ಅಮಾಯಕ ಆದಿವಾಸಿಗಳ ವಿರುದ್ಧ ಅತ್ಯಾಚಾರಗಳನ್ನು ಬಯಲಿಗೆಳೆದ್ದಕ್ಕೆ ಪ್ರತೀಕಾರವಾಗಿ ಕೊಲೆಯ ಸುಳ್ಳು ಆರೋಪವನ್ನು ಅವರ ಮೇಲೆ ಹಾಕಲಾಗಿದೆ.

ನವಂಬರ್2ರ ಭಾಷಣದಲ್ಲಿ ಮೋದಿ ಇನ್ನೊಂದು ಗೋಸುಂಬೆ ಘೋಷಣೆ ಮಾಡಿದ್ದರು. ಮಾಧ್ಯಮಗಳು ಪ್ರತಿ ಮುಂದಿನ ಪೀಳಿಗೆಗೆ 'ಪ್ರಜಾಪ್ರಭುತ್ವವನ್ನು ಹರಿತಗೊಳಿಸುವ' ಒಂದು ಉಪಕರಣವಾಗಬೇಕು ಎಂದಿದ್ದರು. ಎರಡು ದಿನಗಳ ನಂತರ ಸರಕಾರ ಎನ್‌ಡಿಟಿವಿ ಇಂಡಿಯಾ ವಾಹಿನಿಗೆ 24 ಗಂಟೆಗಳ ನಿಷೇಧ ಹಾಕಿತು. ಅದರ ಮೇಲಿನ ಆರೋಪ ಎಂದರೆ ಹತ್ತು ತಿಂಗಳ ಹಿಂದೆ ಪಠಾಣಕೋಟ್ ದಾಳಿಯ ಬಗ್ಗೆ ಅದರ ಕವರೇಜ್ ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುವಂತದ್ದು ಎಂದು. ಇದು ಒಂದು ಮುಖ್ಯವಾಹಿನಿಯ ಚಾನೆಲ್ ಮೇಲೆ ಹೇರಿದ ಮೊತ್ತಮೊದಲ ನಿಷೇಧದ ಆಜ್ಞೆಯಾಗಿದೆ. ಮಾಧ್ಯಮಗಳ ಬಾಯಿ ಮುಚ್ಚಿಸುವ ಈ ಕ್ರಮದ ವಿರುದ್ಧ ವ್ಯಾಪಕ ಆಕ್ರೋಶದ ನಂತರ ಆ ನಿಷೇಧವನ್ನು ತಡೆ ಹಿಡಿಯಲಾಗಿದೆ. ಆದರೆ ಸರಕಾರ ವಿಚಲಿತವಾದಂತಿಲ್ಲ. ಏಕೆಂದರೆ, ಮಾಹಿತಿ ಮತ್ತು ಪ್ರಸಾರ ಮಂತ್ರಿಗಳು ರಾಷ್ಟ್ರೀಯ ಭದ್ರತೆಯ ಹೆಸರಲ್ಲಿ ಈ ರೀತಿಯ ಮಾಧ್ಯಮ ನಿಷೇಧದ ಆಜ್ಞೆ ಯಲ್ಲಿ ತಪ್ಪೇನೂ ಇಲ್ಲ ಎಂದಿದ್ದಾರೆ.

ಮೋದಿಯ ಆಳ್ವಿಕೆಯಲ್ಲಿ ವಿಷಕಾರೀ ರಾಷ್ಟ್ರೀಯವಾದದ ಈ ದುರ್ಗಂಧ ಉಂಟಾಗ ಲಾರಂಭಿಸಿದೆ-ಭಿನ್ನಮತಕ್ಕೆ ರಾಷ್ಟ್ರ-ವಿರೋಧ ಎಂದು ಹಣೆಪಟ್ಟಿ ಹಚ್ಚುವುದು, ಹಿಂದುತ್ವ ಅಜೆಂಡಾ ಈಡೇರಿಸಲು ದಲಿತರು ಮತ್ತು ಮುಸ್ಲಿಮರ ದಮನ, ವಿಶ್ವವಿದ್ಯಾಲಯಗಳಲ್ಲಿ ಪ್ರಭುತ್ವದ ದಮನಕಾರೀ ಹಸ್ತಕ್ಷೇಪ ಮತ್ತು ರಾಜಕೀಯ ವಿರೋಧವನ್ನು ಹತ್ತಿಕ್ಕಲು ಪೋಲೀಸ್ ಅಧಿಕಾರಗಳ ನಗ್ನ ಬಳಕೆ ಇಂತಹ ದುರ್ಗಂಧ ಬೀರಲಾರಂಭಿಸಿರುವುದನ್ನು ಸೂಚಿಸುತ್ತವೆ. ಇದು ಅಪ್ಪಟ ಸರ್ವಾಧಿಕಾರಶಾಹಿಯಲ್ಲದೆ ಬೇರೇನೂ ಅಲ್ಲ.



ವ್ಯಂಗ್ಯಚಿತ್ರ: ಅದ್ವರ್ಯು, ಟೈಂಸ್ ಆಫ್ ಇಂಡಿಯ

ಎಲ್ಲೆಡೆ ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ

'ಕ್ರಾಂತಿಯ ಸಾಕಾರಕ್ಕೆ ಪಣ'

ಕಲಬುರಗಿ : 'ನವ ಉದಾರವಾದಿ ಆರ್ಥಿಕ ನೀತಿಯು ಬಂಡವಾಳಶಾಹಿಗಳ ಪರವಾಗಿದೆ. ಇದ-ರಿಂದಾಗಿಯೇ ಜಗತ್ತಿನಲ್ಲಿ ಶೇ.1ರಷ್ಟು ಜನರು ಮಾತ್ರ ಅತ್ಯಂತ ಶ್ರೀಮಂತರಾಗಿದ್ದು, ಕಾರ್ಮಿಕರ ಸ್ಥಿತಿ ಸೋಚನೀಯವಾಗುತ್ತಿದೆ' ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ॥ವಿ. ಜೆ.ಕೆ.ನಾಯರ್‌ರವರು ಹೇಳಿದರು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕಲಬುರಗಿ ಜಿಲ್ಲಾ ಸಮಿತಿಯಿಂದ ಅಕ್ಟೋಬರ್ 07ರಂದು ನಗರದ ಹೈದರಾಬಾದ್ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ 'ಅಕ್ಟೋಬರ್ ಕ್ರಾಂತಿ' ಶತಮಾನೋತ್ಸವ ವರ್ಷಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮ್ಮ ದೇಶದಲ್ಲಿ ಹೊಸ ಉದಾರವಾದಿ ಆರ್ಥಿಕ ನೀತಿ ಜಾರಿಯಾಗಿ 25 ವರ್ಷಗಳಾಗಿದ್ದು, ಕಾರ್ಮಿಕರ ವೇತನ ಕುಸಿಯುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಬಂಡವಾಳಶಾಹಿ ವ್ಯವಸ್ಥೆಗೆ ಸಮಾಜವಾದವೇ ಪರ್ಯಾಯ ಎಂಬ ಘೋಷಣೆ ಜಾಗತಿಕವಾಗಿ ಬಲ ಪಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಎಲ್ಲ ಉತ್ಪಾದನಾ ಸಾಧನಗಳು ಮತ್ತು ವಿತರಣಾ ವ್ಯವಸ್ಥೆಯನ್ನು ಸಾಮಾಜಿಕರಣಗೊಳಿಸಿದರೆ ಕಾರ್ಮಿಕರ ಶೋಷಣೆ ತಡೆ ಸಾಧ್ಯ ಎಂಬುದು ನಮ್ಮ ಪಕ್ಷದ ಅಚಲ ವಿಶ್ವಾಸ' ಎಂದರು. 'ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ'ವನ್ನು ಇಡೀ ವರ್ಷ ಆಚರಿಸುವ ಮೂಲಕ ರಾಷ್ಟ್ರದಲ್ಲಿಯೂ ಈ ಕ್ರಾಂತಿಯ ಸಾಕಾರಕ್ಕೆ ಪಣತೊಡಲಾಗಿದೆ. ಎಂದು ಹೇಳಿದರು.

ಪಕ್ಷದ ಜಿಲ್ಲಾ ಘಟಕದ ಕಾರ್ಯದರ್ಶಿ ಶರಣಬಸಪ್ಪ ಮಮಶೆಟ್ಟಿ, ಪಾಂಡುರಂಗ, ಅಶೋಕ ಮ್ಯಾಗೇರಿ, ಸಿದ್ದಲಿಂಗಯ್ಯಸ್ವಾಮಿ ಯಂಪಳ್ಳಿ, ಗಂಗಮ್ಮ ಬಿರಾದಾರ ಇದ್ದರು.

ವೈಚಾರಿಕ-ಸಾಂಸ್ಕೃತಿಕವಾಗಿ ಆಚರಿಸಲು ಚಾಲನೆ

ಕಾರವಾರ: 1917ರ ನವಂಬರ್ 7ರಂದು ಪ್ರಥಮ ಬಾರಿಗೆ ದುಡಿಯುವ ಜನತೆಯ ಕೈಗೆ ಅಧಿಕಾರವನ್ನು ತಂದಿತ್ತ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವವನ್ನು ಉತ್ತರ ಕನ್ನಡ ಜಿಲ್ಲೆಯ ಸಿಐಟಿಯು ಕಾರವಾರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ನವೆಂಬರ್ 07ರಂದು ವಿಭಿನ್ನವಾಗಿ ಆಚರಿಸಿತು.


ಒಡಿಶಾದ ಪುರಿಯಲ್ಲಿ ಇದೇ 26 ರಿಂದ 30ರವರೆಗೆ ಸಿಐಟಿಯು ರಾಷ್ಟ್ರ ಸಮ್ಮೇಳನ ನಡೆಯಲಿದ್ದು, ಇದರ ಯಶಸ್ಸನ್ನು ಹಾರೈಸಿ ನಗರದ ಸಿಐಟಿಯು ಕಛೇರಿ ಮುಂಭಾಗ ಸಂಘಟನೆಯ ಬಾವುಟವನ್ನು ಪೌರಕಾರ್ಮಿಕರ ಜಿಲ್ಲಾ ಮುಖಂಡರಾದ ರಮೇಶಬಾಬು ಆರೋಹಣ ಮಾಡಿದರು. ಶತಮಾನೋತ್ಸವದ ನೆನಪಿನಲ್ಲಿ ಸಿಐಟಿಯು ಕಾರವಾರದಲ್ಲಿ ಪ್ರತಿ ತಿಂಗಳು ಸಂಘಟಿಸುವ ವೈಚಾರಿಕ - ಸಾಂಸ್ಕೃತಿಕ ಕೆಲಸಕ್ಕೆ ಹಿರಿಯ ರಂಗಕರ್ಮಿ ಕಿರಣ ಭಟ್ ಇದೇ ಸಂದರ್ಭದಲ್ಲಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಂಕಷ್ಟದಿಂದ ಹೊರಬರಲು ಜನರು ಹೋರಾಟದ ಹಾದಿ ಹಿಡಿದಿದ್ದಾರೆ. ಇದಕ್ಕೆ ಮೊದಲ ಮಹಾಯುದ್ಧದ ಅಂತ್ಯದಲ್ಲಿ ಜನತೆಯ ಕೈಗೆ ಅಧಿಕಾರ ಪಡೆದ ಸಮಾಜವಾದಿ ವ್ಯವಸ್ಥೆ ಸ್ಪೂರ್ತಿ, ಜನತಾ ಸರ್ಕಾರ ರೈತರಿಗೆ ಭೂಮಿ, ನೀಡಿದ ಪ್ರಥಮ ಕಾನೂನು ತಂದಿತು, ಜತೆಗೆ ಶಾಂತಿಗಾಗಿ ಕಾನೂನನ್ನು ರೂಪಿಸಿ ಜಾರಿಗೊಳಿಸಿದ ಕ್ರಮಗಳು ಇಂದಿಗೂ ಜಗತ್ತಿಗೆ ಮಾದರಿ ಎಂದು ಹೇಳಿದರು.


ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವಕರ್ ಮಾತನಾಡಿ '1789ರ ಫ್ರೆಂಚ್ ಕ್ರಾಂತಿಯಾದಿಯಾಗಿ ಘಟಿಸಿದ್ದ ಹಲವು ಕ್ರಾಂತಿಗಳಿಗಿಂತ ರಷ್ಯದ ಅಕ್ಟೋಬರ್ ಕ್ರಾಂತಿ ಭಿನ್ನವಾದದ್ದು. ಅದುವರೆಗೆ ಶೋಷಿತ ವರ್ಗವಾಗಿದ್ದ ದುಡಿಯುವ ವರ್ಗ ಮತ್ತದರ ಮಿತ್ರರಾದ ಬಡ ರೈತಪಿ ಜನತೆ ಕ್ರಾಂತಿಯನ್ನು ಮುನ್ನಡೆಸಿ ಆಳುವ ಬಂಡವಾಳಶಾಹಿ ಮತ್ತು ಶೋಷಕ ವರ್ಗಗಳನ್ನು ಕಿತ್ತೆಸೆದ ಕಾರಣ ಅದನ್ನು ಜಗತ್ತಿನ ಪ್ರಥಮ ಸಮಾಜವಾದಿ ಕ್ರಾಂತಿ ಎಂದೇ ಕರೆಯಲಾಗಿದೆ.

ಎಳು ದಶಕಗಳ ದೀರ್ಘ ಕಾಲಾವಧಿಯ ಪ್ರಥಮ ಸಮಾಜವಾದಿ ಸಮಾಜಕ್ಕೆ ನಾಂದಿ ಹಾಡಿದ್ದ ಅಕ್ಟೋಬರ್ ಕ್ರಾಂತಿ ಬಲಿಷ್ಠ ರೈತ ಕಾರ್ಮಿಕರ ಸಖ್ಯತೆಯ ಬುನಾದಿಯ ಮೇಲೆ ನಿರ್ಮಿತವಾಗಿತ್ತು. ಮಾನವ ಜನಾಂಗಕ್ಕೆ ಹೊಸ ಪಥವನ್ನು ತೆರೆದಿಟ್ಟಿತ್ತು. ಹಿಂದೆಂದು ಕ್ರಮಿಸದ ಹೊಸ ಜಾಡಿನಲ್ಲಿ ಮೊದಲ ಸಮಾಜವಾದಿ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ತನ್ನನ್ನು ಸುತ್ತುವರಿದಿದ್ದ ಬಂಡವಾಳಶಾಹಿ ಪ್ರಭುತ್ವಗಳ ನಡುವೆ ವಿಜ್ಞಾನ ತಂತ್ರಜ್ಞಾನ, ಆರೋಗ್ಯ ಮುಂತಾದರಲ್ಲಿ


ಪುಟ 15 ಕ್ಕೆ



ಕಲಬುರ್ಗಿ



ಕಾರವಾರ




ಹಾಸನ

ಸಮಾಜವಾದಿ ಕ್ರಾಂತಿಯತ್ತ ಸಾಗಲು

ಎಡಪಂಥೀಯರು ಹೊಸ ಪರಿಭಾಷೆ ರೂಪಿಸಬೇಕಾಗಿದೆ: ಬರಗೂರು

ಸಮಾಜವಾದಿ ಶತಮಾನೋತ್ಸವ ವರ್ಷಾಚರಣೆ ಸಂಭ್ರಮದ ಉದ್ಘಾಟನೆ



"ಎಡಪಂಥೀಯರೆಂದೂ ಜಡಪಂಥೀಯರಾಗ ಬಾರದು. ಎಡ–ಬಲ ಅಲ್ಲದೇ ಎಡ–ಜಡಪಂಥೀಯರ ನಡುವೆಯೂ ನಮ್ಮ ಸಂಘರ್ಷವನ್ನು ಮಾಡಬೇಕಿದೆ. ಎಡಪಂಥೀಯತೆ ಎಂದಿಗೂ ಜಡವಾಗಕೂಡದು. ಜನರನ್ನು ಬದಲಾಯಿಸುವ ಭಾಷೆ ಮೊದಲು ನಮ್ಮ ಒಳಗೆ ತರಬೇಕಿದೆ. ನಮ್ಮ ಮೂಲ ತತ್ವ ಸಿದ್ಧಾಂತಗಳನ್ನು ಬದ್ಧತೆಗಳನ್ನು ಬಿಟ್ಟುಕೊಡದೆ, ಸಮಾಜವಾದಿ ತಾತ್ವಿಕತೆ ಜನರನ್ನು ತಲುಪುವ ಹೊಸ ಪರಿಭಾಷೆ ರೂಪಿಸಬೇಕಾಗಿದೆ. ಮೂಲಭೂತವಾದವನ್ನು ವಿರೋಧಿಸುವುದು ಮಾತ್ರ ಎಡ–ಬಲಪಂಥೀಯತೆಗಳ ನಡುವಿನ ಪ್ರಧಾನ ವ್ಯತ್ಯಾಸ ಅಲ್ಲ, ಬದಲಾಗಿ ಅದು ಒಂದು ಭಾಗ. ಇಂದು ಆರ್ಥಿಕತೆಯ ಕೇಂದ್ರೀಕರಣ ಹೆಚ್ಚಾಗುತ್ತಿದೆ. ಭಯೋತ್ಪಾದನೆ, ಯುದ್ಧೋನ್ಮಾದ ಪ್ರಧಾನವಾಗುತ್ತಿದೆ. ರಾಜಕೀಯ ಎಂಬ ಶಬ್ದವೇ ಇಂದು ಹೊಲಸಾಗಿದೆ. ಬಾಷೆಯಲ್ಲೂ ಎಚ್ಚರ ವಹಿಸಬೇಕಾದ ಸನ್ನಿವೇಶ ನಿರ್ಮಾಣವಾಗಿದೆ. ಏನೇ ಮಾತಾಡಲಿ ಅನ್ಯಾರ್ಥ, ಅಪಾರ್ಥಗಳನ್ನು ಕಲ್ಪಿಸಿ ಅನರ್ಥಕ್ಕೆ ಕಾರಣವಾಗುತ್ತದೆ." ಎಂದು ಹಿರಿಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪರವರು ಎಚ್ಚರಿಕೆ ನೀಡಿದರು.





ಅವರು ನವೆಂಬರ್ 6 ರಂದು ಸಮಾಜವಾದಿ ಕ್ರಾಂತಿ ಶತಮಾನೋತ್ಸವ ವರ್ಷ ಆಚರಣಾ ಸಮಿತಿಯು ಬೆಂಗಳೂರಿನ ಸಚಿವಾಲಯ ನೌಕರರ ಕ್ಲಬ್‌ನಲ್ಲಿ ಹಮ್ಮಿಕೊಂಡಿದ್ದ ವರ್ಷಪೂರ್ತಿ ಆಚರಣೆಯ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ದಿನ ಪೂರ್ತಿ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ನಡೆಯಿತು. ಮುಂದುವರೆದು ಮಾತನಾಡಿದ ಬರಗೂರು ಅವರು "ಇಂದಿಗೂ ಸಹ ವ್ಯಾಖ್ಯಾನವನ್ನು ಬದಲಿಸುವ ಕೆಲಸ ಆಗುತ್ತಿಲ್ಲ. ನಮ್ಮ ಮನಸ್ಸು ಮತ್ತು ದೇಹ ಎರಡ ಆಲೋಚನೆಯನ್ನು ಹೊಸ ಮಾರ್ಗದೆಡೆಗೆ ಬದಲಿಸುವ ಅವಶ್ಯಕತೆ ಇದೆ. ಭಾವೈಕ್ಯತೆ ಮೂಲಕ ಏಕತೆ ಸಾಧಿಸಲು ಸಾಧ್ಯವಿದೆ. ಈಗೀನ ಕಾಲದಲ್ಲಿ ಹೊಸ ಪರಿಭಾಷೆಯನ್ನು ಕಂಡುಹಿಡಿಯಬೇಕಿದೆ. ಹೊಸ ಯೋಚನೆಗಳನ್ನು ನಾವು ಮಾಡಬೇಕಿದೆ. ಆ ಮೂಲಕ ಕ್ರಾಂತಿಗೆ ಕೊಂಡ್ಯೊಯ್ಯಲು, ಬದಲಾವಣೆ ತರಲು ಸಾಧ್ಯವಿದೆ." ಎಂದರು.

ರಷ್ಯಾದ ಕ್ರಾಂತಿಯೂ ಬಂಡವಾಳಶಾಹಿ ಸಮಾಜಕ್ಕೆ ಸಮಾಜವಾದಿ ಪರ್ಯಾಯವನ್ನು ರೂಪಿಸಿತು. ರಷ್ಯಾದ ಕ್ರಾಂತಿ ವಿಶ್ವದ ಎಲ್ಲೆಡೆ ಪ್ರಭಾವ ಬೀರಿದೆ. ನಮ್ಮ ದೇಶದಲ್ಲೂ ರವೀಂದ್ರನಾಥ್ ಟ್ಯಾಗೋರ್, ಕುವೆಂಪು, ಹಲವರು ಮಾರ್ಕ್ಸ್‌ವಾದಿಗಳಲ್ಲದವರ ಮೇಲೂ ಗಾಢವಾದ ಪ್ರಭಾವ ಬೀರಿದೆ. ಟ್ಯಾಗೋರ್ ಅವರಂತೂ ಶಿಕ್ಷಣದಲ್ಲಿ ಸೋವಿಯೆಟ್ ಒಕ್ಕೂಟದಲ್ಲಿ ನಡೆದ ಅಗಾಧ ಬದಲಾವಣೆಗಳನ್ನು ಬಹಳಷ್ಟು ಮೆಚ್ಚಿಕೊಂಡಿದ್ದರು. ಬಂಡವಾಳಶಾಹಿ ಸಹ ಸಾಕಷ್ಟು ಪರಿಷ್ಕರಣಗಳನ್ನು ಮಾಡಬೇಕಾಯಿತು ಎಂದು ಬರಗೂರು ಅವರು ಹೇಳಿದರು.

ಬರಗೂರು ಅವರು ತಮ್ಮ ಉದ್ಘಾಟನಾ ಭಾಷಣದ ಮೊದಲು, ಪುಸ್ತಕಪ್ರೀತಿಯ 'ಅಕ್ಟೋಬರ್ ಕ್ರಾಂತಿ–100 ಪ್ರಕಟಣೆ ಮಾಲೆ'ಯ ನಾಲ್ಕು ಪುಸ್ತಕಗಳಾದ 'ಅಕ್ಟೋಬರ್ ಕ್ರಾಂತಿ – ಮನುಕುಲಕ್ಕೆ ಹೊಸ ಹಾದಿ', 'ನೆನೆ ಆ ದಿನಗಳ – ಅಕ್ಟೋಬರ್ ಕ್ರಾಂತಿಯ ರೋಚಕ ಕಥೆ', 'ಅಕ್ಟೋಬರ್ ಕ್ರಾಂತಿ – ವಾಸ್ತವವಾಗಿ ನಡೆದದ್ದೇನು' (ಕಾಮಿಕ್ಸ್ ರೂಪದಲ್ಲಿ), 'ಸೋವಿಯತ್ ಒಕ್ಕೂಟ – ನಿಮಗೆ ತಿಳಿದಿರಲಿ' ಎಂಬ ಪುಸ್ತಕಗಳನ್ನು ಸಾಹಿತಿ ಬಿಡುಗಡೆಗೊಳಿಸಿದರು.

ಮೊದಲ ಆದ್ಯತೆ ಹಸಿವು ಮುಕ್ತ ಭಾರತ

1900ರ ಇಸವಿಯಲ್ಲೇ ಲೆನಿನ್‌ರವರು ಕಾರ್ಮಿಕ ಹೋರಾಟಗಳು ಕೇವಲ ತುಟ್ಟಿ ಭತ್ಯೆ, ಸೌಲಭ್ಯಗಾಗಿ ಅಷ್ಟೆ ಅಲ್ಲ. ಒಟ್ಟಾರೆ ಸಮಾಜದ ಬದಲಾವಣೆಗೆ ಕಾರ್ಮಿಕರು ಮುಂದಾಗಬೇಕು ಆ ಮೂಲಕ ಕ್ರಾಂತಿಯಾಗಲು ಸಾಧ್ಯವಿದೆ ಎಂದು ಹೇಳಿದರು. ಅಂತಹ ಕ್ರಾಂತಿ 70ಕ್ಕೂ ವರ್ಷಗಳ ನಂತರ 90ರ ದಶಕದಲ್ಲಿ ಬಾಹ್ಯ ಹಾಗೂ ಆಂತರಿಕ ಕಾರಣಗಳಿಂದಾಗಿ ಅಂತ್ಯಗೊಂಡಿತು. ಕ್ರಾಂತಿಯ ಪರಿಕಲ್ಪನೆಯಲ್ಲಿ ದೋಷ ಇಲ್ಲಿರಲಿಲ್ಲ. ಕ್ರಾಂತಿಯ ನಂತರದಲ್ಲಿ ಆಗುವ ಬದಲಾವಣೆಗೆ ಸರಿಯಾದ ಪ್ರತಿಕ್ರಿಯೆಗಳು ಬೇಕಾಗುತ್ತವೆ. ನಿಜವಾದ ಅರ್ಥದಲ್ಲಿ ಸಮಾನತೆ ಅಲ್ಲಿ ಇತ್ತು. ಆದರೆ ನಂತರದಲ್ಲಿ ಅಂತರ್ ಶಕ್ತಿ ಕುಗ್ಗುತ್ತಾ ಹೋಯಿತು. ಇದು ಯಾಕೆ ಆಯಿತು? ಬಾಹ್ಯ ಶಕ್ತಿಗಳ ಪ್ರಭಾವ ಬೀರುವುದರೊಟ್ಟಿಗೆ ಬಾಹ್ಯದಲ್ಲಿ ಆಗುತ್ತಿದ್ದ ಕಾರಣಗಳನ್ನು ಗುರುತಿಸಲು ಎದುರಿಸಲು ಸಾಧ್ಯವಾಗಲಿಲ್ಲವೇ? ಎಂಬುದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ಎಂದು ಬರಗೂರು ಅವರು ಒತ್ತಿ ಹೇಳಿದರು.

ಖಾಕಿ ಮತ್ತು ಕಾವಿಗೂ, ವಿಧಾನಸೌಧಕ್ಕೂ ಮಠಕ್ಕೂ ಇಂದು ವ್ಯತ್ಯಾಸ ಇಲ್ಲದಂತಾಗಿದೆ. ಸ್ವಚ್ಛ ಭಾರತ ಬೇಕಿರುವುದು ಬೀದಿಗಿಂತ ಹೆಚ್ಚಾಗಿ ರಾಜಕಾರಣಿಗಳ ಬಾಯಿಗೆ ಆಗಬೇಕಿದೆ. ಎಲ್ಲರಿಗೂ ಭೂಮಿ ಬೇಕಿದೆ. ಹಸಿವು ಮುಕ್ತ ಭಾರತ ಆಗಬೇಕು. 25 ವರ್ಷಗಳ ಹಿಂದೆ 7–8 ಜನ ಇದ್ದ ಬಂಡವಾಳದಾರರು ಇಂದು 100–200 ಜನಕ್ಕೆ ಒಳಗೊಂಡಿದೆ. ಜಗತ್ತಿನ 5ನೇ ಒಂದು ಭಾಗ ಬಡವರು ಭಾರತದಲ್ಲೇ ಇದ್ದಾರೆ. ನಮ್ಮ ಮೊದಲ ಆದ್ಯತೆ ಹಸಿವು ಮುಕ್ತ ಭಾರತ, ದಲಿತರಿಗೆ ಭೂಮಿ, ಆರ್ಥಿಕ ದೃಢತೆ ಆಗಬೇಕಾಗಿದೆ ಎಂದು ಅವರು ಹೇಳಿದರು.

"ಪ್ರತಿಗಾಮಿಗಳು ತೋಡಿದ ನಾವು ಖೆಡ್ಡಕ್ಕೆ ಬೀಳಬಾರದು. ಜನಗಳನ್ನು ನಮ್ಮವರನ್ನಾಗಿ ಮಾಡಿಕೊಳ್ಳಬೇಕು. ಕೋಮುವಾದವನ್ನು ಎದುರಿಸಲು ಸಾಂಸ್ಕೃತಿಕ ಕೆಲಸವೂ ಆಗಬೇಕಿದೆ. ಸಾವಧಾನದ ಚಿಂತನೆಗಳು ನಮ್ಮ ಒಳಗೂ ಬರಬೇಕಿದೆ. ಎಡ ಪಂಥ, ಪ್ರಗತಿಪರರು ಎಲ್ಲರಲ್ಲೂ ಬಿಕ್ಕಟ್ಟು ಇದೆ. ಅವೆಲ್ಲವನ್ನು ಪರಿಹರಿಸಿಕೊಂಡು ಜನರ ಬಳಿಗೆ ಹೋಗಬೇಕಿದೆ. ಈಗಿನಿಂದ ಪ್ರಾರಂಭವಾಗಿ ವರ್ಷಪೂರ್ತಿ ಪ್ರತಿ ತಿಂಗಳು ನಡೆಯುವ ಕಾರ್ಯಕ್ರಮಗಳು ಸಮಾಜವಾದಿ ಪರ್ಯಾಯ ರೂಪಿಸುವತ್ತ ಸಾಗಲಿ ಎಂದು ಬರಗೂರು ರಾಮಚಂದ್ರಪ್ಪನವರು ಹಾರೈಸಿದರು. ಅಂದಿನ ಕಾರ್ಯಕ್ರಮದ ರೂಪುರೇಷೆ ಮತ್ತು

ಕ್ಯಾಲೆಂಡರ್, ಲಾಂಛನ ಬಿಡುಗಡೆ

ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಚಿರಂಜೀವಿ ಸಿಂಗ್‌ರವರು ಶತಮಾನೋತ್ಸವ ನೆನಪಿನ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಚಲನಚಿತ್ರ ನಿರ್ದೇಶಕರಾದ ಎಂ.ಎಸ್.ಸತ್ಯುರವರು ಕೃಷ್ಣ ರಾಯಚೂರು ರವರು ರಚಿಸಿಕೊಟ್ಟ 'ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ'ದ ಲಾಂಛನ ಬಿಡುಗಡೆ ಮಾಡಿದರು.

ಎಂ.ಎಸ್.ಸತ್ಯುರವರು ಮಾತನಾಡಿ "ಕ್ರಾಂತಿ ಎಂಬುದು ಬಹಳಷ್ಟು ಕಳೆದುಕೊಂಡು ಬಹಳಷ್ಟು ಗಳಿಸಿಕೊಳ್ಳುತ್ತದೆ. ನಮ್ಮಲ್ಲಿ ಕಾಲಕ್ಕೆ ತಕ್ಕ ಹಾಗೇ ಬದಲಾವಣೆಗಳು ಆಗಬೇಕಿದೆ. ಬಂಡವಾಳಶಾಹಿ ಒಳಗೂ ಕ್ರಾಂತಿಯ ನಂತರ ಹಲವು ಬದಲಾವಣೆಗಳು ಸಂಭವಿಸಿದೆ. ಕಾರ್ಪೋರೇಟ್ ಕಂಪನಿಗಳಿಗೂ ಕಾರ್ಮಿಕರ ಬೆಳವಣಿಗೆ ಬಗ್ಗೆ ಗಮನ ಕೊಡಬೇಕಾಗಿ ಬಂದಿದೆ. ಇಂದು ಯಾರು ದೇಶಭಕ್ತರು, ಯಾರು ಅಲ್ಲ ಎಂಬ ಪ್ರಶ್ನೆಯಾಗಿದೆ. ಇತ್ತೀಚಿಗೆ ಇಂದೋರ್‌ನಲ್ಲಿ ನಡೆದ 'ಇಪ್ಟಾ'ದ ರಾಷ್ಟ್ರೀಯ ಸಮ್ಮೇಳನದಲ್ಲಿ ಸಂಘ ಪರಿವಾರದವರು ಅಲ್ಲಿ ನಾಟಕ ಪ್ರದರ್ಶನ ಆಗದಂತೆ ದಾಂಧಲೆ ಎಬ್ಬಿಸಿ ತಮ್ಮ ಅಟ್ಟಹಾಸ ಪ್ರದರ್ಶಿಸಿದರು." ಎಂದರು.

ಸ್ವಾತಂತ್ರ್ಯ ನಂತರದಲ್ಲಿ ದೇಶದಲ್ಲಿ ಕಾಂಗ್ರೆಸಿಗೆ ವಿರೋ ಧ ಪಕ್ಷವಾಗಿ ಕಮ್ಯೂನಿಸ್ಟರು ಮಾತ್ರ ಇದ್ದುದ್ದು. ಕೇರಳದಲ್ಲಿ ಇಎಂಎಸ್ ಅವರ ಮೊದಲ ಕಮ್ಯುನಿಸ್ಟ್ ಸರ್ಕಾರ ವಜಾ ಆದ ಸಂದರ್ಭ. ನನಗೆ ಪರಿಚಯವಿದ್ದ ಆಗಿನ ಕಾಂಗ್ರೆಸ್ ಅಧ್ಯಕ್ಷ ಇಂದಿರಾಗಾಂಧಿರವರನ್ನು ಭೇಟಿ ಮಾಡಿದ್ದಾಗ ಕಮ್ಯೂನಿಸ್ಟ್ ಸರ್ಕಾರ ಇದ್ದರೆ ದೇಶಕ್ಕೆ ಒಳ್ಳೆಯದು. ಕಾಂಗ್ರೆಸ್ ಕಮ್ಯುನಿಸ್ಟರಿಂದ ಕಲಿಯಲು ಸಾಧ್ಯವಿದೆ ಎಂದಿದ್ದೆ. ಮಾರ್ಕ್ಸಿಸಂನ ಮೊದಲ ಆದ್ಯತೆ ಶಿಕ್ಷಣ, ಶಿಕ್ಷಣ ಮನುಷ್ಯನಿಗೆ ಅತ್ಯಂತ ಅವಶ್ಯಕ, ಈಗಲೂ ಎಲ್ಲಾ ಕಮ್ಯೂನಿಸ್ಟ್ ಪಕ್ಷಗಳು ಒಟ್ಟುಗೂಡಿ ಕೆಲಸ ಮಾಡುವ ಅವಶ್ಯಕತೆ ಇದೆ. ಹೋರಾಟಗಳು ಒಟ್ಟುಗೂಡಬೇಕಿದೆ ಎಂದು ಎಂ.ಎಸ್.ಸತ್ಯುರವರು ಒತ್ತಿ ಹೇಳಿದರು. ಅವರು ಟಿಪ್ಪು ಸುಲ್ತಾನ್ ಜಯಂತಿ ವಿವಾದದ ಬಗ್ಗೆ ಅವರು ಮಾತನಾಡಿ, "ಸ್ವಾತಂತ್ರ್ಯ ಹೋರಾಟದಲ್ಲಿ ಹಲವರು ಭಾಗವಹಿಸಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ, ಸಂಗೊಳ್ಳಿ ರಾಯಣ್ಣ ಇತ್ಯಾದಿ. ಅವೆರಲ್ಲರೂ ದೇಶಭಕ್ತರೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಟಿಪ್ಪು ಸುಲ್ತಾನ್ ಸಹ ಬ್ರಿಟಿಷರ ವಿರುದ್ಧ ಹೋರಾಡಿದ್ದರೂ ಅವನನ್ನು ದೇಶಭಕ್ತನಾಗಿ ನೋಡುತ್ತಿಲ್ಲ. ಟಿಪ್ಪುನನ್ನು ವಿರೋಧಿಸುವುದು ಆತ ಮುಸ್ಲಿಂ ಎಂಬ ಕಾರಣದಿಂದ ಮಾತ್ರ. ಆತ ಹಿಂದೂವಾಗಿದ್ದರೆ ದೇಶಭಕ್ತನಾಗಿ ಬಿಡುತ್ತಿದ್ದ. ದೇಶ ಭಕ್ತಿ ಎಲ್ಲರಲ್ಲೂ ಇದೆ. ರೈತ–ಕಾರ್ಮಿಕರಲ್ಲೂ ಇದೆ." ಮುಂದುವರೆದು ಕೊಡವರ ಮೇಲೆ ನಡೆದ 'ದೌರ್ಜನ್ಯ' ಮತ್ತು 'ಮತಾಂತರ'ದ ಬಗ್ಗೆ ಆರೆಸ್ಸೆಸ್ ಮಾಡುತ್ತಿರುವ ಅಪಪ್ರಚಾರವನ್ನು ಐತಿಹಾಸಿಕ ಸತ್ಯಗಳನ್ನು

→







➡ ಮುಂದಿಡುತ್ತಾ ಬಲವಾಗಿ ಅಲ್ಲಗಳೆದರು.

ಗತವೈಭವದ ಹಳಹಳಿಕೆಯಲ್ಲ, ಉತ್ತಮ ಸಮಾಜವಾದಿ ಸಮಾಜ ಕಟ್ಟಲು

"ಈಗ ಪತನಗೊಂಡಿರುವ ಅಕ್ಟೋಬರ್ ರಶ್ಯನ್ ಕ್ರಾಂತಿಯ ಶತಮಾನೋತ್ಸವವನ್ನು ಯಾಕೆ ಆಚರಿಸಬೇಕು? ಇದು ಗತವೈಭವದ ಬಗ್ಗೆ ಹಳಹಳಿಕೆಯೇ? ಎಂದು ಬಹಳ ಜನ ನಮ್ಮನ್ನು ಕೇಳಬಹುದು, ಕೇಳುತ್ತಾರೆ ಕೂಡಾ. ಮಹಾನ್ ಅಕ್ಟೋಬರ್ ರಶ್ಯನ್ ಕ್ರಾಂತಿಯ ನೆನಪು ಮೈನವಿರೇಳಿಸುವಂತಹುದು ಎಂಬುದಕ್ಕೆ ಸಂಂಶಯವಿಲ್ಲ. ಆದರೆ ನಾವು ಶತಮಾನೋತ್ಸವವನ್ನು ಆಚರಿಸುತ್ತಿರುವುದು ಇಡೀ ಜಗತ್ತಿನ ಮೇಲೆ ಬೀರಿದ ಇನ್ನೂ ಬೀರುತ್ತಿರುವ ಪರಿಣಾಮಗಳ ಬಗ್ಗೆ, ಅದರ ಅಗಾಧ ಸಾಧನೆಗಳನ್ನು ನೆನಪು ಮಾಡಿಕೊಳ್ಳಲು. ಹಾಗೂ ಅದ–ಕ್ಕೆ ಹಿಂಜರಿತ ಏಕೆ ಉಂಟಾಯಿತು ಎಂದು ತಿಳಿದುಕೊಳ್ಳಲು ಕೂಡಾ. ಇದರಿಂದ ಈ ಮಹಾನ್ ಸಮಾಜವಾದಿ ಪ್ರಯೋಗದ ಅಗಾಧ ಸಾಧನೆಗಳನ್ನು ಮುಂದೊಯ್ಯಲು ಹಾಗೂ ಅದರ ನ್ಯೂನತೆ ತಪ್ಪುಗಳನ್ನು ಸರಿಪಡಿಸಿಕೊಂಡು, ನಾವು ಒಂದು ಇನ್ನೂ ಉತ್ತಮ ಸಮಾಜವಾದಿ ಸಮಾಜವನ್ನು ಕಟ್ಟಲು ಸಾಧ್ಯ." ಎಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಕಾ. ಎಂ.ಎ.ಬೇಬಿ ಅವರು ಮಾರ್ಮಿಕವಾಗಿ ನುಡಿದರು.

ಮಹಿಳಾ ಸಮಾನತೆ, ವಿಜ್ಞಾನ–ತಂತ್ರಜ್ಞಾನ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅಗಾಧ ಸೋವಿಯೆಟ್ ಸಾಧನೆಗಳ ಬಗ್ಗೆ ನಿರ್ದಿಷ್ಟವಾಗಿ ಕಾ. ಬೇಬಿ ಅವರು ಮಾತನಾಡಿದರು. ಈ ಎಲ್ಲಾ ಕ್ಷೇತ್ರಗಳಲ್ಲಿ ಸೋವಿಯೆಟ್ ಒಕ್ಕೂಟ ಅಭಿವೃದ್ಧ ಬಂಡವಾಳಶಾಹಿ ದೇಶಗಳು ಸುಮಾರು 3–4 ಶತಮಾನಗಳಲ್ಲಿ ಸಾಧಿಸಿದ್ದನ್ನು ಕೇವಲ 4–5 ದಶಕಗಳಲ್ಲಿ ಸಾಧಿಸಿತು ಅಥವಾ ಅದನ್ನು ಮೀರಿಸಿತು. ಪ್ರಮುಖ ಬಂಡವಾಳಶಾಹಿ (ಬ್ರಿಟನ್, ಫ್ರಾನ್ಸ್, ಜರ್ಮನಿ ಇತ್ಯಾದಿ) ದೇಶಗಳಲ್ಲಿ ಮಹಿಳೆಯರಿಗೆ ಸಾರ್ವತ್ರಿಕ ಮತದಾನದ ಹಕ್ಕು ಸಿಕ್ಕಿದ್ದು ಕ್ರಾಂತಿಯ ನಂತರ ರಶ್ಯನ್ ಮಹಿಳೆಯರಿಗೆ ಸಾರ್ವತ್ರಿಕ ಮತದಾನದ ಹಕ್ಕು ಸಿಕ್ಕಿದ ನಂತರವೇ. ವಿಜ್ಞಾನ–ತಂತ್ರಜ್ಞಾನದಲ್ಲಿ ಅತ್ಯಂತ ಮುಂದಿದ್ದ ಅಮೆರಿಕ್ಕಿಂತ ಮೊದಲು ಬಾಹ್ಯಾಕಾಶ ವಿಜ್ಞಾನ–ತಂತ್ರಜ್ಞಾನಗಳಲ್ಲಿ ಹಲವು _ ಮೊದಲ ಉಪಗ್ರಹ (ಸ್ಪುಟ್ನಿಕ್), ಬಾಹ್ಯಾಕಾಶದಲ್ಲಿ ಮೊದಲ ಪ್ರಾಣಿ, ಮನುಷ್ಯ – ಪ್ರಥಮಗಳನ್ನು ಸಾಧಿಸಿತು. ಅಣು, ಕ್ಷಿಪಣಿ ಮತ್ತು ಇತರ ರಕ್ಷಣಾ ತಂತ್ರಜ್ಞಾನಗಳಲ್ಲೂ ಹೆಚ್ಚಿನ ಕ್ಷೇತ್ರಗಳಲ್ಲಿ ಸೊವಿಯೆಟ್ ಗಳು ಮುಂದಿದ್ದು, ಅಮೆರಿಕ ಸರಿಗಟ್ಟಲು ಹರಸಾಹಸ ಪಡಬೇಕಾಯಿತು. ಕೆಲವೇ ವರ್ಷಗಳಲ್ಲಿ ಪೂರ್ಣ ಸಾಕ್ಷರತೆ ಸಾಧಿಸಿ, ಉಚ್ಛ ಶಿಕ್ಷಣದಲ್ಲೂ ಅಮೆರಿಕವನ್ನು ಸರಿಗಟ್ಟಿತು. ಶಿಕ್ಷಣ ಗುಣಮಟ್ಟದಲ್ಲಿ ಅಮೆರಿಕವನ್ನು ಮೀರಿಸಿತ್ತು. 1960–70ರ ದಶಕಗಳಲ್ಲಿ ಜಗತ್ತಿನಲ್ಲೇ ಪ್ರಚಲಿತವಿದ್ದ 'ಜಾನ್ ಗಿಂತ ಇವಾನ್ ಗೆ ಹೆಚ್ಚು ಜ್ಞಾನ ಇದೆ ('ವಾಟ್ ಜಾನ್ ಡಸ್ ನೊಟ್ ನೋ, ಇವಾನ್ ನೋಸ್ : ಇಲ್ಲಿ ಜಾನ್ ಸರಾಸರಿ ಪಾಶ್ಚಿಮಾತ್ಯ ವಿದ್ಯಾರ್ಥಿ, ಇವಾನ್ ಸರಾಸರಿ ಸೋವಿಯೆಟ್ ವಿದ್ಯಾರ್ಥಿ). ಈ ರೀತಿ ಅವರು ನಿರ್ದಿಷ್ಟ ಉದಾಹರಣೆಗಳೊಂದಿಗೆ ಸೋವಿಯೆಟ್ ಸಾಧನೆಗಳನ್ನು ವಿವರಿಸಿ, ಸೋವಿಯೆಟ್ ಪತನಕ್ಕೆ ಕಾರಣಗಳನ್ನು ಸ್ಥೂಲವಾಗಿ ಸಂಕ್ಷಿಪ್ತವಾಗಿ ವಿವರಿಸಿದರು.

"ಸಮಾನತೆ ಸಾಧ್ಯವಿದೆ" ಎಂದು ತೋರಿಸಿದ ಕ್ರಾಂತಿ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿ "ವಿಶ್ವದಲ್ಲಿ ಮೊಟ್ಟ ಮೊದಲನೆಯದಾಗಿ 1789ರಲ್ಲಿ ಫ್ರಾನ್ಸ್‌ನಲ್ಲಿ ಕ್ರಾಂತಿ ನಡೆದಿದೆ. ಅದು ಊಳಿಗಮಾನ್ಯ ಪದ್ಧತಿ ವಿರುದ್ಧ ಬಂಡವಾಳಶಾಹಿಯ ಕ್ರಾಂತಿಯಾಗಿತ್ತು. ಹಲವು ತತ್ವಜ್ಞಾನಿಗಳು ಜಗತ್ತಿನಲ್ಲಿ ಮುಂದೆ ಯಾವುದೇ ಬದಲಾವಣೆ ಇಲ್ಲ ಎಂದಿದ್ದರೂ, 1917ರಲ್ಲಿ ಕಾರ್ಮಿಕರ ನೇತೃತ್ವದಲ್ಲಿ ರಷ್ಯಾದಲ್ಲಿ ಮೊದಲ ಸಮಾಜವಾದಿ ಕ್ರಾಂತಿ ನಡೆಯಿತು. ಕಾರ್ಲ್ ಮಾರ್ಕ್ಸ್‌ರವರು ಬಂಡವಾಳಶಾಹಿಯೂ ಬದಲಾವಣೆ ಆಗಲಿದೆ ಎಂದು ತಿಳಿಸಿದರು. ಲೆನಿನ್‌ರವರು ಅದನ್ನು ಅಕ್ಟೋಬರ್ ಕ್ರಾಂತಿ ಮೂಲಕ ಕಾರ್ಯರೂಪಕ್ಕೆ ತಂದರು. ಬದಲಾವಣೆ ಜಗತ್ತಿನ ನಿಯಮ, ಬದಲಾಗುತ್ತಲೇ ಇರುತ್ತದೆ. ಸಮಾಜವಾದ ವ್ಯವಸ್ಥೆ ನಂತರ ಸಮತಾವಾದ. ಸಮತಾವಾದವೂ ಬದಲಾಗಬಹುದು" ಎಂದರು.


"ಸಮಾನತೆ ಸಾಧ್ಯವಿದೆ" ಎಂದು ಅಕ್ಟೋಬರ್ ಕ್ರಾಂತಿ ಮೊದಲ ಬಾರಿಗೆ ಜಗತ್ತಿಗೇ ತೋರಿಸಿಕೊಟ್ಟಿತು. ಇಂದು ಅಸಮಾನತೆಯನ್ನು ವೈಭವೀಕರಣ ಮಾಡಲಾಗುತ್ತಿದೆ. ಭಾರತದಲ್ಲಿ ಅದು ಹೆಚ್ಚಾಗುತ್ತಿದೆ. ಸಮಾನತೆಯ ವಿರುದ್ಧ ದಾಳಿಗಳು ಹೆಚ್ಚಾಗುತ್ತಿದೆ. ಸೋವಿಯೆಟ್ ಒಕ್ಕೂಟದ ಕುಸಿತದ ನಂತರ, ಸಮಾಜವಾದ ಸತ್ತಿತು. ಚರಿತ್ರೆ

ಪುಟ 11 ಕ್ಕೆ


ಬಿಡುಗಡೆಯಾದ ಪುಸ್ತಕಗಳು



'ಅಕ್ಟೋಬರ್ ಕ್ರಾಂತಿ – ಮನುಕುಲಕ್ಕೆ ಹೊಸ ಹಾದಿ' ರಶ್ಯನ್ ಕ್ರಾಂತಿಯ ಹಿನ್ನೆಲೆ, ಘಟನಾವಳಿ ಹೇಳುತ್ತಾ, ಭಾರತದ ಮತ್ತು ಜಗತ್ತಿನ ಮೇಲೆ ಅದರ ಪರಿಣಾಮಗಳು, ಸಾಧನೆಗಳು, ಅದರ ಪತನಕ್ಕೆ ಕಾರಣಗಳು, ಅದರ ಚಿರಂತನ ಮಹತ್ವ ಮತ್ತು ಇಡೀ ಮನುಕುಲಕ್ಕೆ ಅದು ತೋರಿಸಿದ ಹಾದಿ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತದೆ. ಸಿಪಿಐ(ಎಂ) ಕೇಂದ್ರ ಪ್ರಕಟಿಸಿರುವ ಇಂಗ್ಲಿಷ್ ಪುಸ್ತಕದ ಮತ್ತು ಕಾ. ಸೀತಾರಾಂ ಯೆಚುರಿ ಅವರ ವಿಶೇಷ ಲೇಖನಗಳು ಇದರಲ್ಲಿವೆ. ಈ ಅನುವಾದಗಳನ್ನು ವೇದರಾಜ ಎನ್.ಕೆ. ಮತ್ತು ಎಂ.ಜಿ.ವೆಂಕಟೇಶ ಮಾಡಿದ್ದಾರೆ.



'ರಶ್ಯನ್ ಕಾಂತಿ– ವಾಸ್ತವವಾಗಿ ನಡೆದದ್ದೇನು?' ರಶ್ಯನ್ ಕ್ರಾಂತಿಯ ಹಿನ್ನೆಲೆ, ಘಟನಾವಳಿಗಳನ್ನು ಕಾಮಿಕ್ಸ್ ರೂಪದಲ್ಲಿ ಹೊಸ ಓದುಗರಿಗೆ ಕೊಡುವ ಪ್ರಯತ್ನ. ಇದು 1914ರಿಂದ 1922 ವರೆಗಿನ ಸೋವಿಯೆಟ್ ಒಕ್ಕೂಟದ ರಚನೆ ವರೆಗಿನ ಘಟನಾವಳಿಗಳನ್ನು ವಿವರವಾಗಿ ಸಚಿತ್ರವಾಗಿ ಮುಂದಿಡುತ್ತದೆ.



ಚಿಂತನ ಪುಸ್ತಕ ಪ್ರಟಿಸಿರುವ 'ಸೋವಿಯೆಟ್ ಒಕ್ಕೂಟ – ನಿಮಗೆ ತಿಳಿದಿರಲಿ' (ಲೇಖಕ ವಸಂತರಾಜ್ ಎನ್.ಕೆ.) ಎಂಬ ಪುಸ್ತಕ 1917ರಿಂದ 1991ರಲ್ಲಿ ಸೋವಿಯೆಟ್ ಒಕ್ಕೂಟದ ಪತನದ ಮತ್ತು ಆ ಮೇಲಿನ ಬೆಳವಣಿಗೆಗಳ ಒಂದು ನೋಟವನ್ನು ಕೊಡುತ್ತದೆ. ಸೋವಿಯೆಟ್ ಒಕ್ಕೂಟದ ಸುಮಾರು ಏಳು ದಶಕಗಳ ಮತ್ತು ನಂತರದ ಅವಧಿಗಳನ್ನು ಸುಮಾರು 10 ಅವಧಿಗಳಾಗಿ ಗುರುತಿಸಿ ಆಯಾ ಘಟ್ಟದ ಸಾಧನೆ, ವೈಫಲ್ಯ, ಸವಾಲುಗಳನ್ನು ವಸ್ತುನಿಷ್ಟವಾಗಿ ಕೊಡಲಾಗಿದೆ. ಇದರಲ್ಲಿ ಸೋವಿಯೆಟ್ ಒಕ್ಕೂಟದ ಪತನಕ್ಕೆ ಕಾರಣಗಳೂ, ಆ ನಂತರದ ಬಂಡವಾಳಶಾಹಿ ಮರುಸ್ಥಾಪನೆ ಪತನದ ಬಗ್ಗೆಯೂ ಇದೆ.



'ನೆನೆ ನೆನೆ ಆ ದಿನಗಳ – ಅಕ್ಟೋಬರ್ ಕ್ರಾಂತಿಯ ರೋಚಕ ಕತೆ' ರಶ್ಯನ್ ಕ್ರಾಂತಿಯ ಹಿನ್ನೆಲೆ,ಘಟನಾವಳಿಗಳು, ಕ್ರಾಂತಿಯ ನಂತರ ನಡೆದ ಸಾಮ್ರಾಜ್ಯಶಾಹಿ ದಾಳಿ, ಆಂತರಿಕ ಯುದ್ಧ, ಸಮಾಜವಾದಿ ಪ್ರಭುತ್ವದ ಅಂತಿಮ ವಿಜಯದ ಬಗ್ಗೆ ಸ್ವಲ್ಪ ವಿಸ್ತಾರವಾಗಿಯೇ ನಿರೂಪಿಸುತ್ತದೆ. ಎ.ಎಸ್.ಆಚಾರ್ಯ ಬರೆದ 'ಅಕ್ಟೋಬರ್ ಕ್ರಾಂತಿಯತ್ತ' 1905ರ ಕ್ರಾಂತಿಯಿಂದ 1914ರ ವರೆಗಿನ ಘಟನಾವಳಿಗಳನ್ನು ನಿರೂಪಿಸುತ್ತದೆ. ಅವರೇ ಬರೆದ 'ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ' 1914ರಿಂದ 1917 ಅಕ್ಟೋಬರ್ ವರೆಗಿನ ಮೈ ನವಿರೇಳೀಸುವ ಘಟನೆಗಳನ್ನು ರೋಚಕವಾಗಿ ಹೇಳುತ್ತದೆ. ಅಕ್ಟೋಬರ್ ಕ್ರಾಂತಿಯ ಪ್ರತ್ಯಕ್ಷದರ್ಶಿ ಬೆಸ್ಸಿ ಬಿಯೆಟ್ಟಿ ಎಂಬ ಅಮೆರಿಕನ್ ಪತ್ರಕರ್ತೆ ಅವರು ಬರೆದ ಪುಸ್ತಕದ ಒಂದು ರೋಚಕ ಭಾಗ 'ನವೆಂಬರ್ 1917ರ ಆ ಒಂದು ರಾತ್ರಿ' ಇಲ್ಲಿದೆ. ವೇದರಾಜ ಎನ್,ಕೆ. ಅವರು ಬರೆದ "ವರ್ಗಶತ್ರುಗಳೊಡನೆ ಸೆಣಸಿ ಬೆಳೆದ ಕ್ರಾಂತಿಶಿಶು' 1917 ಅಕ್ಟೋಬರ್ ನಿಂದ 1922 ವರೆಗೆ ನಡೆದ ಅಂತರ್ಯುದ್ಧದ ಅಷ್ಟಾಗಿ ಗೊತ್ತಿಲ್ಲದ ಅಪಾರ ಬಲಿದಾನಗಳ ರಕ್ತಸಿಕ್ತ ಅಧ್ಯಾಯವನ್ನು ನಿರೂಪಿಸುತ್ತದೆ. ಅವರೇ ಬರೆದ ಕೊನೆಯ ಅಧ್ಯಾಯ 1922ರಲ್ಲಿ ನಡೆದ 'ಸೋವಿಯೆಟ್ ಒಕ್ಕೂಟದ ರಚನೆ'ಯ ಪ್ರಕ್ರಿಯೆ ಬಗ್ಗೆ ಹೇಳುತ್ತದೆ.

ಅಕ್ಟೋಬರ್ ಕ್ರಾಂತಿ 100 ಪ್ರಕಟಣೆ ಮಾಲೆ (ಪ್ರಕಾಶಕರ ಮಾತುಗಳ ಆಯ್ದ ಭಾಗಗಳು)

20ನೇ ಶತಮಾನದ ಉದ್ದಕ್ಕೂ ರಶ್ಯನ್ ಕ್ರಾಂತಿ ಮತ್ತು ಸಮಾಜವಾದಿ ವ್ಯವಸ್ಥೆ ವಿರುದ್ಧ ಬಂಡವಾಳಶಾಹಿ ಅಪಪ್ರಚಾರ ಮಾಡುತ್ತಾ ಬಂದಿದೆ. ರಶ್ಯನ್ ಕ್ರಾಂತಿ ಮತ್ತು ಸಮಾಜವಾದಿ ವ್ಯವಸ್ಥೆಯ ಸಾಧನೆಗಳನ್ನು ಅಲ್ಲಗಳೆದು ಅಥವಾ ನಿರ್ಲಕ್ಷಿಸಿ, ಕೆಲವು ನ್ಯೂನತೆಗಳನ್ನು ಬೆಟ್ಟದಷ್ಟು ದೊಡ್ಡದು ಮಾಡುವುದು ಈ ಅಪಪ್ರಚಾರದ ಭಾಗವಾಗಿದೆ. ಇದಕ್ಕೆ ಜಾಗತಿಕ ಕಮ್ಯುನಿಸ್ಟ್ ಮತ್ತು ದುಡಿಯುವ ಜನತೆಯ ಚಳುವಳಿಗಳು ಉತ್ತರ ಕೊಡುತ್ತಾ ರಶ್ಯನ್ ಕ್ರಾಂತಿ ಮತ್ತು ಸಮಾಜವಾದಿ ವ್ಯವಸ್ಥೆಯ ಸಾಧನೆಗಳ ಬಗ್ಗೆ ತಿಳುವಳಿಕೆ ನೀಡುತ್ತಾ ಬಂದಿವೆ. 20ನೇ ಶತಮಾನದ ಉತ್ತಾರಾರ್ಧದಲ್ಲಿ ಜಗತ್ತಿನ ಮೂರನೇ ಒಂದು ಭಾಗ ಜನ ಸಮಾಜವಾದಿ ವ್ಯವಸ್ಥೆ ಆರಿಸಿಕೊಂಡಾಗ, ಈ ಅಪಪ್ರಚಾರದ 'ಶೀತ ಸಮರ' ತಾರಕ–ಕ್ಕೇರಿತ್ತು. ಈ ಅಪಪ್ರಚಾರವನ್ನು ಬಯಲಿಗೆಳೆದು ದುಡಿಯುವ ಜನತೆಗೆ ಸರಿಯಾದ ತಿಳುವಳಿಕೆ ನೀಡುವುದು ತಮ್ಮ ಪ್ರಾಥಮಿಕ ಕರ್ತವ್ಯ ಎಂದು ಜಾಗತಿಕ ಕಮ್ಯುನಿಸ್ಟ್ ಮತ್ತು ದುಡಿಯುವ ಜನತೆಯ ಚಳುವಳಿಗಳು ಭಾವಿಸಿ ಅದನ್ನು ನಿರ್ವಹಿಸುತ್ತಾ ಬಂದಿವೆ. ಸೋವಿಯೆಟ್ ಒಕ್ಕೂಟದ ಪತನದ ನಂತರ ಈ ಅಪಪ್ರಚಾರ ಹೊಸ ಆಯಾಮಗಳನ್ನೂ ಅವತಾರಗಳನ್ನೂ ಕಂಡಿದೆ. ಸಮಾಜವಾದಿ ವ್ಯವಸ್ಥೆ ಎಂಬುದು ಒಂದು ಸುಂದರ ಕನಸು. ಕಾರ್ಯಸಾಧ್ಯ ವ್ಯವಸ್ಥೆಯಲ್ಲ. ಸೋವಿಯಟ್ ಒಕ್ಕೂಟ ಮಾತ್ರವಲ್ಲ, ಎಲ್ಲಾ ಸಮಾಜವಾದಿ ವ್ಯವಸ್ಥೆಗಳೂ ಬಿದ್ದು ಹೋಗುತ್ತವೆ. ಬಂಡವಾಳಶಾಹಿ ವ್ಯವಸ್ಥೆಯೊಂದೇ ಅಂತಿಮ ಆದರ್ಶ ವ್ಯವಸ್ಥೆ ಎಂಬುದು ಈ ಅವಧಿಯ ಅಪಪ್ರಚಾರದ ಹೂರಣ.

ಇಂದಿನ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯೊಂದೇ ಅಂತಿಮ ಆದರ್ಶ ವ್ಯವಸ್ಥೆ ಎಂಬ ಪ್ರಚಾರ ನಂಬಲರ್ಹವಾಗಿ ಉಳಿದಿಲ್ಲ. ಆದರೆ ಅದಕ್ಕೆ ಬದಲಿ ಕಾರ್ಯಸಾಧ್ಯ ವ್ಯವಸ್ಥೆ ಇದೆ ಮತ್ತು ಅದು ಸಮಾಜವಾದಿ ವ್ಯವಸ್ಥೆ ಎಂಬ ಪ್ರಚಾರ ತೀವ್ರವಾಗಿ ಪರಿಣಾಮಕಾರಿಯಾಗಿ ಆಗಬೇಕಾಗಿದೆ. ರಶ್ಯನ್ ಕ್ರಾಂತಿಯ ಶತಮಾನೋತ್ಸವದ ಮತ್ತು ಬಂಡವಾಳಶಾಹಿಗೆ ದುಡಿಯುವ ಜನ ಬದಲಿ ವ್ಯವಸ್ಥೆ ಹುಡುಕುತ್ತಿರುವ ಇಂದಿನ ಸಂದರ್ಭದಲ್ಲಿ, ಈ ಮೂರೂ ಅವಧಿಯ ಎಲ್ಲಾ ಅಪಪ್ರಚಾರದ ಆಯಾಮಗಳು, ವಿಷಯಗಳು, ತಂತ್ರಗಳೂ ಹೊಸ ಅವತಾರಗಳಲ್ಲಿ ಕಾಣಿಸಿಕೊಳ್ಳಲಿವೆ. ಬಂಡವಾಳಶಾಹಿಯ ಅಪಪ್ರಚಾರದ ನಿರೀಕ್ಷಿತ ಮಹಾಪೂರಕ್ಕೆ ಉತ್ತರ ಕೊಡುವ ಅಗತ್ಯ ಇದೆ. ರಶ್ಯನ್ ಕ್ರಾಂತಿಯ (ಹಿನ್ನೆಲೆ, ಅದರಲ್ಲಿ ದುಡಿಯುವ ಜನರ ಪಾತ್ರ ಸೇರಿದಂತೆ) ಧೀರ ರೋಚಕ ಚರಿತ್ರೆಯನ್ನು ನಿರೂಪಿಸುವುದು; ಆರ್ಥಿಕ ಸಾಮಾಜಿಕ ವೈಜ್ಞಾನಿಕ ಮುಂತಾದ ಹಲವು ಕ್ಷೇತ್ರಗಳಲ್ಲಿ

ಪುಟ 11 ಕ್ಕೆ



500/ 1000 ನೋಟಿನ ಪರದಾಟ

ಹೌದು, ನೀವು ಹೇಳಿದಂತೆ ತುರ್ತುಪರಿಸ್ಥಿತಿ ಉದ್ಭವಿಸಿರುವುದು ಸತ್ಯ. ಆದರೆ ಪ್ರಧಾನಿ ನರೇಂದ್ರ ಮೋದಿ ಕ್ರಮದಿಂದ ಹಳ್ಳಿಯ ಜೀವಗಳು ಬೆಚ್ಚಿ ಬಿದ್ದಿವೆ. ಹಳ್ಳಿಯ ಹಿರಿಯ ಜೀವಗಳು ಕೂಡಿಟ್ಟುಕೊಂಡಿದ್ದ 'ಕುಡಿಕೆ ಹೊನ್ನು' ನಲ್ಲಿರುವ 500 ಮತ್ತು 1000 ರೂಪಾಯಿ ನೋಟುಗಳನ್ನು ಬದಲಿಸಿಕೊಳ್ಳುವುದು ಹೇಗೆ? ಕುರಿ, ಕೋಳಿ, ಮೇಕೆ, ಎತ್ತು, ಎಮ್ಮೆ, ಕಡಲೆಕಾಯಿ ಹೀಗೆ ಮಾರಾಟ ಮಾಡಿದ್ದರಿಂದ ಬಂದ ಹಣದಲ್ಲಿ ಕೇಂದ್ರ ಸರ್ಕಾರ ರದ್ದುಪಡಿಸಿರುವ ನೋಟುಗಳು ಇದ್ದರೆ ಅವುಗಳನ್ನು ಬದಲಾವಣೆ ಮಾಡುವುದು ಸಾಮಾನ್ಯ ಸಂಗತಿಯಲ್ಲ. ಕೂಲಿ ಕಾರ್ಮಿಕರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಒಂದು ದಿನ ನೋಟು ಬದಲಾವಣೆಗಾಗಿ ಹೋಬಳಿ, ಪಟ್ಟಣ/ನಗರಗಳಿಗೆ ಹೋದರೆ ಆ ದಿನದ ಕೂಲಿ, ಆ ದಿನದ ಹೊಲದ ಕೆಲಸಗಳು ನಿಂತು ಹೋಗುತ್ತವೆ.

ಅಷ್ಟೇ ಅಲ್ಲ; ದೇಶದ ಶೇಕಡ ಅರ್ಧಕ್ಕೂ ಹೆಚ್ಚು ಕುಟುಂಬಗಳು ಬ್ಯಾಂಕುಗಳಲ್ಲಿ ಖಾತೆ ಹೊಂದಿಲ್ಲ. ಎಷ್ಟೋ ಮಂದಿ ವೃದ್ಧರು ಹಳ್ಳಿಗಳಲ್ಲಿ ಇದ್ದಾರೆ. ಅವರು ಪಟ್ಟಣಗಳಿಗೆ ಹೋಗಿ ಬರಲು ಸಾಧ್ಯವಿಲ್ಲ. ಒಂಟಿ ಮಹಿಳೆಯರು, ವಿಧವೆಯರು, ಅಕ್ಷರ ಜ್ಞಾನ ಇಲ್ಲದ ಅದೆಷ್ಟೋ ಮಂದಿ ಬ್ಯಾಂಕು, ಪೋಸ್ಟಾಫೀಸುಗಳ ಮುಖವನ್ನೇ ನೋಡಿಲ್ಲ. ಇವರೆಲ್ಲರೂ ಒಂದೆರಡು ನೋಟು ಬದಲಾವಣೆಗೆ ಇಡೀ ದಿನ ಕಾಯಬೇಕಾಗಿ ಬರಬಹುದು. ನವೆಂಬರ್ 11/12ರಂದು ಇದ್ದ ಬದ್ದ ಬ್ಯಾಂಕು ಪೋಸ್ಟಾಫಿಸುಗಳ ಮುಂದೆ ಮೈಲುದ್ದದ ಕ್ಯೂಗಳಿದ್ದವು. ಇದು ಹಲವು ದಿನಗಳ ಕಾಲ ಮುಂದುವರೆಯಬಹುದು.

ಇನ್ನು 70 ವರ್ಷ ಮೇಲ್ಪಟ್ಟ ಪಿಂಚಣಿದಾರರು ಹಳ್ಳಿಗಳಲ್ಲಿ ವಾಸವಾಗಿದ್ದರೆ, ಅವರು ಇಡೀ ಪಿಂಚಣಿ ಹಣವನ್ನು ಒಂದೇ ಬಾರಿಗೆ ಕೊಂಡೊಯ್ದಿರುತ್ತಾರೆ. ಪದೇಪದೇ ಪಟ್ಟಣದ ಬ್ಯಾಂಕಿಗೆ ಹೋಗಲು ಸಾದಚ್ಯವಿಲ್ಲ ಎಂಬ ಕಾರಣಕ್ಕೆ ಹೀಗೆ ಮಾಡಿರುತ್ತಾರೆ. ಕಾರಣ ದೇಹಕ್ಕೆ ಆಯಾಸವಾಗಬಹುದು. ಮಂಡಿ ನೋವು ಬರಬಹುದು. ಓಡಾಟದಿಂದ ದೇಹಾಯಾಸವಾಗಬಹುದು ಎಂಬ ಉದ್ದೇಶದಿಂದ ಹೀಗೆ ಮಾಡಿರುತ್ತಾರೆ. ಇಂಥ ವೃದ್ಧರಿಗೂ ತೊಂದರೆಯಾಗುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಕೂಲಿ ಕಾರ್ಮಿಕರು ಕೆಲಸ ಬಿಟ್ಟು ಬ್ಯಾಂಕುಗಳು, ಪೋಸ್ಟಾಫೀಸುಗಳಿಗೆ ತಿರುಗುತ್ತಾ ಕುಳಿತರೆ ಜೀವನ ಸಾಗಿಸುವುದು ಹೇಗೆ? ಹೆಣ್ಣು ಮಗಳ ಮದುವೆ, ಮಗನ ಮದುವೆ, ಮೇಕೆ, ಕುರಿ ಖರೀದಿಸಲು, ನಿತ್ಯದ ವ್ಯವಹಾರ ಮಾಡಲು 'ಒಂದಿಷ್ಟು' ಹಣ ಇಟ್ಟುಕೊಂಡಿರುವವರು ಏನು ಮಾಡಬೇಕು?

– ಕೆ.ಇ. ಸಿದ್ದಯ್ಯ

ಟಿಪ್ಪು ಜಯಂತಿ : ಬರಿಯ ಸರಕಾರಿ ಆಚರಣೆ ಸಾಕೆ?

ಟಿಪ್ಪು ಸುಲ್ತಾನ್ ಜಯಂತಿ ವಿವಾದ ಕಾಂಗ್ರೆಸ್ ಬಿಜೆಪಿ ಎರಡೂ ಪಕ್ಷಗಳ ಡಬ್ಬಲ್ ಗೇಮನ್ನು ಬಯಲಿಗೆಳೆದಿದೆ. ಒಂದು ಕಡೆ ಟಿಪ್ಪು ಜಯಂತಿ ಆಚರಣೆ ವಿರೋಧಿಸಿ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡರು ಮಂಗಳೂರು, ಮಡಿಕೇರಿ, ಶಿರಸಿ, ಮೈಸೂರು ಸೇರಿದಂತೆ ಹಲವೆಡೆ ಪ್ರತಿಭಟನೆ ನಡೆಸಿದರು. ಶ್ರೀರಂಗಪಟ್ಟಣ ಬಂದ್ ಕರೆ ಕೊಟ್ಟಿದ್ದರು. ಬಿಜೆಪಿ ಸಂಸದರು, ಶಾಸಕರು ಅಧಿಕೃತ ಸಮಾರಂಭಗಳಿಗೆ ಹಾಜರಾಗಲಿಲ್ಲ.





ಆಹ್ವಾನ ಪತ್ರಿಕೆಯಲ್ಲಿ ತಮ್ಮ ಹೆಸರು ಹಾಕದಂತೆ ಸಹ ವಿರೋಧಿಸಿದ್ದರು. ಇನ್ನೊಂದು ಕಡೆ ಟಿಪ್ಪು ಜಯಂತಿಗೆ ಭಾರಿ ವಿರೋಧ ವ್ಯಕ್ತಪಡಿಸುತ್ತಿರುವ ಬಿಜೆಪಿಯ ತಾನು ಅಧಿಕಾರ'ದ'ಲ್ಲಿದ್'ದ ಅವಧಿಯಲ್ಲಿ ಟಿಪ್ಪು ವೈಭವೀಕರಿಸಿ 'ಟಿಪ್ಪು ಸುಲ್ತಾನ್–ಎ ಕ್ರುಸೇಡರ್ ಫಾರ್ ಚೇಂಜ್' ಎಂಬ ಕೃತಿ ಮುದ್ರಿಸಿರುವುದು ಬೆಳಕಿಗೆ ಬಂತು. ಕರ್ನಾಟಕ ಗೆಜೆಟಿಯರ್ ಇಲಾಖೆ ಹೊರತಂದಿರುವ ಈ ಪುಸ್ತಕ 2012ರಲ್ಲಿ ಮುದ್ರಣವಾಗಿದೆ. ಇಂಗ್ಲಿಷ್ ಭಾಷೆಯ ಮೂಲ ಕೃತಿಯಲ್ಲಿ ಅಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಮುನ್ನುಡಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಗೋವಿಂದ ಕಾರಜೋಳ ಅವರ ಮೆಚ್ಚುಗೆಯ ಬರಹವಿದೆ. ತಮ್ಮ ಸಹಿ ಹಾಗೂ ಭಾವಚಿತ್ರ ಇರುವ ಈ ಬರಹಗಳಲ್ಲಿ ಟಿಪ್ಪುವನ್ನು ಇಬ್ಬರೂ ಹಾಡಿ ಹೊಗಳಿದ್ದಾರೆ. ಜಗದೀಶ ಶೆಟ್ಟರು ಅವರು 'ಟಿಪ್ಪು ಶ್ರೇಷ್ಠ ಸಮಾಜ ಸುಧಾರಕ, ಮಹಾನ್ ಸೇನಾನಿ, ಪ್ರೇರಕ ಶಕ್ತಿ, ರಾಕೆಟ್ ತಂತ್ರಜ್ಞಾನ ಕಂಡುಹಿಡಿದವ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದಲ್ಲದೆ ಯಡಿಯೂರಪ್ಪ ಕೆಜೆಪಿ ರಚಿಸಿದಾಗ ಮತ್ತು ಇತರ ಬಿಜೆಪಿ ನಾಯಕರು ಟಿಪ್ಪುವನ್ನು ಸಾರ್ವಜನಿಕವಾಗಿ ಹಾಡಿ ಹೊಗಳಿದ್ದು ಬೆಳಕಿಗೆ ಬಂದು ಬಿಜೆಪಿಯ ರಾಜಕೀಯ ಬಯಲಾಯಿತು.

ಟಿಪ್ಪು ಸುಲ್ತಾನನ ವಿರುದ್ಧ ಬಿಜೆಪಿ/ಆರೆಸ್ಸೆಸ್ ಅಪಪ್ರಚಾರಕ್ಕೆ ಉತ್ತರ ಕೊಡಲು, ಚರಿತ್ರೆಗೆ ಅಪಚಾರವಾಗದಂತೆ ನೋಡಿಕೊಳ್ಳಲು ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಟಿಪ್ಪು ಜಯಂತಿಯನ್ನು ಬೆಂಬಲಿಸಿದ್ದವು. ಆದರೆ ಅದನ್ನು ಬರಿಯ ಕಾಂಗ್ರೆಸಿನ ಸರಕಾರದ ಆಚರಣೆಗೆ ಮಾತ್ರ ಸೀಮಿತಗೊಳಿಸಬಾರದು ಎಂದು ಹೇಳಿದ್ದವು. ಆದರೆ ಕಾಂಗ್ರೆಸ್ ಸರಕಾರ ಅದನ್ನೇ ಮಾಡಿದೆ. ಬಿಜೆಪಿ/ಆರೆಸ್ಸೆಸ್ ಗಳ ಹಿಂಸಾಚಾರದ ಬೆದರಿಕೆಯ ನೆಪದಲ್ಲಿ ಮೆರವಣಿಗೆ, ಪ್ರತಿಭಟನೆ, ಸಭೆಗಳನ್ನೆಲ್ಲಾ ನಿಷೇಧಿಸಿತು. ಶಾಂತಿಭಂಗವಾಗದಂತೆ ಕಟ್ಟುನಿಟ್ಟಿನ ಕ್ರಮಕೈಗೊಂಡಿತು. ಆದರೆ ಟಿಪ್ಪು ಜಯಂತಿ ನಿಜವಾದ ಜನತಾ ಉತ್ಸವ ಆಗುವಂತೆ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಕೆಲವು ಕಡೆ ಟಿಪ್ಪು ಜಯಂತಿ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಶಾಸಕರೂ, ಸಂಸದರೂ ಗೈರುಹಾಜರಾಗಿದ್ದಾರೆ. ಉದಾಹರಣೆಗೆ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಮೋದ್ ಮಧ್ವರಾಜ್ ಗೈರಾಗಿದ್ದಾರೆ. ಉಡುಪಿಯಲ್ಲಿ ಸುಮಾರು 20 ನಿಮಿಷಗಳಲ್ಲಿ ಕಾರ್ಯಕ್ರಮ ಮುಗಿಯಿತು. ಜನಪ್ರತಿನಿಧಿಗಳ ಗೈರು ಹಾಜರಿಗೆ ಜಿಲ್ಲಾ ಮುಸ್ಲಿಂ ಒಕ್ಕೂಟ ಆಕ್ರೋಶ ವ್ಯಕ್ತಪಡಿಸಿದೆ. 'ಜನಪ್ರತಿನಿಧಿಗಳೇ ಕಾರ್ಯಕ್ರಮಕ್ಕೆ ಬರದಿರುವ ಕ್ರಮ ಸರಿಯಲ್ಲ. ಕಾಟಾಚಾರಕ್ಕೆಂದು ಟಿಪ್ಪು ಜಯಂತಿ ಆಚರಿಸುವುದು ಬೇಡ' ಎಂದು ಉಡುಪಿ ಜಿಲ್ಲಾ ಮುಸ್ಲಿಂ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹುಸೇನ್ ಕೋಡಿಬೆಂಗ್ರೆ ಹೇಳಿದ್ದಾರೆ. ಇದು ಹಲವು ಕಾಂಗ್ರೆಸ್ ನಾಯಕರ 'ಮೃದು ಹಿಂದುತ್ವ' ಧೋರಣೆಯನ್ನು ತೋರಿಸುತ್ತದೆ.

ಈ ಖಳ ನಟರ ಸಾವೇ ಅಂತಿಮವಾಗಲೀ



21ನೇ ದಶಕದ ಮಧ್ಯಭಾಗದ ಈ ಸನ್ನಿವೇಶದಲ್ಲಿ ಕನ್ನಡ ಚಿತ್ರರಂಗದಲ್ಲಿ ನಡೆಯುತ್ತಿರುವ ಹೊಸ ಹೊಸ ಪ್ರಯೋಗಗಳು ಚಿತ್ರ ರಂಗದಲ್ಲಿ ಹೊಸ ಭರವಸೆಯನ್ನು ಮೂಡಿಸುತ್ತಿರುವಾಗ ಕನ್ನಡ ಚಲನಚಿತ್ರ ರಂಗದ ಇಬ್ಬರು ಉದಯೋನ್ಮುಖ ಮತ್ತು ಭರವಸೆಯ ಖಳನಟರ ದುರಂತ ಸಾವು ಕೆಲವು ಪ್ರಶ್ನೆಗಳನ್ನು ಮೂಡಿಸಿವೆ.

ಕ್ಲಾಸ್ ಮತ್ತು ಮಾಸ್ ಎಂಬ ಪ್ರೇಕ್ಷಕ ವರ್ಗವನ್ನು "ದೃಷ್ಟಿ"ಸಿರುವ ಇದೇ ರಂಗವು, ಪ್ರೇಕ್ಷಕರು ಬಯಸುತ್ತಿರುವ ಹೊಸತನವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿಲ್ಲವೆಂಬುದು ಸೋಜಿಗ. ಮಾಸ್ತಿಗುಡಿ ಚಿತ್ರದ ಕ್ಲೈಮ್ಯಾಕ್ಸ್ ಚಿತ್ರೀಕರಣ ಸಂದರ್ಭಲ್ಲಿ ಖಳನಟರಾದ ಉದಯ್ ರಾಘವ್ ಮತ್ತು ಅನಿಲ್ ಸಾಹಸ ಸನ್ನಿವೇಶವನ್ನು ಸೆರೆಹಿಡಿಯುವ ಸನ್ನಿವೇಶದಲ್ಲಿ ದುರಂತ ಘಟಿಸಿ ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಂಡಿದ್ದಾರೆ. ಆದರೆ ಈ ಸಾವುಗಳಿಗೆ ಕೇವಲ 'ಕಾಲ'ನನ್ನೆ ಗುರಿಯಾಗಿಸಿ ಆಡುತ್ತಿರುವ ಮಾತುಗಳು ಖೇದಕರ ಎಂಬುದೇ ನನ್ನ ಭಾವನೆ. ಇದೇ ಸಮಯದಲ್ಲಿ ನಟ ದುನಿಯಾ ವಿಜಯ್ ರವರು ಕೂಡಾ ಇದ್ದರು ಅವರಿಗೆ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿದ್ದ ಚಿತ್ರತಂಡ ಖಳನಟರ ಜೀವದ ಬಗ್ಗೆ ಯಾವುದೇ ಕ್ರಮವಹಿಸದೇ ಇರುವುದು ಸಹ ಕಲಾವಿದರನ್ನು ಸಿನಿಮಾ ರಂಗವೂ ನೋಡುವ ದೃಷ್ಟಿ ಮತ್ತು ಅದರಲ್ಲೂ ಇರುವ ತಾರತಮ್ಯವನ್ನು ಪುನರುಚ್ಚರಿಸಿದಂತಿದೆ. ಕನ್ನಡ ಸಿನಿಮಾಗಳಲ್ಲಿ ಹಲವಾರು ವರ್ಷಗಳಿಂದ ಸಹ ನಟರಾಗಿ, ಸಾಹಸ ಕಲಾವಿದರಾಗಿ ತಮ್ಮ ವೃತ್ತಿನೆಲೆಯನ್ನು ಕಂಡುಕೊಳ್ಳುತ್ತಿದ್ದ ಇವರುಗಳು ಪ್ರೈಮ್ ಲೈನ್ ನಟರಾದ ಕಾರಣಕ್ಕಾಗಿಯೇ ಅವರ ಸಾವಿನ ಬಗ್ಗೆ ಚಿತ್ರರಂಗ, ಮಾಧ್ಯಮ ವಲಯ ಸೇರಿದಂತೆ ರಾಷ್ಟ್ರಮಟ್ಟದ ಮಾಧ್ಯಮಗಳಲ್ಲಿ ಬಹು ಚರ್ಚೆಗಳು ನಡೆಯುತ್ತಿದೆ. ಅದೇ ಅವರು ಕೇವಲ ಸಾಹಸ ಕಲಾವಿದರಾಗಿದ್ದರೇ ಅಥವ ದಿನಗೂಲಿ ನಟರಾಗಿದ್ದರೆ, ಕೇವಲ ಚಲನ ಚಿತ್ರ ವಾಣಿಜ್ಯ ಮಂಡಳಿಯು ನೀಡುವ ಹಣ ಸಹಾಯದಿಂದಲೇ, ಈ ದುರಂತವನ್ನು ಈ ಘಟನೆ ನಡೆಯಲೇ ಇಲ್ಲ ಎಂಬಂತೆ ಸುಖಾಂತ್ಯ ಕಾಣಿಸುತಿತ್ತು!

ತೆರೆಯ ಮೇಲೆ ನಾವು ನೋಡುವ 2 ಗಂಟೆ 30 ನಿಮಿಷದ ಸಿನಿಮಾಗೆ ತಮ್ಮ ಅಮೂಲ್ಯ ಜೀವ ಮತ್ತು ಜೀವನವನ್ನೇ ಮುಡಿಪಾಗಿಟ್ಟು ಕೆಲಸ ಮಾಡುವ ಹಲವಾರು ವಿಭಾಗದ ತಂತ್ರಜ್ಞರು, ಕೆಲಸಗಾರರು ಕೇವಲ ದಿನಗೂಲಿ, ಅರೆ ಕೂಲಿಗೆ ದುಡಿಯುತ್ತಿದ್ದಾರೆ. ಈ ಕಲಾವಿದರ ಜೀವನದ ರಕ್ಷಣೆಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇದುವರೆಗೂ ವಾಣಿಜ್ಯ ಮಂಡಳಿಗಾಗಲೀ, ಕಾರ್ಮಿಕ ಒಕ್ಕೂಟಕ್ಕಾಗಲೀ ಸಾಧ್ಯವಾಗಿಲ್ಲ. 2 ವರ್ಷಗಳ ಹಿಂದೆ ಇವರ ಮೂಲಭೂತ ಸೌಕರ್ಯಗಳಿಗಾಗಿ ಭಾರೀ ಹೋರಾಟದ ಮುನ್ಸೂಚನೆ ನೀಡಿದ್ದ ಮಂಡಳಿ ಅಧ್ಯಕ್ಷರಾದ ಹಿರಿಯ ನಟ ಅಶೋಕ್ ರವರು ನಂತರದ ದಿನಗಳಲ್ಲಿ ಮೌನವಾಗಿದ್ದು ಅಸಹಜವಲ್ಲ. ಐದು ನಿಮಿಷದ 10 ನಿಮಿಷದ ಸಾಹಸ ದೃಶ್ಯಗಳಿಗಾಗಿ ದಿನದ ಬಾಡಿಗೆಯಲ್ಲಿ ಬಂದು ಅಭಿನಯಿಸುವ ಕಲಾವಿದರು ಅಂತಹ ಸಮಯದಲ್ಲಿ ಅವಘಡಗಳು ಸಂಭವಿಸಿದರೂ ಅವರ ವೈದ್ಯಕೀಯ ವೆಚ್ಚಕ್ಕೇ ಸಾಲ ರೂಪದಲ್ಲಿ ಕನಿಷ್ಠ ಮೊತ್ತವನ್ನು ಪಡೆದು ಗುಣಮುಖರಾದ ನಂತರ ಅದನ್ನು ಅವರೇ ತೀರಿಸುವ ಪರಿಸ್ಥಿತಿಯಿದೆ ಎಂದು ಹಿರಿಯ ಸಾಹಸ ನಿರ್ದೇಶಕರು ವಿವರಿಸುತ್ತಾರೆ. ಇದಕ್ಕೆ ಕಾರಣ ಈ ಕಲಾವಿದರ ಸಂಘದಲ್ಲಿ ಯಾವುದೇ ಮಾರ್ಗದರ್ಶಕ ಸೂತ್ರಗಳನ್ನು ಅಳವಡಿಸಿಕೊಳ್ಳದೇ ಇರುವುದು ಕಾರಣವಾಗಿದೆ. ಜೊತೆಯಲ್ಲಿ ಕಲಾವಿದರಿಗೆ ತಮ್ಮ ಉದ್ಯೋಗದ ಅಭದ್ರತೆಯ ಕಾರಣವೂ ಅವರನ್ನು ಹೆಚ್ಚಿನ ಪ್ರಶ್ನೆಗಳನ್ನು ಕೇಳಲು ಮತ್ತು ಸಂಘಟನೆಯನ್ನು ಭದ್ರ ಮಾಡಲು ಬಿಡುತ್ತಿಲ್ಲ ಎಂಬುದೇ ಹೇಳಲಾಗದ ಸತ್ಯ ಸಂಗತಿ.


ಕೇವಲ ಮಾಸ್ ಚಿತ್ರಗಳೇ ಸಿನಿಮಾ ಇಂಡಸ್ಟ್ರಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಸಮಯದಲ್ಲಿ ಹೊಸ ದಿಕ್ಕನ್ನು ತೋರಿಸಿದ ಮುಂಗಾರು ಮಳೆ, ಚೆಲುವಿನ ಚಿತ್ತಾರದಂತಹ ಸಿನಿಮಾಗಳು ಕನ್ನಡ ಸಿನಿ ಪ್ರೇಕ್ಷಕರಿಗೆ ಹೊಸ ಅಲೋಚನೆಯ ಜೊತೆಗೆ ಟ್ರೆಂಡ್ ಸೆಟ್ ಮಾಡಿದ್ದವು. ಅ ಕುರಿತು ಅಲೋಚಿಸದೆ ಸಿನಿಮಾ ರಂಗ ತಮ್ಮ ಹಳೆಯ ಶೈಲಿಯ 'ಹೊಡಿ–ಬಡಿ' ಮಾದರಿಯನ್ನು ಅದರಲ್ಲಿ ಹೊಸ–ಹೊಸ ಪ್ರಯೋಗಗಳ ಮೂಲಕ ತಮ್ಮ ತಮ್ಮಲ್ಲೇ ಹೆಣೆದುಕೊಂಡಿರುವ ಅಲಿಖಿತ ಸಂಘರ್ಷವೇ ಇಂತಹ ಹೊಸ ಪ್ರಯೋಗಗಳನ್ನು ನಡೆಸಿ, ತಮ್ಮ ನೆಲೆಯನ್ನು ಭದ್ರಮಾಡಿಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳೇ ಈ ದುರಂತಕ್ಕೆ ಕಾರಣವಾಗಿರಬಹುದು.

ಕೇವಲ ಹೊಡಿ–ಬಡಿ ಸಿನಿಮಾಗಳಿಂದ ಮಾತ್ರವೇ ಸಿನಿಪ್ರಿಯರನ್ನು ರಂಜಿಸಲು ಸಾಧ್ಯವೆಂದು ನಂಬಿದ್ದ ನಿರ್ಮಾಪಕ, ನಿರ್ದೇಶಕರಿಗೆ ಸೆಡ್ಡು ಹೊಡೆದಿದ್ದು ಸಾಮಾಜಿಕ ಕಳಕಳಿಯ ಮತ್ತು ಹಳ್ಳಿಸೊಗಡಿನ ಹೊಸ ಪ್ರಯೋಗದ ಚಿತ್ರಗಳು ಅದರಲ್ಲೂ 2015, 2016ರ ವರ್ಷಗಳಲ್ಲಿ ತೆರೆಕಂಡ ರಂಗಿತರಂಗ, ಯು–ಟರ್ನ್, ತಿಥಿ, ಗೋಧಿಬಣ್ಣ ಸಾಧಾರಣ ಮೈಕಟ್ಟು, ಇಡೊಳ್ಳೆ ರಾಮಾಯಣ, ರಾಮ ರಾಮ ರೇ ಚಿತ್ರಗಳು ಕೇವಲ ಕಥೆ, ಸಂಭಾಷಣೆಗಳಲ್ಲದೆ, ಸೀಮಿತ ಸ್ಥಳಗಳಲ್ಲಿ, ಸೀಮಿತ ಅವಧಿಯಲ್ಲಿ ಕಡಿಮೆ ವೆಚ್ಚಗಳಲ್ಲಿ ಸಿನಿಮಾಗಳನ್ನು ನಿರ್ಮಿಸಿ ಯಶಸ್ವಿಯಾಗಿರುವ ಉದಾಹರಣೆಗಳು ಮುಂದಿವೆ. ಈ ಚಿತ್ರಗಳು ಚಿತ್ರ ವಿಮರ್ಶಕರು, ನಿರ್ಮಾಪಕರು, ನಿರ್ದೇಶಕರಲ್ಲದೇ, ಪ್ರೇಕ್ಷಕರಲ್ಲಿ ಬದಲಾವಣೆಗಳನ್ನು ಮೂಡಿಸಿವೆ. ಇನ್ನಾದರೂ ಕನ್ನಡ ಸಿನಿಮಾ ರಂಗ ತಮ್ಮ ಸಂಪ್ರದಾಯಿಕ ಶೈಲಿಯನ್ನು ಬಿಟ್ಟು ಹೊಸ ದೃಷ್ಟಿಯಲ್ಲಿ ಸಿನಿಮಾರಂಗವನ್ನು ರೂಪಿಸಲು ಸಿದ್ಧರಾಗಬೇಕು.

ಶಿವು ಹೊಸಹಳ್ಳಿ

ಇನ್ನೂ 3 ಬಿಜೆಪಿ ನಾಯಕರಿಗೆ 'ಕ್ಲೀನ್‌ಚಿಟ್ ಭಾಗ್ಯ'

ಕಟ್ಟಾ ಸುಬ್ರಮಣ್ಯ ನಾಯ್ಡು, ಶಾಸಕರಾದ ಎಸ್.ಆರ್.ವಿಶ್ವನಾಥ್ ಮತ್ತು ಎಸ್. ಮುನಿರಾಜು ಅವರುಗಳಿಗೆ ಕ್ಲೀನ್ ಚಿಟ್ ನೀಡಿದೆ. ಪ್ರತ್ಯೇಕ ಪ್ರಕರಣಗಳ ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿದ್ದ ನ್ಯಾಯಮೂರ್ತಿ ಆನಂದ್ ಬೈರಾರೆಡ್ಡಿ ಅವರಿದ್ದ ಏಕಸದಸ್ಯಪೀಠ ಗುರುವಾರ ಈ ತೀರ್ಪು ಪ್ರಕಟಿಸಿದೆ.


ಕಟ್ಟಾ ಸುಬ್ರಮಣ್ಯ ನಾಯ್ಡು


ಎಸ್.ಆರ್. ವಿಶ್ವನಾಥ್


ಎಸ್. ಮುನಿರಾಜು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು ಹಾಗೂ ಬಿಬಿಎಂಪಿಯ ಮಾಜಿ ಪಾಲಿಕೆ ಸದಸ್ಯ ಎಂ.ಗೋಪಿ ವಿರುದ್ಧದ ಪ್ರಕರಣವನ್ನೂ ನ್ಯಾಯಾಲಯ ರದ್ದುಗೊಳಿಸಿದೆ. ಕಟ್ಟಾ ಸುಬ್ರಮಣ್ಯ ನಾಯ್ಡು ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಸೆಕ್ಷನ್ 7,8,12,13(1)(ಡಿ) ಅಡಿ ಹಾಗೂ ಐಪಿಸಿ 419,420,471, 120ಬಿ ಅಡಿ ಪ್ರಕರಣ ಹೂಡಲಾಗಿತ್ತು. ಅವರು ತಮ್ಮನ್ನು ಆರೋಪ ಪಟ್ಟಿಯಿಂದ ಕೈಬಿಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಲೋಕಾಯುಕ್ತ ಕೋರ್ಟ್ 2013ರ ಏ.29 ರಂದು ವಜಾಗೊಳಿಸಿತ್ತು.

ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ವಿರುದ್ಧದ ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ➞

ಸಮಾಜವಾದಿ ಕ್ರಾಂತಿಯತ್ತ ಸಾಗಲು............

ಪುಟ 9 ರಿಂದ

ಮುಗಿಯಿತು. ಬಂಡವಾಳಶಾಹಿಯೇ ಮಾನವ ಸಮಾಜದ ಕೊನೆಯ ಹಂತ ಎಂದು ಸಾರಿದ್ದ ಬಂಡವಾಳಶಾಹಿ-ಪರ ಬುದ್ಧಿಜೀವಿಗಳು ಈಗಲೂ ಸಮಾಜವಾದದ ಮೇಲೆ ಮಾರ್ಕ್ಸ್‌ವಾದದ ಮೇಲೆ ದಾಳಿ-ಟೀಕೆ ಮಾಡುತ್ತಲೇ ಇದ್ದಾರೆ. ಇದರ ಅರ್ಥ – ಅವರ ಹೇಳಿಕೆಗಳನ್ನು ಅವರೇ ನಂಬುತ್ತಿಲ್ಲ. ಈಗಲೂ ಅವರಿಗೆ ಸಮಾಜವಾದದ ಮಾರ್ಕ್ಸ್‌ವಾದದ ಬಗ್ಗೆ ಭಯವಿದೆ, ಆತಂಕವಿದೆ. ಯಾಕೆಂದರೆಬಂಡವಾಳಶಾಹಿ ಬಿಕ್ಕಟ್ಟುಗಳಿಗೆ ಒಳಗಾಗುತ್ತಲೇ ಇರುತ್ತದೆ." ಎಂದು ಮಾರ್ಕ್ಸ್‌ವಾದದ ಟೀಕಾಕಾರರಿಗೆ ಉತ್ತರಿಸಿದರು.

ಸ್ಟಾಲಿನ್ ಒಂದು ರೀತಿಯ ಸರ್ವಾಧಿಕಾರಿ ಎಂದು ಬಿಂಬಿಸಲಾಗಿದೆ. ಆದರೆ ಸ್ಟಾಲಿನ್ ಎರಡನೇ ಮಹಾಯುದ್ಧದ ಫ್ಯಾಸಿಸ್ಟ್-ವಿರೋಧಿ ಸಮರದಲ್ಲಿ ಅವರ ಧೀರ ನಾಯಕತ್ವ ಇಲ್ಲದಿದ್ದರೆ ಇಂದು ಜಗತ್ತಿನ ರಾಷ್ಟ್ರಗಳು ಸ್ವತಂತ್ರವಾಗಿ ಉಳಿಯಲು ಸಾಧ್ಯವಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದು ಆ ಯುದ್ಧದ ಪರಿಣಾಮದಿಂದಾಗಿ. ಸೋವಿಯೆಟ್ ಕೆಂಪು ಸೈನ್ಯಕ್ಕೆ ಹಿಟ್ಲರ್ ಸೋಲದಿದ್ದರೆ ಜಗತ್ತು ಫ್ಯಾಸಿಸ್ಟ್ ದಮನದಲ್ಲಿ ನರಳಬೇಕಿತ್ತು. ಇಂದು ಸೋವಿಯೆಟ್ ಒಕ್ಕೂಟ ಇಲ್ಲ. ಭಾರತದಲ್ಲಿ ಜಗತ್ತಿನಲ್ಲಿ ಬಲಪಂಥೀಯ, ಫ್ಯಾಸಿಸಂ ಶಕ್ತಿಗಳ ಆರ್ಭಟ ಹೆಚ್ಚಾಗುತ್ತಿದೆ. ನವ ಉದಾರವಾದಿ ನೀತಿಗಳನ್ನು ಬೆಂಬಲಿಸಿದ ಬಂಡವಾಳದಾರರೇ ಇಂದು ಕೋಮುವಾದಿಗಳಿಗೆ ಬೆಂಬಲವಾಗಿ ನಿಂತು-ಕೊಂಡಿದ್ದಾರೆ ಅವರ ವಿರುದ್ಧ ಹೋರಾಡಬೇಕು ಎಂದು ಕರೆ ಕೊಟ್ಟರು.

ಸಭೆಯ ಮೊದಲಿಗೆ ಸಿಐಟಿಯು ಬೆಂ. ದಕ್ಷಿಣ ಜಿಲ್ಲಾ ಅಧ್ಯಕ್ಷರಾದ ಕೆ. ಪ್ರಕಾಶ್‌ರವರು ಪ್ರಾಸ್ತಾವಿಕವಾಗಿ –ಅಕ್ಟೋಬರ್ ಕ್ರಾಂತಿ; ಜಗತ್ತಿನ ಮೇಲೆ ಅದರ ಪರಿಣಾಮ; ಸಾರ್ವತ್ರಿಕ ಶಿಕ್ಷಣ, ಪೂರ್ಣ ಉದ್ಯೋಗ, ಪೂರ್ಣ ಆರೋಗ್ಯ, ಮಹಿಳಾ ಸಮಾನತೆ, ವಿಜ್ಞಾನ-ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಸಮಾಜವಾದಿ ರಷ್ಯಾದ ಮಹಾನ್ ಸಾಧನೆಗಳು; ಬಾಹ್ಯಾಕಾಶ ವಿಜ್ಞಾನ-ತಂತ್ರಜ್ಞಾನದಲ್ಲಿ ಬೃಹತ್ ಬೆಳವಣಿಗೆಗಳ – ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾ. ಎಂ.ಎಸ್.ಮೀನಾಕ್ಷಿ ಸುಂದರಂ ರವರು ಮಾತನಾಡಿ "ಈ ಕಾರ್ಯಕ್ರಮವೂ ಈಗೀನ ಒಂದು ದಿನದ ಕಾರ್ಯಕ್ರಮವಲ್ಲ, ಬದಲಾಗಿ ವರ್ಷ ಪೂರ್ತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತಿಂಗಳಿಗೊಂದು ವಿಚಾರ ಸಂಕಿರಣಗಳ ಮೂಲಕ ಹಲವು ಕಾರ್ಯಕ್ರಮಗಳನ್ನು ಆಯೋಜಿಸುವುದು ಆ ಮೂಲಕ ಸಮಾಜವಾದಿ ಕ್ರಾಂತಿಯ 100ನೇ ವರ್ಷದ ಆಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿ ಬಂಡವಾಳಶಾಹಿ ವಿರುದ್ಧ ಸಮಾಜವಾದ ಸಾಧ್ಯವಿದೆ ಎಂಬ ಸಂದೇಶವನ್ನು ನಾವೆಲ್ಲರೂ ಕೂಡಿ ಘಂಟಘೋಷವಾಗಿ ತಿಳಿಸಲು ಮುಂದಾಗೋಣ ಎಂದು ಹೇಳಿದರು.

ಸಾಹಿತಿ ಡಾ. ವಿಜಯ ರವರು ಕುವೆಂಪುರವರ 'ಲೆನಿನ್', ವೀ.ಸೀತಾರಾಮಯ್ಯನವರ 'ಕ್ರೋಧಕೇತನ' ಸು.ರಂ.ಎಕ್ಕುಂಡಿರವರ "ಅಂಡರ್‌ಸನ್ ಬೀದಿಯಲ್ಲಿ" ಎಂಬ ಕವನ ವಾಚನ ಮಾಡಿದರು. ಅಲ್ಲದೇ ಭೂಮ್ತಾಯಿ ಬಳಗದವರು ಕ್ರಾಂತಿಗೀತೆ, ತತ್ವಗೀತೆ, ಹೋರಾಟದ ಹಾಡುಗಳನ್ನು ಹಾಡಿದರು.

ಹಾಡುಗಳ ಸಂದರ್ಭದಲ್ಲಿ ಚಿತ್ರ ಕಲಾವಿದರಾದ ಡಾ. ವಿ.ಜಿ.ಅಂದಾನಿರವರು ಒಂದು ಅದ್ಭುತವಾದ ಚಿತ್ರವನ್ನು ರಚಿಸಿದರು. ಆ ಚಿತ್ರವನ್ನು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಕಾ॥ಎಂ.ಎ.ಬೇಬಿ ರವರಿಗೆ ಅರ್ಪಿಸಲಾಯಿತು. ಮಧ್ಯಾಹ್ನದ ನಂತರ 'ಜಗತ್ತನ್ನು ತಲ್ಲಣಗೊಳಿಸಿದ ಹತ್ತು ದಿನಗಳು' ಎಂಬ ಪ್ರಸಿದ್ಧ ನಿರ್ದೇಶಕ ಸರ್ಜಿ ಐಸೆನ್ ಸ್ಟೈನ್ ನಿರ್ದೇಶಿಸಿದ ರಷ್ಯನ್ ಚಿತ್ರವನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮದ ಸ್ವಾಗತವನ್ನು ಜನವಾದಿ ಮಹಿಳಾ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮರವರು ಮತ್ತು ನಿರೂಪಣೆಯನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್‌ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ ವಿವಿಧ ಭಾಗಗಳಿಂದ ಕಾರ್ಯಕರ್ತರು, ಕಾರ್ಮಿಕರು, ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಸಭಾಂಗಣ ತುಂಬಿ ತುಳುಕುತ್ತಿತ್ತು.

ಬಿಡುಗಡೆಯಾದ ಪುಸ್ತಕಗಳು............

ಪುಟ 9 ರಿಂದ

ಸೋವಿಯೆಟ್ ಒಕ್ಕೂಟದ ಸಾಧನೆಗಳು ಮತ್ತು ಅದು ಎದುರಿಸಿದ ಸವಾಲುಗಳ ಸತ್ಯ ಸಂಗತಿಗಳನ್ನು ಹೇಳುವುದು; ಸಮಾಜವಾದಿ ವ್ಯವಸ್ಥೆಯನ್ನು ಹೊಸಕಿ ಹಾಕಲು ಈ ನೂರು ವರ್ಷಗಳಲ್ಲಿ ಬಂಡವಾಳಶಾಹಿ ನಡೆಸಿದ ಹುನ್ನಾರಗಳು ಪಿತೂರಿಗಳನ್ನು ಬಯಲು ಮಾಡುವುದು; ಸೋವಿಯೆಟ್ ಒಕ್ಕೂಟದ ಪತನಕ್ಕೆ ನಿಜವಾದ ಕಾರಣಗಳನ್ನು ಶೋಧಿಸುವುದು; ಸಮಾಜವಾದಿ ವ್ಯವಸ್ಥೆ ಕಟ್ಟುವಲ್ಲಿ ನಡೆದ ಹಲವು ತಪ್ಪುಗಳಿಂದ ಸಮಾಜವಾದಿ ಒಂದು ಕಾರ್ಯಸಾಧ್ಯ ವ್ಯವಸ್ಥೆ ಅಲ್ಲ ಎಂದು ತೀರ್ಮಾನಿಸಬೇಕಿಲ್ಲ ಎಂದು ಸಾಧಿಸಿ ತೋರಿಸುವುದು; ಸಮಾಜವಾದಿ ವ್ಯವಸ್ಥೆ ಒಂದು ಕಾರ್ಯಸಾಧ್ಯ ಮತ್ತು ಬಂಡವಾಳಶಾಹಿಗೆ ಅನಿವಾರ್ಯ ಬದಲಿ ವ್ಯವಸ್ಥೆ ಎಂದು ಸಾಧಿಸಿ ತೋರಿಸುವುದು – ಇವೇ ಮುಂತಾದವುಗಳನ್ನು ಒಳಗೊಂಡ ಪುಸ್ತಕಗಳನ್ನು ಪ್ರಕಟಣೆಗಳನ್ನು ರಶ್ಯನ್ ಕ್ರಾಂತಿಯ ಶತಮಾನೋತ್ಸವ ವರ್ಷದ ಉದ್ದಕ್ಕೂ ತಂದು ಪ್ರಚಾರ ಮಾಡಬೇಕಾಗಿದೆ.

ಶತಮಾನೋತ್ಸವ ಸಮಿತಿಯ ವರ್ಷಾಚರಣೆಯ ಯೋಜನೆ

ವರ್ಷವಿಡಿ ಪ್ರತಿ ತಿಂಗಳಿಗೆ ಒಂದರಂತೆ ಒಂದು ವಿಷಯ ಕುರಿತು ವಿಚಾರ ಸಂಕಿರಣವನ್ನು ಸಂಘಟಿಸಲು ಉದ್ದೇಶಿಸಿದೆ. ಈ ಮೂಲಕ ಸಮಾಜವಾದಿ ಕ್ರಾಂತಿ ಕುರಿತು ಎಡ ಚಳುವಳಿಯ ಕಾರ್ಯಕರ್ತರಿಗೆ, ಸಾಮೂಹಿಕ ಸಂಘಟನೆಗಳ ಸದಸ್ಯರಿಗೆ ಅದರ ಕುರಿತು ಸಮಗ್ರ ಕಣ್ಣೋಟ ಕಟ್ಟಿಕೊಡಲು, ಸಮಾಜವಾದವೆ ಪರ್ಯಾಯ ಎಂಬುದರಲ್ಲಿನ ವಿಶ್ವಾಸವನ್ನು ಅಚಲಗೊಳಿಸಲು, ಪ್ರಸ್ತುತ ಬಂಡವಾಳಶಾಹಿ ಬಿಕ್ಕಟ್ಟಿನ ಕಾಲಘಟ್ಟದಲ್ಲಿ ಸಮಾಜವಾದದ ಪರ್ಯಾಯವನ್ನು ಜನತೆಯ ಮುಂದಿಡಲು ಸ್ಥಳೀಯ ಪರಂಪರೆಯನ್ನು ಅದ-ಕ್ಕೆ ಅಣಿನೆರೆಸಲು ಯತ್ನಿಸುವುದು ಇದರ ಉದ್ದೇಶವಾಗಿದೆ. ಈ ಪ್ರಕ್ರಿಯೆಯಲ್ಲಿ ರಾಜ್ಯದ ವಿವಿಧ ಎಡ ಪ್ರಜಾಸತ್ತಾತ್ಮಕ, ಪ್ರಗತಿಪರ ಶಕ್ತಿಗಳು, ವ್ಯಕ್ತಿಗಳನ್ನು ಅಣಿನೆರೆಸಲು ಯತ್ನಿಸಲು ಅಂದಾಜಿಸಿದೆ.

ಶತಮಾನೋತ್ಸವ ಸಮಾರೋಪವನ್ನು ನವಂಬರ್ 5, 2017ರಂದು ಕನಿಷ್ಠ 10 ಸಾವಿರ ಜನರನ್ನು ಕುಟುಂಬ ಸಮೇತ ಅಣಿನೆರೆಸುವ ಮೂಲಕ ಸಂಘಟಿಸಲು, ಅದನ್ನು ಮತ್ತಷ್ಟು ವೈವಿಧ್ಯಮಯವಾಗಿ ದಿನವಿಡಿ ಸಾಧ್ಯವಾದಲ್ಲಿ 2ದಿನ ಸಂಘಟಿಸಲು ಯೋಜಿಸುವುದು.

ಪ್ರತಿ ತಿಂಗಳ ಕಾರ್ಯಕ್ರಮದ ವಿವರಗಳು

ಸಮಾಜವಾದಿ ಕ್ರಾಂತಿ ಮತ್ತು ತತ್ವಶಾಸ್ತ್ರಿಯ ಮೀಮಾಂಸೆ	ಡಿಸೆಂಬರ್ 2016
ಸಮಾಜವಾದಿ ಕ್ರಾಂತಿ ಮತ್ತು ಕಾರ್ಷಿಕ ಕ್ರಾಂತಿ, ರೈತಾಪಿ ಜನತೆ.	ಜನವರಿ 2017
ಸಮಾಜವಾದಿ ಕ್ರಾಂತಿ ಮತ್ತು ನ್ಯಾಯ ಶಾಸ್ತ್ರ	ಫೆಬ್ರವರಿ 2017
ಸಮಾಜವಾದಿ ಕ್ರಾಂತಿ ಮತ್ತು ಮಹಿಳಾ ಸಮಾನತೆ	ಮಾರ್ಚ್ 2017
ಸಮಾಜವಾದಿ ಕ್ರಾಂತಿ ಮತ್ತು ಸಾಮಾಜಿಕ ನ್ಯಾಯ	ಏಪ್ರಿಲ್ 2017
ಸಮಾಜವಾದಿ ಕ್ರಾಂತಿ ಮತ್ತು ಕಾರ್ಮಿಕ ವರ್ಗ	ಮೇ 2017
ಸಮಾಜವಾದಿ ಕ್ರಾಂತಿ ಮತ್ತು ವಿಜ್ಞಾನ –ತಂತ್ರಜ್ಞಾನ-ಜನಾರೋಗ್ಯ	ಜೂನ್ 2017
ಸಮಾಜವಾದಿ ಕ್ರಾಂತಿ ಮತ್ತು ಶಿಕ್ಷಣ	ಜುಲೈ 2017
ಸಮಾಜವಾದಿ ಕ್ರಾಂತಿ ಮತ್ತು ಕನ್ನಡ ಸಾಹಿತ್ಯ	ಆಗಸ್ಟ್ 2017
ಸಮಾಜವಾದಿ ಕ್ರಾಂತಿ ಮತ್ತು ಯುವಜನ, ಉದ್ಯೋಗ	ಸೆಪ್ಟಂಬರ್ 2017
ಸಮಾಜವಾದಿ ಕ್ರಾಂತಿ ಮತ್ತು ಯೋಜನಾಬದ್ಧ ಆರ್ಥಿಕತೆ, ಸ್ವಾವಲಂಬನೆ	ಅಕ್ಟೋಬರ್ 2017
ಸಮಾರೋಪ	ನವಂಬರ್,04,05–2017

➡ ಪ್ರಕರಣವನ್ನೂ ಸಹ ರದ್ದುಗೊಳಿಸಿ ಆದೇಶ ನೀಡಿದೆ.

ಲೋಕಾಯುಕ್ತ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್(ಎಸ್ಪಿಪಿ) ಸ್ಥಾನಕ್ಕೆವೆಂಕಟೇಶ್‌ದಳವಾಯಿ ರಾಜೀನಾಮೆ ನೀಡಿದ್ದಾರೆ. ಕೆಐಎಡಿಬಿ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸದ ಹಿನ್ನೆಲೆಯಲ್ಲಿ ಸರಕಾರ ಮತ್ತು ಲೋಕಾಯುಕ್ತ ಸಂಸ್ಥೆಯ ಕ್ರಮಕ್ಕೆ ಬೇಸತ್ತು ಅವರು ಗುರುವಾರ ರಾಜೀನಾಮೆ ನೀಡಿದ್ದಾರೆ. ಕೆಐಎಡಿಬಿ ಹಗರಣದ 3 ನೇ ಆರೋಪಿಯಾಗಿದ್ದ ಎಸ್. ಕೆ.ಶ್ರೀನಿವಾಸ್ ವಿರುದ್ಧದ ಪ್ರಕರಣವನ್ನು ಹೈಕೋರ್ಟ್ 2016ರ ಮಾರ್ಚ್‌ನಲ್ಲೇ ರದ್ದುಪಡಿಸಿತ್ತು. ಅದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸುವಂತೆ ವೆಂಕಟೇಶ್ ಲಿಖಿತ ಅಭಿಪ್ರಾಯ ನೀಡಿದ್ದರು. ಆದರೂ ಸರಕಾರ ಹಾಗೂ ಲೋಕಾಯುಕ್ತ ಸಂಸ್ಥೆಗಳು ಮೇಲ್ಮನವಿ ಸಲ್ಲಿಸಿರಲಿಲ್ಲ. ಇದೀಗ ಶ್ರೀನಿವಾಸ್ ಪ್ರಕರಣ ಆಧರಿಸಿ ಕಟ್ಟಾ ಸುಬ್ರಮಣ್ಯ ನಾಯ್ಡು ವಿರುದ್ಧದ ಕೇಸನ್ನೂ ಸಹ ಹೈಕೋರ್ಟ್ ರದ್ದು ಮಾಡಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಇದು ಭ್ರಷ್ಟಾಚಾರದ ವಿರುದ್ಧ ಹೋರಾಟದ ಬಗ್ಗೆ ಕಾಂಗ್ರೆಸ್-ಬಿಜೆಪಿ ಪಕ್ಷಗಳ 'ಉಭಯ ಸಹಮತ'ದ ಮಾದರಿ. ಬಿಜೆಪಿ-ಕಾಂಗ್ರೆಸ್ ಗಳ ಸೇರಿಯೇ ದೇಶಕ್ಕೆ ಮಾದರಿಯಾಗಿದ್ದ ಕರ್ನಾಟಕದ ಲೋಕಾಯುಕ್ತ ಸಂಸ್ಥೆಯ ಕತ್ತು ಹಿಸುಕಿವೆ. ಕೇಂದ್ರದಲ್ಲಂತೂ ಬಿಜೆಪಿ ಭರವಸೆ ಕೊಟ್ಟ ಲೋಕಪಾಲ್ ಸುದ್ದಿಯೇ ಇಬ್ಬರೂ ಎತ್ತುತ್ತಿಲ್ಲ. ●

ಬಗರ್‌ಹುಕುಂ ಸಾಗುವಳಿದಾರರ............

ಪುಟ 5 ರಿಂದ

ಭಾಗವಹಿಸಿದ್ದರು.

ಬೆಳ್ತಂಗಡಿ:

ನವೆಂಬರ್ 18ರ ಭೂಮಿ, ಮನೆ, ನಿವೇಶನಕ್ಕಾಗಿ ನಡೆಯಲಿರುವ ಜೈಲ್‌ಭರೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಪತ್ರಿಕಾಗೋಷ್ಠಿಯನ್ನು ನಡೆಸಿ ತಿಳಿಸಿದರು. ಗೋಷ್ಠಿಯಲ್ಲಿ ವಿವಿಧ ಸಂಘಟನೆಯ ಮುಖಂಡರಾದ ಶ್ಯಾಮರಾಜ್ ಪಟ್ರಮೆ, ಲಕ್ಷ್ಮಣ ಗೌಡ ಕಳೆಂಜ, ಬಿ.ಎಂ.ಭಟ್, ನಾರಾಯಣ ಆಚಾರಿ, ದೇವಕಿ, ಲೋಕೇಶ್ ಕುದ್ಯಾಡಿ, ಸಂಜೀವ ನಾಯ್ಕ, ಜಯರಾಮ ಮಯ್ಯ, ನೆಬಿಸಾ, ವಿಠಲ ಮಲೆಕುಡಿಯ, ಮುಂತಾದವರು ಹಾಜರಿದ್ದರು

ಧಾರವಾಡ

ನವೆಂಬರ್ 18ರ ಭೂಮಿ, ಮನೆ ನಿವೇಶನಕ್ಕಾಗಿ ನಡೆಯಲಿರುವ ಜೈಲ್‌ಭರೋ ಕಾರ್ಯಕ್ರಮವನ್ನು ಹುಬ್ಬಳ್ಳಿ-ಧಾರವಾಡ ಜಿಲ್ಲೆಯಾದ್ಯಂತ ಯಶಸ್ವಿಗೊಳಿಸಬೇಕೆಂದು ರೈತ-ಕಾರ್ಮಿಕ ಸಂಘಟನೆಗಳ ಜಂಟಿ ಸಭೆಯನ್ನು ನವೆಂಬರ್ 01ರಂದು ನಡೆಸಲಾಯಿತು. ಸಭೆಗೆ ಅರಣ್ಯ ಭೂಮಿ ಸಾಗುವಳಿದಾರರು, ಹಮಾಲಿ, ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು.

ನವೆಂಬರ್ 18ರಂದು ನಡೆಯಲಿರುವ ಜೈಲ್‌ಭರೋ ಚಳುವಳಿ ಅಂಗವಾಗಿ ನವೆಂಬರ್ 05ರಂದು ತುಮಕೂರಿನಲ್ಲಿ ದುಂಡು ಮೇಜಿನ ಸಭೆಯನ್ನು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಸಂಘಟನೆ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಅದೇ ರೀತಿಯಲ್ಲಿ ನವೆಂಬರ್ 07ರಂದು ಜೈಲ್‌ಭರೋ ಚಳುವಳಿಯ ಪೂರ್ವಭಾವಿಯಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬಿಳಿಜಗಲಿ ಮೋಳೆ ಗ್ರಾಮದಲ್ಲಿ ಬಗರ್‌ಹುಕುಂ ಸಾಗುವಳಿದಾರರ ಸಭೆ ನಡೆಸಲಾಗಿದೆ. ಹಾಸನದ ಬೇಲೂರು ತಾಲ್ಲೂಕಿನ ಅರೇಹಳ್ಳಿಯಲ್ಲಿ ರೈತರ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ●





ಟೀಚರ್ : ಗುಂಡ ಜೆ.ಸಿ.ಬಿ. ಅಂದರೇನು ಮತ್ತು ಅದರ ಕಾರ್ಯವನ್ನು ವಿವರಿಸು

ಗುಂಡ : ಜೆ-ಜನತಾ ದಳ, ಸಿ-ಕಾಂಗ್ರೆಸ್, ಬಿ-ಬಿಜೆಪಿ ಎಲ್ಲರೂ ಒಟ್ಟಿಗೆ ಸೇರಿ ಕರ್ನಾಟಕವನ್ನು ಅಗೆದು, ಬಗೆದು ನೆಲಸಮ ಮಾಡುವ ಯಂತ್ರವೇ ಜೆ.ಸಿ.ಬಿ.

500/ 1000ರೂ. ನೋಟುಗಳ ರದ್ದತಿ:

ಅವಿವೇಕಿ ಮತ್ತು ಜನ-ವಿರೋಧಿ ಕ್ರಮ

ಎನ್ನುತ್ತಾರೆ ಪ್ರಸಿದ್ಧ ಜನಪರ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್

ಪ್ರಧಾನ ಮಂತ್ರಿಗಳು ನವಂಬರ್ 8ರ ರಾತ್ರಿ 8ಗಂಟೆಗೆ ಮಾಡಿದ ರಾಷ್ಟ್ರೀಯ ಪ್ರಸಾರ ಭಾಷಣದಲ್ಲಿ ಆಗಿನಿಂದ ನಾಲ್ಕು ಗಂಟೆಗಳಲ್ಲಿ 500 ಮತ್ತು 1000ರೂ.ಗಳ ನೋಟುಗಳು ಚಲಾವಣೆ ಕಳಕೊಳ್ಳುತ್ತವೆ ಎನ್ನುವಾಗ ಅದಕ್ಕೆ ಕೊಟ್ಟ ಕಾರಣ-ಅದು 'ಕಪ್ಪು ಹಣ'ದ ಮೇಲೆ ಪ್ರಹಾರ ಮಾಡುತ್ತದೆ. ಅದಕ್ಕೆ ಸೇರಿಸಿದ ಇನ್ನೊಂದು ತರ್ಕ-"ಭಯೋತ್ಪಾದಕರು' ಬಳಸುವ ನಕಲಿ ನೋಟುಗಳು ನಿಷ್ಪ್ರಯೋಜಕವಾಗುತ್ತವೆ. ಸರಕಾರದ ಕೆಲವು ಅತ್ಯುತ್ಸಾಹಿ ಬೆಂಬಲಿಗರು ಇನ್ನೂ ಮುಂದೆ ಹೋಗಿ ಇದನ್ನು 'ಭಯೋತ್ಪಾದನೆಯ ವಿರುದ್ಧ 'ಮಿಂಚಿನ ಪ್ರಹಾರ' ಎಂದಿದ್ದಾರೆ. ಈ ಎಲ್ಲ ತರ್ಕಗಳನ್ನು ತೀಕ್ಷ್ಣ ವಿಮರ್ಶೆಗೆ ಗುರಿಪಡಿಸಿರುವ ಪ್ರೊ.ಪಟ್ನಾಯಕ್ ಈ 'ಕಪ್ಪುಹಣ'. 'ನಕಲಿ ಕರೆನ್ಸಿ' ಇತ್ಯಾದಿ ಪದಗಳನ್ನು ಎಷ್ಟು ಅರ್ಥಹೀನವಾಗಿ ಬಳಸಲಾಗುತ್ತಿದೆ ಎಂಬುದನ್ನು ಬಯಲಿಗೆಳೆದಿದ್ದಾರೆ. ಜನಸಾಮಾನ್ಯರಲ್ಲಿ ಈ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಅವರು ನವಂಬರ್ 9ರಂದು 'ದಿ ಸಿಟಿಝನ್,ಇನ್'ನಲ್ಲಿ ಪ್ರಕಟವಾದ ಲೇಖನದಲ್ಲಿ ನೀಡಿರುವ ಉತ್ತರಗಳ ಸಾರಾಂಶ ಇಲ್ಲಿದೆ.

*** ಅಡಗಿಸಿಟ್ಟ ನೋಟಿನ ಕಂತೆಗಳು ಹೊರಬಂದು 'ಕಪ್ಪುಹಣ' ಬಯಲಿಗೆ ಬರುತ್ತದಲ್ಲವೇ?**

'ಕಪ್ಪು ಹಣ' ಎಂದರೆ ಟ್ರಂಕುಗಳಲ್ಲಿ, ದಿಂಬುಗಳ ಅಡಿಯಲ್ಲಿ ಅಥವ ನೆಲದಡಿ ಹೂತಿಟ್ಟ ನೋಟಿನ ಕಂತೆಗಳು ಎಂಬುದು ಸಾಮಾನ್ಯ ಭಾವನೆ. ಅಂದರೆ ಈ ನೋಟುಗಳನ್ನು ರದ್ದು ಮಾಡಿದಾಗ ಜನ ಹಳೆಯ ನೋಟುಗಳನ್ನು ಕೊಟ್ಟು ಹೊಸ ನೋಟುಗಳನ್ನು ಪಡೆಯಲು ಬ್ಯಾಂಕಿಗೆ ಹೋಗುತ್ತಾರೆ, ದೊಡ್ಡ ಪ್ರಮಾಣದಲ್ಲಿ ನೋಟುಗಳನ್ನು ತರುವವರ ಬಗ್ಗೆ ಬ್ಯಾಂಕುಗಳು ತೆರಿಗೆ ಅಧಿಕಾರಿಗಳಿಗೆ ತಿಳಿಸುತ್ತಾರೆ, 'ತಪ್ಪಿತಸ್ಥ'ರು ಸಿಕ್ಕಿ ಬೀಳುತ್ತಾರೆ 'ಕಪ್ಪು ಹಣ' ಹೊರಬರುತ್ತದೆ, ಇದರಿಂದ ಮುಂದೆ ಕಪ್ಪು ಹಣ ಸಂಗ್ರಹಿಸದಂತೆ ಭಯವೂ ಉಂಟಾಗುತ್ತದೆ- ಇದೊಂದು ಸರಳೀಕರಿಸಿದ ತರ್ಕ.

'ಕಪ್ಪು ಹಣ' ಎಂದರೆ ಅಡಗಿಸಿಟ್ಟ ನೋಟಿನ ಕಂತೆಗಳು ಎಂದೇ ಇಟ್ಟುಕೊಳ್ಳೋಣ. ಆದರೆ , ಉದಾ: 20 ಕೋಟಿ ರೂ.ಮೊತ್ತದ ನೋಟುಗಳ ದಣಿ ಅವನ್ನೆಲ್ಲ ಹೊತ್ತು ಬ್ಯಾಂಕಿಗೆ ತರುವುದಿಲ್ಲ, ತರುವಂತೆಯೂ ಇಲ್ಲ. ಆ ದಣಿ ತನ್ನ ಸೇವಕರಿಗೆ ಅವನ್ನು ಹಂಚಿ ಸಣ್ಣ ಸಣ್ಣ ಮೊತ್ತಗಳಲ್ಲಿ ಅದನ್ನು ಜಮಾ ಮಾಡಿಸುತ್ತಾನೆ- ಅದಕ್ಕೆ ಡಿಸೆಂಬರ್ 30 ರವರೆಗೂ ಅವನಿಗೆ ಸಮಯ ಇದೆ.

ಆದರೆ ಅಷ್ಟರ ವರೆಗೂ ಕಾಯಬೇಕಿಲ್ಲ. ಸ್ವಲ್ಪ ಸಮಯದಲ್ಲೇ ಹಳೆಯ ನೋಟುಗಳನ್ನು ತಗೊಂಡು ಹೊಸ ನೋಟುಗಳನ್ನು ಕೊಡಿಸಿ ಅದಕ್ಕೆ ಕಮಿಶನ್ ಪಡೆಯುವ ವ್ಯವಸ್ಥೆ ಸಿದ್ಧವಾಗುತ್ತದೆ. ಆಗ ಈ ಇಡೀ ತರ್ಕ ಅಸಂಬದ್ಧವಾಗುತ್ತದೆ.

*** 'ಕಪ್ಪು ಹಣ' ಅಡಗಿಸಿಟ್ಟ ನೋಟಿನ ಕಂತೆಗಳಷ್ಟೇ ಅಲ್ಲದಿದ್ದರೆ, ಬೇರೇನು?**

'ಕಪ್ಪು ಹಣ 'ಎಂಬ ಪದವೇ ಅಪಪ್ರಯೋಗ ಅಂದರೆ ತಪ್ಪು ಚಿತ್ರ ಕೊಡುವ ಪದಬಳಕೆ. ಅದು ಅಡಗಿಸಿಟ್ಟ ನೋಟಿನ ಕಂತೆಗಳ ಚಿತ್ರವನ್ನೇ ನಮ್ಮ ಮುಂದಿಡುತ್ತದೆ. ವಾಸ್ತವವಾಗಿ, ಇದು ಕಳ್ಳಸಾಗಣೆ, ಮಾದಕ ದ್ರವ್ಯಗಳ ಸಾಗಣೆ, ಅಥವ ಭಯೋತ್ಪಾದನೆಗೆ ಶಸ್ತ್ರಾಸ್ತ್ರ ಖರಿದಿ ಮುಂತಾದ ಸಂಪೂರ್ಣವಾಗಿ ಕಾಯಿದೆಬಾಹಿರವಾದ ಚಟುವಟಿಕೆಗಳೂ ಆಗಿರಬಹುದು ಅಥವ ಕಾನೂನಿನ ಮಿತಿಗಳನ್ನು ದಾಟುವ, ಅಥವ ತೆರಿಗೆ ಕೊಡದ ಚಟುವಟಿಕೆಗಳೂ ಆಗಿರಬಹುದು.

ಉದಾ: 100ಟನ್ ಖನಿಜವನ್ನು ಹೊರತೆಗೆದು 80 ಟನ್ ಮಾತ್ರ ಎಂದು ಲೆಕ್ಕ ತೋರಿಸುವುದು, 100ಡಾಲರ್ ರಫ್ತು ಮಾಡಿ ಅದರ ಮೊತ್ತ 80ಡಾಲರ್ ಎನ್ನುವುದು, ಹೆಚ್ಚುವರಿ 20 ಡಾಲರನ್ನು ವಿದೇಶಗಳಲ್ಲಿ ಬ್ಯಾಂಕುಗಳಲ್ಲಿ ಇಡುವುದು, ಹವಾಲಾ ಮೂಲಕ ರೂಪಾಯಿಗಳನ್ನು ವಿದೇಶಿ ಕರೆನ್ಸಿಗಳಿಗೆ ಬದಲಿಸಿ ವಿದೇಶಗಳಲ್ಲಿ ಇಡುವುದು ಇತ್ಯಾದಿ.

ಒಟ್ಟಾರೆಯಾಗಿ 'ಕಪ್ಪು ಹಣ' ಎಂದರೆ ಅಘೋಷಿತ ಚಟುವಟಿಕೆಗಳಲ್ಲಿ ಉತ್ಪತ್ತಿಯಾಗುವ ಸಂಪತ್ತನ್ನು ಸೂಚಿಸುತ್ತದೆ.

*** ಹಾಗಿದ್ದರೆ 'ಕಪ್ಪು ಹಣ' ಎನ್ನುವುದು ಒಂದು ಅಡಗಿಸಿಟ್ಟ ಸ್ಟಾಕ್(ದಾಸ್ತಾನು)ಅಲ್ಲ?**

ಹೌದು, ಅದು ದಾಸ್ತಾನಲ್ಲ, ಬದಲಿಗೆ ಒಂದು ಹರಿವು. ಅಂದರೆ ಅದರಿಂದ ಪ್ರಯೋಜನವಾಗಬೇಕಾದರೆ ಅದು ಹರಿಯುತ್ತಿರಬೇಕು, ಚಲಾವಣೆಯಲ್ಲಿರಬೇಕು ಅದರಿಂದ ಲಾಭದ ಪ್ರಯೋಜನವಾಗಬೇಕು, ಸುಮ್ಮನೆ ನೋಟುಗಳನ್ನು ಪೇರಿಸಿಟ್ಟರೆ ಏನು ಸಿಗುತ್ತದೆ? ಅವನ್ನು 'ಚಟುವಟಿಕೆ'ಗಳಲ್ಲಿ ತೊಡಗಿಸಿದರೆ ಮಾತ್ರವೇ ಲಾಭ ಸಿಗುವುದು.

ನೋಟುಗಳನ್ನು ಪೇರಿಸಿಡುವವನು 'ಲೋಭಿ', ಅದನ್ನು ಚಲಾವಣೆಗೆ ಬಿಡುವವನು ಬಂಡವಾಳಶಾಹಿ. 'ಕಪ್ಪು' ಚಟುವಟಿಕೆಗಳಲ್ಲಿ ತೊಡಗುವವನು ಲೋಭಿಯಲ್ಲ, ಬಂಡವಾಳಶಾಹಿಯೇ.

ಆದ್ದರಿಂದ 'ಕಪ್ಪು ಹಣ' ಎಂಬುದು ಬಳಸದೇ ಇಟ್ಟಿರುವ ದಾಸ್ತಾನು ಅಲ್ಲ, ಅದೂ 'ಬಿಳಿ ಹಣ'ದಂತೆಯೇ ಚಲಾವಣೆಯಲ್ಲಿ ಹರಿಯುತ್ತಲೇ ಇರುವಂತದ್ದೇ.

*** ಹಾಗಾದರೆ 'ಕಪ್ಪು ಹಣ'ವನ್ನು ತಡೆಯುವುದು ಹೇಗೆ?**

ಅದು 'ಕಪ್ಪು ಚಟುವಟಿಕೆ'ಗಳ ಜಾಡು ಹಿಡಿದು ಹೋಗಿ ನಿಖರವಾದ ತನಿಖೆ ನಡೆಸುವುದರಿಂದ ಮಾತ್ರವೇ ಸಾಧ್ಯ. ಇದಕ್ಕೆ ಪ್ರಾಮಾಣಿಕ, ವ್ಯವಸ್ಥಿತವಾಗಿ ಬಹಳಷ್ಟು ಶ್ರಮ ಪಟ್ಟು ತಾಳ್ಮೆಯಿಂದ ತನಿಖೆ ಮಾಡುವ ಒಂದು ದಕ್ಷ ತೆರಿಗೆ ಆಡಳಿತ ಬೇಕಾಗುತ್ತದೆ.

ವಾಸ್ತವವಾಗಿ, ಇಂತಹ 'ಕಪ್ಪು ಚಟುವಟಿಕೆ'ಗಳಲ್ಲಿ ವಿದೇಶಗಳಲ್ಲಿರುವ ಬ್ಯಾಂಕುಗಳ ಮೂಲಕ ನಡೆಯುವ ಚಟುವಟಿಕೆಗಳದ್ದೇ ಗಮನಾರ್ಹ ಪಾಲು. ಪ್ರಧಾನ ಮಂತ್ರಿಗಳೂ ಇದನ್ನು ಒಪ್ಪಿದ್ದಾರೆ. **ಇಲ್ಲವಾದರೆ, ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ಹಿಂದಕ್ಕೆ ತರುತ್ತೇನೆ ಎಂದು ಅವರು ಏಕೆ ಹೇಳಿದರು?**

ಹೀಗೆ 'ಕಪ್ಪು ಚಟುವಟಿಕೆ'ಗಳಿಗೆ ಹಣ ಒದಗಿಸುವ ಪ್ರಮುಖ ಮೂಲಗಳೆಂದರೆ ಈ ವಿದೇಶಿ ಬ್ಯಾಂಕುಗಳೇ. ಹಾಗಿರುವಾಗ 500 ರೂ. 1000ರೂ.ನ ನೋಟುಗಳನ್ನು ಚಲಾವಣೆಯಿಂದ ತೆಗೆಯುವುದರಿಂದ ಇಂತಹ 'ಕಪ್ಪು ಚಟುವಟಿಕೆ'ಗಳೇನೂ ಇಲ್ಲವಾಗುವುದಿಲ್ಲ, ಆದರೆ ಜನಸಾಮಾನ್ಯರಿಗೆ ಮಾತ್ರ ಇದರಿಂದ ಬಹಳಷ್ಟು ತೊಂದರೆಗಳಾಗುತ್ತವೆ.

*** ಇಂತಹ 'ಮಿಂಚಿನ ಪ್ರಹಾರ'' ಈ ಹಿಂದೆ ಎಂದೂ ನಡೆದೇ ಇರಲಿಲ್ಲವೇ?**

ಖಂಡಿತಾ ನಡೆದಿದೆ. 1946ರಲ್ಲಿ 1000 ಮತ್ತು 10,000 ರೂ.ನ ನೋಟುಗಳನ್ನು ಚಲಾವಣೆಯಿಂದ ತೆಗೆಯಲಾಯಿತು, ನಂತರ 1978ರಲ್ಲಿ ಮೊರಾರ್ಜಿ ದೇಸಾಯಿ ಸರಕಾರ 1000, 5000 ಮತ್ತು 10,000 ರೂ.ಗಳ ನೋಟುಗಳ ಚಲಾವಣೆ ರದ್ದು ಮಾಡಿತು.

ಆದರೆ ಹಿಂದಿನ ಎರಡೂ ಸಂದರ್ಭಗಳಲ್ಲಿ ಇದು ಜನಸಾಮಾನ್ಯರ ದೈನಂದಿನ ಚಟುವಟಿಕೆಗಳನ್ನೇನೂ ತಟ್ಟಲಿಲ್ಲ. ಏಕೆಂದರೆ 1946 ರಲ್ಲಿ ಮಾತ್ರವಲ್ಲ, 1978ರಲ್ಲಿ ಕೂಡ ಬಹಳಷ್ಟು ಜನಸಾಮಾನ್ಯರು 1000ರೂ.ಗಳ ನೋಟುಗಳನ್ನು ನೋಡಿಯೇ ಇರಲಿಲ್ಲ. ಇನ್ನು 5000, 10000ದ ಪ್ರಶ್ನೆಯೆಲ್ಲಿ. ಆದರೆ ಮೊರಾರ್ಜಿ ದೇಸಾಯಿ ಸರಕಾರದ ಅಂತಹ ಪ್ರಯತ್ನ ಕಪ್ಪು ಹಣದ ಪಿಡುಗನ್ನೇನೂ ಅಡಗಿಸಲಿಲ್ಲ.

ಮೋದಿ ಸರಕಾರದ ಈ ಕ್ರಮ ಕೂಡ ಮೊರಾರ್ಜಿ ದೇಸಾಯಿ ಸರಕಾರದ ಕ್ರಮದಂತೆಯೇ ಕಪ್ಪು ಹಣವನ್ನು ಎದುರಿಸುವಲ್ಲಿ ಏನೇನೂ ಪರಿಣಾಮಕಾರಿಯಾಗುವದಿಲ್ಲ. ಆದರೆ ಜನಸಾಮಾನ್ಯರ ದೈನಂದಿನ ಬದುಕಿನ ಮೇಲೆ ಸಂಕಟಗಳನ್ನು ಹೇರಿದೆ.

*** ಈ ಕ್ರಮ ತಕ್ಷಣವೇ ಫಲಿತಾಂಶ ತರದಿದ್ದರೂ, ನಗದು-ಬಳಸುವ ಆರ್ಥಿಕ ವ್ಯವಸ್ಥೆಯಿಂದ ದೂರ ಸರಿಯುವಂತೆ ಮಾಡಿ ದೀರ್ಘಾವಧಿಯಲ್ಲಿ ಕಪ್ಪು ಹಣ ಉತ್ಪತ್ತಿಸುವ ಚಟುವಟಿಕೆಗಳಿಗೆ ಅಂಕುಶ ತರುತ್ತದೆ ಎಂಬ ತರ್ಕದಲ್ಲಿ ಹುರುಳಿಲ್ಲವೇ?**

ಹೌದು, ಹಲವರು, ವಿಶೇಷವಾಗಿ ಮೇಲ್ವರ್ಗಗಳಿಗೆ ಸೇರಿದವರು ಒಂದು 'ನಗದು-ರಹಿತ ಭಾರತ'ದ ಕನಸು ಕಾಣುತ್ತಿದ್ದಾರೆ-ಅಂದರೆ ಎಲ್ಲ ಹಣಕಾಸು ವ್ಯವಹಾರಗಳೂ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಮುಂತಾದ 'ಪ್ಲಾಸ್ಟಿಕ್ ಹಣ'ದ ಮೂಲಕವೇ ನಡೆಯುವ ವ್ಯವಸ್ಥೆ ಬರುತ್ತದೆ ಎಂಬ ಕನಸು.

ಈ ಕನಸು ಒಂದು ವೇಳೆ ನೆರವೇರಿದರೂ, ವಿದೇಶಿ ಬ್ಯಾಂಕುಗಳ ಮೂಲಕ ನಡೆಯುವ 'ಕಪ್ಪು' ಚಟುವಟಿಕೆಗಳು' ಪತ್ತೆಯಾಗದೆ ಮುಂದುವರೆಯುತ್ತಲೇ ಇರುತ್ತವೆ.

ಆದರೆ 'ನಗದುರಹಿತ ಭಾರತ'ದ ಕನಸು ಈಡೇರುವಂತದ್ದಲ್ಲ. ಅಂತಹ ಕನಸು ಕಾಣುವ ಕುಲೀನರಿಗೆ ಒಬ್ಬ ಸಾಮಾನ್ಯ ಮನುಷ್ಯ ಒಂದು ಕ್ರೆಡಿಟ್ ಕಾರ್ಡ್ ಪಡೆಯಲು ಅಥವ ಬ್ಯಾಂಕ್ ಖಾತೆ ಕೂಡ ತೆರೆಯಲು (ಮೋದಿ ಸರಕಾರ 'ಜನಧನ'ದ ಬಗ್ಗೆ ಎಷ್ಟೇ ಜಂಭ ಕೊಚ್ಚಿಕೊಂಡರೂ) ಎಷ್ಟು ಕಷ್ಟಪಡಬೇಕಾಗುತ್ತದೆ ಎಂಬ ಕಿಂಚಿತ್ತೂ ಅರಿವಿಲ್ಲ.

'ನಗದುರಹಿತ' ವ್ಯವಸ್ಥೆ ಈಡೇರುವುದಿಲ್ಲ, ಆದರೆ ಅ ದಿಕ್ಕಿನಲ್ಲಿ ಸಾಗುವ ಪ್ರಯತ್ನ ಜನಸಾಮಾನ್ಯರನ್ನು ಹಿಂಡುವ ಮತ್ತೊಂದು ಸಾಧನವಾಗುತ್ತದೆ.

*** ಈ ಕ್ರಮ 'ಗಡಿಯಾಚೆ' ಮುದ್ರಣಗೊಂಡ ನಕಲಿ ನೋಟುಗಳ ಚಲಾವಣೆಯನ್ನು ತಡೆದು ಭಯೋತ್ಪಾದನೆಯ ವಿರುದ್ಧ ಕೆಲಸ ಮಾಡಬಹುದೆಂಬ ತರ್ಕ ಸರಿಯಲ್ಲವೇ?**

ಇದು ಹೊಸ ನೋಟುಗಳನ್ನು ಮುದ್ರಿಸುವ ತಂತ್ರಜ್ಞಾನ ಅದನ್ನು ನಕಲು ಮಾಡುವ ಯಾವುದೇ ಸಾಧ್ಯತೆಯನ್ನು ತಡೆಯುತ್ತದೆ ಎಂಬ ನಂಬಿಕೆಯ ಮೇಲೆಯೇ ಸಂಪೂರ್ಣವಾಗಿ ನಿಂತಿದೆ.

ಈ ನಂಬಿಕೆ ಸರಿಯೆಂದೇ ಒಪ್ಪಿಕೊಳ್ಳೋಣ. ಆದರೂ ನಕಲಿ ಮಾಡಲಾಗದ ಈ ಹೊಸ ನೋಟುಗಳನ್ನು ಕ್ರಮೇಣ ಮತ್ತು ಕಣ್ಣಿಗೆ ರಾಚದಂತೆ ಮಾಡಬಹುದಿತ್ತಲ್ಲ. ಸಾಮಾನ್ಯವಾಗಿ ಹಳೆಯ ನೋಟುಗಳ ಬದಲಿಗೆ ಹೊಸ ನೋಟುಗಳ ಮುದ್ರಣ ಸಾರ್ವಜನಿಕ ಗಮನಕ್ಕೆ ಬರದೇ ನಡೆಯುತ್ತಲೇ ಇರುತ್ತದೆ. ಹಾಗೆಯೇ ಇದನ್ನೂ ಮಾಡಬಹುದಿತ್ತಲ್ಲವೇ?

ನವಂಬರ್ 8ರ ರಾತ್ರಿ ಇದ್ದಕ್ಕಿದ್ದಂತೆ ನಕಲಿ ನೋಟುಗಳ ಪ್ರವಾಹವೇ ಹರಿದು ಬರುತ್ತದೆ ಎಂದೇನಾದರೂ ಸರಕಾರ ನಿರೀಕ್ಷಿಸುತ್ತಿತ್ತು ಎಂದೇನೂ ಅಲ್ಲವಲ್ಲ? ಈ ರೀತಿ ಜನಗಳ ಭದ್ರತೆ ಮತ್ತು ಅನುಕೂಲಗಳ ಮೇಲೆ ನವಂಬರ್ 8ರ ರಾತ್ರಿಯ ಈ ಆಕಸ್ಮಿಕ , ಆಶ್ಚರ್ಯಕಾರಿ ಮತ್ತು ಬೃಹತ್‌ಪ್ರಮಾಣದ ಪ್ರಹಾರವನ್ನು ತಪ್ಪಿಸಲು ಸಾಧ್ಯವಿರಲಿಲ್ಲವೇ?

*** ಮೋದಿ ಸರಕಾರ ಆಧುನಿಕ ಭಾರತದ ಇತಿಹಾಸದಲ್ಲಿ ಅಭೂತಪೂರ್ವವಾದ ಕ್ರಮ ಕೈಗೊಂಡಿದ್ದಾರೆ ಎಂಬುದು ನಿಜವಲ್ಲವೇ?**

ಹೌದು, ಇದು ವಸಾಹತುಶಾಹಿ ಸರಕಾರ ಕೂಡ ಜನಗಳ ಅನುಕೂಲಗಳ ಬಗ್ಗೆ ತೋರಿದ ಸಂವೇದನೆಯನ್ನೂ ತೋರಿಸಿಲ್ಲ ಎಂಬರ್ಥದಲ್ಲಿ ಅಭೂತಪೂರ್ವ ಕ್ರಮ!

1946ರಲ್ಲಿ ವಸಹತುಶಾಹೀ ಸರಕಾರ ಕೂಡ ಅಂದಿನ ಸೂಪರ್-ಶ್ರೀಮಂತರ ಬಳಿಯಿದ್ದ ನೋಟುಗಳ ಚಲಾವಣೆಗಳನ್ನು ಮಾತ್ರ ರದ್ದು ಮಾಡಿ ಜನಸಾಮಾನ್ಯರ ಬಳಿಯಿದ್ದ ನೋಟುಗಳನ್ನು ತಟ್ಟದಂತೆ ನೋಡಿಕೊಂಡು ಜನಸಾಮಾನ್ಯರ ಬಗ್ಗೆ ಈ ಸರಕಾರಕ್ಕಿಂತ ಹೆಚ್ಚಿನ ಸಂವೇದನೆಯನ್ನು ತೋರಿತ್ತು..

ಆದರೆ ಈ 'ತುರ್ತು ಪರಿಸ್ಥಿತಿಯ ಕ್ರಮ' ಅಘೋಷಿತ 'ತುರ್ತು ಪರಿಸ್ಥಿತಿ'(ಎಮರ್ಜೆನ್ಸಿ) ತರಲು ಹೊರಟಿರುವ ಮೋದಿ ಸರಕಾರದ ಇತರ ಹಲವು ಕ್ರಮಗಳಿಗೆ ಅನುಗುಣವಾಗಿಯೇ ಇದೆ- ಅಂದರೆ ಆ ಎಲ್ಲ ಕ್ರಮಗಳಷ್ಟೇ ಅವಿವೇಕದ ಜನ-ವಿರೋಧಿಯಾದ ಕ್ರಮ.

ನೋಟು-ಒಗಟು

ಚಲಾವಣೆಯಲ್ಲಿರುವ ನಕಲಿ 500ರೂ.,1000ರೂ. ನೋಟುಗಳೆಷ್ಟು ಎಂಬುದರ ಬಗ್ಗೆ ನಿರ್ದಿಷ್ಟವಾದ ಲೆಕ್ಕ ಇದ್ದಂತಿಲ್ಲ

- **2015ರ ಒಂದು ಅಧ್ಯಯನದ ಪ್ರಕಾರ ಯಾವುದೇ ಸಮಯದಲ್ಲಿ ಭಾರತೀಯ ಆರ್ಥಿಕದಲ್ಲಿ ಚಲಾವಣೆಯಲ್ಲಿರುವ ನಕಲಿ ನೋಟುಗಳ ಮೊತ್ತ 400 ಕೋಟಿ ರೂ.**
- **ಇದು ಈ ಹಣಕಾಸು ವರ್ಷದ ಒಟ್ಟು ಬಜೆಟ್ ಮೊತ್ತವಾದ 19.7ಲಕ್ಷ ಕೋಟಿ ರೂ.ನ 0.025% ಮಾತ್ರ.**
- **2015ರಲ್ಲಿ ಕಾನೂನು ಜಾರಿಗೊಳಿಸುವವರು ಹಿಡಿದ 1000ರೂ.ಗಳ ನೋಟುಗಳ ಸಂಖ್ಯೆ 1.7 ಕೋಟಿ, 500ರೂ. ನೋಟುಗಳ ಸಂಖ್ಯೆ 3ಲಕ್ಷ.**


ಮೂಲ: ಇಂಡಿಯನ್ ಸ್ಟಾಟಿಸ್ಟಿಕಲ್ ಇನ್ಸ್‌ಟಿಟ್ಯೂಟ್, ಕೊಲ್ಕತ ಮತ್ತು ಎನ್‌ಸಿಆರ್‌ಬಿ

ನಕಲಿ ನೋಟುಗಳ ಪ್ರಮಾಣ ಕೇವಲ 0.025% ವಾಗಿದ್ದಲ್ಲಿ, ಮತ್ತು ಹೊಸ ನೋಟುಗಳನ್ನು ಕೂಡ ನಕಲು ಮಾಡುವುದಾದರೆ, ಈ ಅನಾಣ್ಯೀಕರಣದ ಉದ್ದೇಶದ ವಿಷಯದಲ್ಲಿ ಈ ಸರಕಾರ ಪ್ರಾಮಾಣಿಕವಾಗಿದೆಯೇ?

ಈ ಸರಕಾರದ ಎರಡೂವರೆ ವರ್ಷಗಳ ಗಂಭೀರ ರಾಜಕೀಯ ಮತ್ತು ಸಾಮಾಜಿಕ ವಿಫಲತೆಗಳಿಂದ ಗಮನ ಬೇರೆಡೆಗೆ ಸೆಳೆಯುವ ಗಿಮಿಕ್ ಆಗಿ ಇದನ್ನು ಪ್ರಯತ್ನಿಸಲಾಗಿದೆ.

500, 1000ಗಳ ನೋಟುಗಳನ್ನು ಹಿಂತೆಗೆದುಕೊಂಡು ಹೊಸ 500, 2000 ರೂ.ಗಳ ನೋಟುಗಳನ್ನು ಮುದ್ರಿಸಲು ತಗಲುವ ಖರ್ಚೆಷ್ಟು, ಇದಕ್ಕೆ ತೆರಬೇಕಾದ ಸಾಮಾಜಿಕ, ಆರ್ಥಿಕ ಬೆಲೆ ಎಷ್ಟು, ಇದರಿಂದ ಅಂದಾಜು ಎಷ್ಟು ಕಪ್ಪು ಹಣವನ್ನು ಹತ್ತಿಕ್ಕಬಹುದು ಎಂಬುದನ್ನು ಸರಕಾರ ಸಾರ್ವಜನಿಕಗೊಳಿಸಬೇಕು.

-ಸೀತಾರಾಮ್ ಯೆಚೂರಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಅಮೆರಿಕಾದಲ್ಲಿ 'ಅಬ್ ಕೀ ಬಾರ್ ಟ್ರಂಪ್ ಸರಕಾರ್' ಹೇಗೆ?

ಬ್ರೆಕ್ಸಿಟ್ ನಂತರ ಅಮೆರಿಕಾದಲ್ಲಿ ಡೊನಾಲ್ಡ್ ಟ್ರಂಪ್ ವಿಜಯ ಮಾಧ್ಯಮಗಳ ಮತ ಸಮೀಕ್ಷೆಗಳನ್ನು ನಂಬಿದ್ದವರಿಗೆ ಆಘಾತ ಉಂಟು ಮಾಡಿದೆ. ಆದರೆ ಜಾಗತೀಕರಣದ ಸಾರಥಿಯಾದಂತಹ ದೇಶದಲ್ಲಿನ ಜನಸಾಮಾನ್ಯರ ಮೇಲೆ ಅದು ಎಂತಹ ಪರಿಣಾಮ ಬೀರಿದೆ ಎಂಬ ಮಾಹಿತಿ ಇದ್ದವರಿಗೆ ಅದರಿಂದೇನೂ ಆಶ್ಚರ್ಯವಾಗಿಲ್ಲ. ಅರ್ಥಶಾಸ್ತ್ರಜ್ಞ ಪ್ರೊ.ಜಯತಿ ಘೋಷ್ ಅಮೆರಿಕಾದಲ್ಲಿ ಮತದಾನ ನಡೆಯುವ ತುಸು ಮೊದಲು ಬರೆದ Understanding the American Right (Frontline **ಪತ್ರಿಕೆಯಲ್ಲಿ ಪ್ರಕಟವಾಗಿದೆ) ಇದನ್ನು ವಿಶ್ಲೇಷಿಸಿದೆ. ಯುರೋಪಿನಲ್ಲಿ ಬಲಪಂಥಕ್ಕೆ ಬೆಂಬಲ, ಬಾರತದಲ್ಲಿ ಹಿಂದುತ್ವ ಶಕ್ತಿಗಳ ಕೈಮೇಲಾಗಿರುವುದು, ಮತ್ತು ಈಗ ಅಮೆರಿಕಾದಲ್ಲೇ ಕಾಣುತ್ತಿರುವ ವಿದ್ಯಮಾನ ಜಾಗತೀಕರಣ ಶಕ್ತಿಗಳು ಜಾಗತಿಕವಾಗಿ ಸೃಷ್ಟಿಸಿರುವ ಪ್ರತಿಸ್ಪಂದನೆ ಸುಮಾರಾಗಿ ಒಂದೇ ರೀತಿಯಲ್ಲಿರುವುದನ್ನು ತೋರಿಸುತ್ತದೆ. ಇದು ಅರ್ಥಮಾಡಿ ಕೊಳ್ಳಬಹುದಾದ ಅಂಶವಾಗಿದ್ದರೂ ಅನಪೇಕ್ಷಣೀಯವಾಗಿದೆ ಎನ್ನುತ್ತಾರೆ ಲೇಖಕರು. ಈ ಲೇಖನದ ಭಾವಾನುವಾದ**

ಅಮೆರಿಕದ ಅಧ್ಯಕ್ಷೀಯ ಚುನಾವಣಾ ಇತಿಹಾಸದಲ್ಲೇ ಈ ಚುನಾವಣೆ ಸೃಷ್ಟಿಸಿದಂತಹ ಕೋಲಾಹಲ,ಉಂಟುಮಾಡಿದ ಆತಂಕ, ಫಲಿತಾಂಶದ ಬಗ್ಗೆ ಕೆರಳಿಸಿದ ಕುತೂಹಲ, ವೈಯುಕ್ತಿಕ ನಿಂದೆ ಮತ್ತು ದೋಷಾರೋಪಣೆ ಮಾಡುವುದರಲ್ಲಿ ಅಭ್ಯರ್ಥಿಗಳು ತಲುಪಿದ ಕೆಳಮಟ್ಟಗಳನ್ನು ಕಂಡ ಅಮೆರಿಕದ ಅಧ್ಯಕ್ಷೀಯ ಚುನಾವಣೆ ಇನ್ನೊಂದಿಲ್ಲ. ಹಿಲರಿ ಕ್ಲಿಂಟನ್ ಮತ್ತು ಡೊನಾಲ್ಡ್ ಟ್ರಂಪ್ ಒಬ್ಬರ ಜಾತಕವನ್ನು ಇನ್ನೊಬ್ಬರು ಬಿಚ್ಚಿಟ್ಟರು. ಅವರು ತಮ್ಮ ಎದುರಾಳಿಯ ಚಾರಿತ್ರ್ಯವನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ವಿವರಗಳ ಮೂಲಕ, ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಸರಿಹೊಂದುವ ಯೋಗ್ಯತೆ ಈ ಇಬ್ಬರಲ್ಲಿ ಒಬ್ಬರಿಗೂ ಇಲ್ಲ ಎಂಬುದು ಇಡೀ ಪ್ರಪಂಚಕ್ಕೆ ಮನದಟ್ಟಾಯಿತು.

ಡೊನಾಲ್ಡ್ ಟ್ರಂಪ್, ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರು. ರಿಯಲ್ ಎಸ್ಟೇಟ್ ಉದ್ದಿಮೆಯ ಭಾರಿ ಕುಳ. ಅವರ ಮೇಲೆ ತೆರಿಗೆ ವಂಚನೆಯ ಆರೋಪಗಳಿವೆ. ಐಷಾರಾಮಿ ಜೀವನ ಶೈಲಿ ಮತ್ತು ಮೋಜು ಮಸ್ತಿಗಳಲ್ಲಿ ಮುಳುಗಿದ್ದ ಟ್ರಂಪ್ ರಿಪಬ್ಲಿಕನ್ ಪಾರ್ಟಿಯ ಉಮೇದುವಾರರಾಗಿ ಆಯ್ಕೆಗೊಂಡಿದ್ದೇ ಒಂದು ಆಶ್ಚರ್ಯಕರ ಘಟನೆ. ಚುನಾವಣಾ ಪ್ರಚಾರದ ಸಮಯದಲ್ಲೇ ಮಹಿಳೆಯರ ಬಗ್ಗೆ ಅಗೌರವದ ಮಾತುಗಳನ್ನು ಆಡಿದ್ದೂ ಅಲ್ಲದೆ ಅವುಗಳನ್ನು ಸಮರ್ಥಿಸಿಕೊಂಡದ್ದು, ಮಹಿಳೆಯರ ಜೊತೆ ಅನುಚಿತವಾಗಿ ವರ್ತಿಸಿರುವ ಚಾರಿತ್ರ್ಯ ಇಡೀ ಮುಸ್ಲಿಂ ಸಮುದಾಯಕ್ಕೆ ಸೇರಿದವರೆಲ್ಲರೂ ಭಯೋತ್ಪಾದಕ- ರೆಂದು ವರ್ಣಿಸಿದ, ಮೆಕ್ಸಿಕನ್ ವಲಸೆಗಾರರನ್ನು ತಡೆಯಲು ಗೋಡೆ ಕಟ್ಟುವುದಾಗಿ ಘೋಷಿಸಿದ, ಬಿಳಿಯರನ್ನು ಹೊರತುಪಡಿಸಿ ಉಳಿದವರನ್ನು ಜನಾಂಗೀಯ ಆಧಾರದ ಮೇಲೆ ದ್ವೇಷಿಸುವ, ವಿಕಲಾಂಗ ವ್ಯಕ್ತಿಗಳನ್ನು ಅವಹೇಳನ ಮಾಡುವ, ವೈಜ್ಞಾನಿಕ ಮನೋಭಾವದ ಕೊರತೆಯುಳ್ಳ ಒಬ್ಬ ವ್ಯಕ್ತಿ ಅಮೆರಿಕನ್ ಮತದಾರರ ಬೆಂಬಲ ಪಡೆಯುವಲ್ಲಿ ಯಶಸ್ವಿಯಾದದ್ದು ಆಶ್ಚರ್ಯಕರವಾಗಿದೆ.

ಒಬ್ಬ ವ್ಯಕಿಯು ವ್ಯಕ್ತಪಡಿಸುವ ಇಂತಹ ಗುಣಗಳು, ಸಾಧಾರಣವಾಗಿ, ಚುನಾವಣೆಗಳಲ್ಲಿ ಮತಗಳಿಸಲು ಸಹಾಯಕವಾಗುವುದಿಲ್ಲ. ಆದರೂ, ಟ್ರಂಪ್ ಯಶಸ್ವಿಯಾದರು. ಕಾರಣ, ಜನಸಾಮಾನ್ಯರು (ಮುಖ್ಯವಾಗಿ ಕಾರ್ಮಿಕ ವರ್ಗದ ಬಿಳಿಯರು) ಕಳೆದ ಒಂದೆರಡು ದಶಕಗಳಲ್ಲಿ ಜಾಗತೀಕರಣದಿಂದಾಗಿ ಅನುಭವಿಸಿದ ಕಷ್ಟ ಕೋಟಲೆಗಳ ಬಟ್ಟಲಿಗೆ ಕೈ ಹಾಕಿ ಕಲಕಿದ ಟ್ರಂಪ್ ಅವರನ್ನು ತನ್ನ ತೆಕ್ಕೆಗೆ ಹಾಕಿಕೊಂಡರು. ಮಡುಗಟ್ಟಿದ್ದ ಅವರ ನಿರಾಸೆ ಮತ್ತು ಆಕ್ರೋಶಗಳು ಒಂದೆಡೆ ಹರಿಯುವಂತೆ ಮಾಡಿದ ಟ್ರಂಪ್ ಅದರ ಲಾಭ ಪಡೆದರು. ಅದಕ್ಕಾಗಿ ಅವರು, ಅಮೆರಿಕ ಬೇರೆ ದೇಶಗಳೊಂದಿಗೆ ಮಾಡಿಕೊಂಡಿದ್ದ ವ್ಯಾಪಾರ ಒಪ್ಪಂದಗಳ ವಿರೋಧವಾಗಿ ಮತದಾರರ ಮನಸ್ಸಿಗೆ ನಾಟುವ ವಾದ ಮಂಡಿಸಿದರು, ಮುಸ್ಲಿಮರು ಮಾತ್ರ ಭಯೋತ್ಪಾದಕರು ಎಂಬ ಅಂಶವನ್ನು ಒತ್ತಿ ಹೇಳಿದರು. ತಾನೊಬ್ಬ ವ್ಯವಸ್ಥೆಯ ವಿರುದ್ಧದ ಹೋರಾಟಗಾರನೆಂದೂ, ತನ್ನ ಎದುರಾಳಿ ಹಿಲರಿಯು ವ್ಯವಸ್ಥೆಯ ಒಂದು ಭಾಗವೆಂದೂ ಹಾಗೂ ಈ ಎಲ್ಲಾ ಸಮಸ್ಯೆಗಳಿಗೆ ಅವರು ಕಾರಣರಾಗಿರುವುದರಿಂದ ಅದನ್ನು ಪರಿಹರಿಸಲು ಅವರಿಗೆ ಸಾಧ್ಯವಿಲ್ಲವೆಂದು ಬಿಂಬಿಸುವಲ್ಲಿ ಟ್ರಂಪ್ ಯಶಸ್ವಿಯಾದರು.

ಇಲ್ಲಿ ಕೆಲವು ಪ್ರಶ್ನೆಗಳು ಏಳುತ್ತವೆ. ಅಷ್ಟೇನೂ ನಿರ್ಗತಿಕರಲ್ಲದ ಕೆಲ ಮಂದಿ ಅಮೆರಿಕನ್ನರಿಗೆ ಸರ್ಕಾರದ/ವ್ಯವಸ್ಥೆಯ ಮೇಲೆ ಅಷ್ಟೊಂದು ಕೋಪ ಇರುವುದಾದರೂ ಏಕೆ 2011ರ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳವಳಿಗಾರರ ಗುರಿಯಾಗಿದ್ದ ಶೇ.1 ಮಂದಿ ಅತಿ ಶ್ರೀಮಂತರ ಮೇಲೆ ಈ ಕೋಪವನ್ನು ಅವರು ಏಕೆ ತೋರಿಸುತ್ತಿಲ್ಲ? ಬಡಪಾಯಿಗಳಾದ ಕರಿಯರು ಮತ್ತು ವಲಸೆಗಾರರ ಮೇಲೆ ಕತ್ತಿ ಮಸೆಯುತ್ತಿರುವುದು ಏಕೆ?

ಆರ್ಲಿ ರಸ್ಸೆಲ್ ಹಾಕ್‌ಷ್ಕೀಲ್ಡ್ ಎಂಬ ಸಮಾಜಶಾಸ್ತ್ರಜ್ಞರು(ಬರ್ಕಲೀ ಯೂನಿವರ್ಸಿಟಿ) ತಮ್ಮಇತ್ತೀಚಿನ ಒಂದು ಪುಸ್ತಕದಲ್ಲಿ, ಮನಸ್ಸನ್ನು ಕಾಡುವ ಇಂತಹ ಹಲವು ಪ್ರಶ್ನೆಗಳಿಗೆ, ಚಿಕಿತ್ಸಕ ಒಳನೋಟಗಳಿಂದ ಕೂಡಿದ ಉತ್ತರಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಂದ ಬಳಲುತ್ತಿರುವ ಜನ ಸಾಮಾನ್ಯರನ್ನು ಚರ್ಚುಗಳು ಮತ್ತು ಮಾಧ್ಯಮಗಳು ಪ್ರಭಾವಿಸುತ್ತಿರುವ ಬಗ್ಗೆ ಹಾಕ್‌ಷ್ಕೀಲ್ಡ್ ಪ್ರಸ್ತಾಪಿಸಿದ್ದಾರೆ:

ಚರ್ಚುಗಳು.ಅಮೆರಿಕದ ಬಡ ರಾಜ್ಯಗಳಲ್ಲೊಂದಾದ ಲೂಸಿಯಾನದ ಲೇಕ್ ಚಾರ್ಲ್ಸ್ ಪ್ರದೇಶದಲ್ಲಿ ಕೆಲವು ಸಣ್ಣ ಸಮುದಾಯಗಳೊಂದಿಗೆ ಬೆರೆತು ಅಲ್ಲಿನ ಪರಿಸ್ಥಿತಿಯನ್ನು ಹಾಕ್‌ಷ್ಕೀಲ್ಡ್ ತಮ್ಮ ಅಧ್ಯಯನಕ್ಕೆ ಒಳಪಡಿದ್ದರು. ಪರಿಸರಕ್ಕೆ ಅಪಾರ ಹಾನಿಯುಂಟು ಮಾಡಿ, ಆ ಪ್ರದೇಶದಲ್ಲಿದ್ದ ಪ್ಲಾಂಟೇಷನ್‌ಗಳನ್ನು ಕಡಿದು ತೈಲ ಹೊರತೆಗೆಯುವ ಕೆಲಸದಲ್ಲಿ ಕೆಲವು ಖಾಸಗಿ ಉದ್ದಿಮೆಗಳು ತೊಡಗಿದ್ದವು. ಅವುಗಳಿಗೆ 1.6 ಬಿಲಿಯನ್ ಡಾಲರ್ ಮೊತ್ತದ ಉತ್ತೇಜನ ಕೊಡಲು, ಆ ರಾಜ್ಯದ ಗವರ್ನರ್ ಬಾಬ್ಬಿ ಜಿಂಡಾಲ್, ಶಾಲೆಗಳು, ಆಸ್ಪತ್ರೆಗಳು ಮುಂತಾದ ಅಗತ್ಯ ಸೇವೆಗಳ ಮೇಲಿನ ಖರ್ಚನ್ನು ಶೇ.40ರಷ್ಟು ಕಡಿತಗೊಳಿಸಿದರು. ಅಲ್ಲಿನ ಜನ ಈ ಕ್ರಮವನ್ನು ವಿರೋಧಿಸಲಿಲ್ಲ. ಏಕೆ- ಂದರೆ, ಉದ್ದಿಮೆಗಳು ಉದ್ಯೋಗ ಮತ್ತು ಸಮೃದ್ಧಿ ತರುತ್ತವೆಂದು ಅವರು ಭಾವಿಸುತ್ತಾರೆ. ಅದೇ ಕಾರಣದಿಂದ, ಪರಿಸರ ಮಾಲಿನ್ಯ ಉಂಟುಮಾಡಿದ ರೋಗ ರುಜಿನಗಳನ್ನೂ ಸಹಿಸಿಕೊಳ್ಳುತ್ತಾರೆ (philosophical acceptance). ತಮ್ಮ ನೆರವಿಗೆ ಬಾರದ ಫೆಡರಲ್ ಸರ್ಕಾರದ ಮೇಲೆ ಅವರಿಗೆ ನಂಬಿಕೆ ಉಳಿದಿಲ್ಲ. ತಾವು ಸ್ವಾವಲಂಬಿಗಳಾಗಿ ಇರಬೇಕೆಂದೂ ಮತ್ತು ತಮಗೆ ಎದುರಾಗುವ ಕಷ್ಟಗಳನ್ನು ಸಹಿಸಿಕೊಳ್ಳುವ ಮನೋಭಾವ ಬೆಳಸಿಕೊಳ್ಳಬೇಕೆಂದೂ ಮತ್ತು ಪುಕ್ಕಟೆ ದೊರಕುವ ಸವಲತ್ತುಗಳನ್ನು ಅಪೇಕ್ಷಿಸಬಾರದೆಂಬ ನೈತಿಕತೆಯನ್ನೂ ಮೆರೆಯಲು ಅವರು ಹೆಣಗುತ್ತಾರೆ. ಅಲ್ಲಿರುವ ಚರ್ಚುಗಳು ಜನ ಇಂತಹ ಮನೋಭಾವ ಬೆಳಸಿಕೊಳ್ಳಲು ಪ್ರೇರೇಪಿಸುತ್ತಿವೆ. ಮಾನಸಿಕ ಒತ್ತಡಕ್ಕೊಳಗಾದವರಿಗೆ ಸಮಾಧಾನ ಪಡಿಸುವ ಸೇವಾ ಕಾರ್ಯಗಳನ್ನು ಚರ್ಚುಗಳು ಮಾಡುತ್ತಿವೆ. ಅದಕ್ಕಾಗಿ, ಜನರ ವರಮಾನದ ಸುಮಾರು 10%ನಷ್ಟು ಕಾಣಿಕೆಯನ್ನೂ ಪಡೆಯುತ್ತವೆ.

ಮಾಧ್ಯಮಗಳು: ಮಾಧ್ಯಮಗಳು ಜನ ಸಾಮಾನ್ಯರ ಅಭಿಪ್ರಾಯಗಳಿಗೆ ಪ್ರಚಾರ ಕೊಡುವ ಮೂಲಕ ಜನರು ಬೇರೆಯವರ ಬಗ್ಗೆ ಹೊಂದಿರುವ ಪೂರ್ವಕಲ್ಪಿತ ಅಭಿಪ್ರಾಯಗಳು ಮತ್ತು ತಮ್ಮ ಭವಿಷ್ಯದ ಬಗ್ಗೆ ಅವರು ಹೊಂದಿರುವ ಆತಂಕಗಳು ಇದ್ದ ಹಾಗೆಯೇ ಉಳಿಯುವಂತೆ ಮಾಡಿವೆ. ಹಾಕ್‌ಷ್ಕೀಲ್ಡ್ ಅವರು ಗಮನಿಸಿರುವಂತೆ, ಕೈಗಾರಿಕೆ, ರಾಜ್ಯ ಸರ್ಕಾರ, ಚರ್ಚ್ ಮತ್ತು ವಾಡಿಕೆಯ ವಿವಿಧ ಮಾಧ್ಯಮಗಳ ಪಕ್ಕದಲ್ಲಿ ಫಾಕ್ಸ್ ನ್ಯೂಸ್ ಎಂಬ ಸಂಸ್ಥೆಯು ತನ್ನದೇ ಆದ ರಾಜಕೀಯ ಸಂಸ್ಕೃತಿ ಬಿತ್ತರಿಸುವ ಒಂದು ಅಧಿಕ ಸ್ಥಂಬದಂತೆ ನಿಂತಿದೆ. ಯಾವ ವಿಷಯದ ಬಗ್ಗೆ ಜನ ಕೋಪಗೊಳ್ಳಬೇಕು, ಯಾವ ಅಂಶದ ಬಗ್ಗೆ ಜನ ಆತಂಕಕ್ಕೊಳಗಾಗಬೇಕು ಮತ್ತು ಯಾರ ಬಗ್ಗೆ ಭಯ ಭಕ್ತಿ ಬೆಳಸಿಕೊಳ್ಳಬೇಕು ಎಂದು ಅದು ಪ್ರಭಾವಿಸುತ್ತಿದೆ. ಒಬ್ಬ ಮಹಿಳೆ ಹೇಳುತ್ತಾರೆ: "ಫಾಕ್ಸ್ ನಮ್ಮ ಕುಟುಂಬದಂತಿದೆ". ಹಾಗಾಗಿ, ರೇಡಿಯೊ, ಟಿ.ವಿ ಮತ್ತು ಅಂತರ್ಜಾಲದ ಮೂಲಕ ಕುಟುಂಬದಜೊತೆ ಸತತವಾಗಿ ಸಂವಾದ ನಡೆ- ಯುತ್ತದೆ. 'ನ್ಯೂಯಾರ್ಕ್ ಟೈಮ್ಸ್' ನಂತಹ ಪತ್ರಿಕೆಗಳು ಅಪನಂಬಿಕೆಗೊಳಗಾಗಿವೆ.

ಹಾಕ್‌ಷ್ಕೀಲ್ಡ್ ಅವರು ದುಡಿಯುವ ಬಿಳಿಯ ಮಂದಿಯ ಭಾವನೆಗಳ 'ಆಳದ ಕತೆ'- ಆಳದಲ್ಲಿ ಬಹಳ ಕಾಲ ಸುಪ್ತವಾಗಿದ್ದ ಕೋಪ ಈಗ ಹೊತ್ತಿ ಉರಿಯುತ್ತಿರುವುದನ್ನು ಒಂದು ರೂಪಕದ ಮೂಲಕ ಕಟ್ಟಿಕೊಟ್ಟಿದ್ದಾರೆ:

'ನೀವೊಂದು ಬೆಟ್ಟ ಹತ್ತುವ ದಾರಿಯಲ್ಲಿ, ಒಂದು ಸರತಿಯ ಸಾಲಿನ ಮಧ್ಯದಲ್ಲಿ ನಿಂತಿದ್ದೀರಿ. ಆ ಸಾಲಿನಲ್ಲಿರುವ ನೀವು ಮತ್ತು ಉಳಿದವರು ಎಲ್ಲರೂ ಬಿಳಿಯರು, ವಯಸ್ಸಾದವರು, ಕ್ರೈಸ್ತರು, ಹೆಚ್ಚಿನವರು ಗಂಡಸರು- ಅವರಲ್ಲಿ ಕೆಲವರು ಮಾತ್ರ ಕಾಲೇಜು ಶಿಕ್ಷಣ ಪಡೆದವರು ಇದ್ದಾರೆ.ಆ ದಾರಿಯ ತುದಿಯಲ್ಲಿ ಕಾಣುತ್ತಿದೆ ಕನಸಿನ ಅಮೆರಿಕ-ಅದು ಪ್ರತಿಯೊಬ್ಬ ವ್ಯಕ್ತಿಯ ಏಳಿಗೆಯ ಕನಸು. ಎಲ್ಲರ ಗುರಿಯೂ ಅದೇ. ಸರತಿಯ ಸಾಲಿನ ಕೊನೆಯಲ್ಲಿ ಬೇರೆ ಬಣ್ಣದ ಮಂದಿ – ಬಡವರು, ಮಕ್ಕಳು ಮತ್ತು ವಯಸ್ಸಾದವರು, ಅವರಲ್ಲಿ ಕಾಲೇಜು ಶಿಕ್ಷಣ ಪಡೆಯದವರೇ ಬಹಳ ಮಂದಿ ನಿಂತಿದ್ದಾರೆ. ಅವರಿಗೂ ಒಳ್ಳೆಯದಾಗಲಿ ಎಂದು ನೀವು ಹಾರೈಸುತ್ತೀರಿ. ನೀವು ಕಷ್ಟ ಜೀವಿ, ಸಾಲಿನಲ್ಲಿ ಬಹಳ ಹೊತ್ತಿನಿಂದಲೂ ನಿಂತಿದ್ದೀರಿ, ಆದರೂ, ಸಾಲು ಚಲಿಸುತ್ತಿಲ್ಲ. ನೀವು ನಿಂತಲ್ಲೇ ಇದ್ದೀರಿ.

ನೀವು ಬೆಟ್ಟದ ತುದಿಯಲ್ಲಿರುವವರತ್ತ ಗಮನ ಹರಿಸುತ್ತೀರಿ.... ನಿಗದಿಗಿಂತಲೂ ಹೆಚ್ಚಿನ ಸಮಯ ದುಡಿದಿದ್ದೀರಿ, ಆರೋಗ್ಯಕ್ಕೆ ಅಪಾಯಕಾರಿಯಾಗಿದ್ದ ವಾತಾವರಣಗಳಲ್ಲಿ ಕೆಲಸ ಮಾಡಿದ್ದೀರಿ ಮತ್ತು ಲೇ- ಆಫ್ ಪರಿಸ್ಥಿತಿ ಎದುರಿಸಿದ್ದೀರಿ, ಮತ್ತು ನಿಮ್ಮ ವೃದ್ಧಾಪ್ಯ ವೇತನವನ್ನು ಕಡಿಮೆ ಮಾಡಲಾಗಿದೆ. ಈ ಎಲ್ಲ ಅಗ್ನಿ ಪರೀಕ್ಷೆಗಳಲ್ಲಿಯೂ ನಿಮ್ಮ ನೈತಿಕತೆ ಕುಂದಿಲ್ಲ. ಈ ಕಾರಣಗಳಿಂದಾಗಿ, ಕನಸಿನ ಅಮೆರಿಕ ಲೋಕ ಪ್ರವೇಶಿಸಲು ನೀವು ಅರ್ಹತೆ ಗಳಿಸಿದ್ದೀರಿ.ಆದರೆ..

ಬಿಸಿಲು ನೆತ್ತಿಯನ್ನು ಸುಡುತ್ತಿದೆ. ಸಾಲು ಚಲಿಸುತ್ತಿಲ್ಲ. ನಿಮ್ಮನ್ನು ಹಿಂದಕ್ಕೆ ತಳ್ಳಿದಂತೆ ನಿಮಗೆ ಭಾಸವಾಗುತ್ತಿದೆ.... ನೀವು ಅನೇಕ ವರ್ಷಗಳಿಂದಲೂ ನಿರೀಕ್ಷಿಸುತ್ತಿದ್ದ ಸಂಬಳದ ಹೆಚ್ಚಳ ಕೈಗೂಡಿಲ್ಲ. ವಾಸ್ತವವಾಗಿ, ಕಳೆದ ಇಪ್ಪತ್ತು ವರ್ಷಗಳಲ್ಲಿ ಅದು ಕಡಿಮೆಯಾಗಿದೆ.

ಈ ಎಲ್ಲಕಷ್ಟಗಳನ್ನು ಸಹಿಸಿಕೊಂಡಿದ್ದೀರಿ. ಏಕೆಂದರೆ, ನೀವು ಒಳ್ಳೆಯದು ಆಗಿಯೇ ಆಗುತ್ತದೆ ಎಂದು ನಂಬುವ ವ್ಯಕ್ತಿ. ನೀವು ಬೇರೆಯವರನ್ನು ದೂಷಿಸುವವರಲ್ಲ. ಆದರೆ, ಸಾಲು ಚಲಿಸುತ್ತಿಲ್ಲವಲ್ಲ. ನಿಮ್ಮ ಎಲ್ಲ ಶ್ರಮ, ತ್ಯಾಗಗಳ ಬಳಿಕವೂ ಎಲ್ಲಿಯೋ ನೀವು ಸಿಕ್ಕಿ ಹಾಕಿಕೊಂಡಿದ್ದೀರಿ ಎಂದು ನಿಮಗನಿಸುತ್ತಿದೆ.

ಇಲ್ಲಿ ನೋಡಿ! ನಿಮ್ಮ ಮುಂದೆ ಸ್ವಲ್ಪದೂರದಲ್ಲಿ ಯಾರೋ ಸಾಲನ್ನು ಮುರಿದು ಅಲ್ಲಿ ನಿಲ್ಲುತ್ತಿದ್ದಾರೆ. ನೀವು ನಿಯಮ ಪಾಲಿಸುತ್ತೀರಿ. ಅವರು ಪಾಲಿಸುತ್ತಿಲ್ಲ. ಅವರು ಸಾಲನ್ನು ಮುರಿದು ಅದನ್ನು ಪ್ರವೇಶಿಸುತ್ತಿರುವಾಗ, ನಿಮ್ಮನ್ನು ಹಿಂದಕ್ಕೆ ತಳ್ಳಿದಂತೆ ನಿಮಗೆ ಭಾಸವಾಗುತ್ತಿದೆ. ...ಯಾರವರು? ಅವರಲ್ಲಿ ಕೆಲವರು ಕರಿಯರು. ಫೆಡರಲ್ ಸರ್ಕಾರವು ಕೆಲವರನ್ನು ಬಲಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಮಹಿಳೆಯರು, ವಲಸೆಗಾರರು, ನಿರಾಶ್ರಿತರು, ಸಾರ್ವಜನಿಕ ವಲಯದ ಕೆಲಸಗಾರರು- ಇದಕ್ಕೆ ಕೊನೆಯೇ ಇಲ್ಲವೇ? ನಿಮ್ಮ ತೆರಿಗೆಯ ಹಣ ನೀವು ಒಪ್ಪದ ಅನುಕಂಪಗಳಿಗೆ ಬಳಕೆಯಾಗುತ್ತಿದೆ. ಇಂತಹ ಅವಕಾಶಗಳ ಪ್ರಯೋಜನ ಪಡೆಯುವ ಬಯಕೆ ನಿಮಗೆ ಅನುದಿನವೂ ಇತ್ತು... ಇದು ಸರಿಯಲ್ಲ.

ಮತ್ತೆ ಈ ಒಬಾಮ. ಕಡಿಮೆ ವರಮಾನದ ಒಂಟಿ ತಾಯಿಯ, ದ್ವಿಜನಾಂಗದ ಕೂಸಾಗಿ ಹುಟ್ಟಿದವ ಅಮೆರಿಕದಂತಹ ಬಲಿಷ್ಠ ರಾಷ್ಟ್ರದ ಅಧ್ಯಕ್ಷ ಪದವಿಯಂತಹ ಉನ್ನತ ಹುದ್ದೆಗೆ ಏರಿದ್ದು ಹೇಗೆ? ಹೀಗೆಲ್ಲಾ ಆಗುತ್ತದೆ ಎಂದೆಣಿಸಿರಲಿಲ್ಲ.

ಮಹಿಳೆಯರು: ಗಂಡಸರ ಕೆಲಸಗಳಿಗೆ ಲಗ್ಗೆ ಹಾಕಿರುವ ಮಹಿಳೆಯರೂ ಸಾಲು ಮುರಿದು ಅದ- ಕ್ಕೆ ಸೇರಿಕೊಂಡು ನಿಮ್ಮನ್ನು ಹಿಂದಕ್ಕೆ ತಳ್ಳುತ್ತಿದ್ದಾರೆ. ಹೆಚ್ಚಿನ ಸಂಬಳದ, ಕಡಿಮೆ ಕೆಲಸದ, ಕೆಲಸದ ಭದ್ರತೆ ಇರುವ ಸಾರ್ವಜನಿಕ ವಲಯದ ಹುದ್ದೆಗಳು ಅವರಿಗೆ ದೊರೆಯುತ್ತಿವೆ. ನಿಮ್ಮ ತಂದೆಯ ಕಾಲದಲ್ಲಿ ಹೀಗಾಗಿರಲಿಲ್ಲ. **ವಲಸೆಗಾರರು:** ವಿಶೇಷ ಕೆಟಗರಿ ವೀಸಾ ಅಥವಾ ಗ್ರೀನ್ ಕಾರ್ಡ್ ಪಡೆದ ಫಿಲಿಪಿನೊಗಳು, ಮೆಕ್ಸಿಕನರು, ಅರಬ್ಬೀಯರು, ಭಾರತೀಯರು ಮತ್ತು ಚೀನೀಯರು ಸರತಿಯ ಸಾಲಿನಲ್ಲಿ ನಿಮಗಿಂದ ಮುಂದಿದ್ದಾರೆ.

ನಿರಾಶ್ರಿತರು: 10,000 ಮಂದಿ ಸಿರಿಯಾದ ನಿರಾಶ್ರಿತರಿಗೆ ಅಧ್ಯಕ್ಷ ಒಬಾಮ ಆಶ್ರಯಕೊಟ್ಟಿದ್ದಾರೆ. ಅವರಲ್ಲಿ ಶೇ.90 ಮಂದಿ ಭಯೋತ್ಪಾದಕರೆಂದು ಹೇಳಲಾಗುತ್ತಿದೆ. ಇವರೂ ಸಾಲಿನಲ್ಲಿ ಸೇರಿಕೊಂಡು ನಿಮ್ಮ ತೆರಿಗೆ ಹಣವನ್ನು ತಿನ್ನುತ್ತಾರೆ.... ನಿಮ್ಮ ಗತಿ ಏನು? ನೀವೂ ನಿರಾಶ್ರಿತರಿಗಿಂತಲೂ ಕಡೆ ಎಂದು ನಿಮಗನ್ನಿಸುತ್ತಿದೆ.

ಆದರೆ, ಈ ದೇಶಕ್ಕೆ ಅಗ್ರಗಣ್ಯ ಸ್ಥಾನವನ್ನು ಸಂಪಾದಿಸಿಕೊಟ್ಟವರು ನೀವು. ಸಾಲು ಮುರಿಯುವವರಿಂದ ನೀವು ಕಿರಿ ಕಿರಿಗೊಳಗಾಗಿದ್ದೀರಿ. ಅವರನ್ನು ಕಂಡರೆ ನೀವು ಕೋಪಗೊಳ್ಳುವುದು ಸಹಜ. ಫಾಕ್ಸ್ ಛಾನೆಲ್ ನಿರೂಪಕರು ನಿಮ್ಮ ಭಾವನೆಗಳನ್ನು ಪ್ರತಿಧ್ವನಿಸುತ್ತಿದ್ದಾರೆ. ನೀವೊಬ್ಬ ಸಹಾನುಭೂತಿಪರ ವ್ಯಕ್ತಿ. ಹಾಗೆಂದು, ಸರತಿಯ ಸಾಲು ಮುರಿದು ನಿಮ್ಮನ್ನು ಹಿಂದೆ ತಳ್ಳುವವರಿಗೂ ನೀವು ಸಹಾನುಭೂತಿ ತೋರಿಸಬೇಕೆಂದು ಕೋರುವುದು ಸರಿಯೇ?

ಅಧ್ಯಕ್ಷ ಬರಾಕ್ ಹುಸೇನ್ ಒಬಾಮ ಸಾಲು ಮುರಿಯುವವರ ಪರ ನಿಂತಿದ್ದಾರೆ. ಅವರು ನಿಮಗಿಂತಲೂ ಹೆಚ್ಚಿನ ಕಷ್ಟ ಅನುಭವಿಸಿರುವುದರಿಂದ ಅವರಿಗೆ ವಿಶೇಷ ಗಮನ ಕೊಡಬೇಕಾಗುತ್ತದೆ ಎಂದು ಒಬಾಮ ಹೇಳುತ್ತಾರೆ. ಆದರೆ, ಅವರ ಬಗ್ಗೆ ಒಬಾಮ ಹೇಳುತ್ತಿರುವ ಅಂಶಗಳು ನಿಜವಲ್ಲ ಎಂದು ಫಾಕ್ಸ್ ನ್ಯೂಸ್ ಛಾನೆಲ್ ಹೇಳುತ್ತದೆ. ಹಾಗೆ ನೋಡಿದರೆ, ಒಬಾಮ ಮತ್ತು ಅವರ ಹೆಂಡತಿ ಸಾಲು ಮುರಿದವರೇ.

ನಿಮ್ಮ ನಂಬಿಕೆಗೆ ದ್ರೋಹ ಎಸಗಿದ್ದಾರೆ. ಅಧ್ಯಕ್ಷರು ನಿಮ್ಮ ಅಧ್ಯಕ್ಷರಾಗಿ ಉಳಿದಿಲ್ಲ. ನೀವು ಅಮೆರಿಕನ್ನರು ಎಂಬ ನಿಮ್ಮ ಹೆಮ್ಮೆಯ ಭಾವನೆಯನ್ನು ನಿಮ್ಮ ಅಧ್ಯಕ್ಷರ ಮೂಲಕ ಕಾಣಲಾಗದಿದ್ದರೆ, ತಮ್ಮದೇ ದೇಶದಲ್ಲಿ ಅನಾಮಧೇಯರಂತೆ ಇರುವವರ 'ಜೊತೆ ನೀವು ಭಾಂದವ್ಯ ಬೆಳೆಸಿಕೊಳ್ಳಬೇಕಾಗುತ್ತದೆ.

ಈ ರೂಪಕದಲ್ಲಿ ವಿವರಿಸಿರುವ ಫಲವತ್ತಾದ ಭೂಮಿಯ ಮೇಲೆ 'ಅಮೆರಿಕವನ್ನು ಮತ್ತೊಮ್ಮೆ ಅಗ್ರಗಣ್ಯ ಸ್ಥಾನದಲ್ಲಿ ಕೂರಿಸೋಣ' ಎಂಬ ಭಾವನಾತ್ಮಕ ಬೀಜ ಬಿತ್ತಿದ ಡೊನಾಲ್ಡ್ ಟ್ರಂಪ್, ವಿಜಯದ ಫಸಲು ಬಾಚಿಕೊಂಡರು. ಈ ಅಂಶದ ಜೊತೆಗೆ, ಟ್ರಂಪ್ ಅವರಿಗೆ ಉತ್ಸಾಹಪೂರ್ಣ ಮತ್ತು ಬಲವತ್ತಾದ ಬೆಂಬಲವೂ ಇತ್ತು. ಉದಾರವಾದಿಗಳು ಅನುಸರಿಸುವ ಸಭ್ಯತೆ ಮತ್ತು ಶಿಷ್ಟಾಚಾರಗಳನ್ನು ಧಿಕ್ಕರಿಸಿ ಟ್ರಂಪ್ ಆಡುತ್ತಿದ್ದ ಮಾತುಗಳು, ತಮ್ಮನ್ನು ತುಳಿಯುತ್ತಿದ್ದಾರೆ ಎಂಬ ಭಾವನೆಗಳನ್ನು ಬಹಳ ಸಮಯದಿಂದ ಅದುಮಿಟ್ಟು ಕೊಂಡಿದ್ದ ಅವರ ಬೆಂಬಲಿಗರಿಗೆ ಉಲ್ಲಾಸ ಒದಗಿಸಿದವು. ಅವರ ರ್‍ಯಾಲಿಗಳಲ್ಲಿ ಭಾಗವಹಿಸುತ್ತಿದ್ದ ಜನಸಂದಣಿ ಭಾವಾವೇಶಕ್ಕೊಳಗಾಗುತ್ತಿದ್ದರು ಎಂದು ವೀಕ್ಷಕರು ಹೇಳುತ್ತಾರೆ. ಈ ರಾಜಕೀಯ ವಿದ್ಯಮಾನವನ್ನು ಅರ್ಥಮಾಡಿಕೊಳ್ಳುವಾಗ, ಆರ್ಥಿಕ ಸ್ವ-ಹಿತಾಸಕ್ತಿಗಳಿಗಿಂತಲೂ ಮುಖ್ಯವಾಗಿ, ತನ್ನದೇ ನಾಡಿನಲ್ಲಿ ತಾನೊಬ್ಬ ಅನಾಮಧೇಯ ಅಥವಾ ಪರಕೀಯ ಭಾವನೆಯಿಂದ ಬಿಡುಗಡೆ ಪಡೆಯುವ – ಭಾವನಾತ್ಮಕ ಸ್ವ-ಹಿತಾಸಕ್ತಿಗಳು ಆಳವಾಗಿ ಬೇರೂರಿರುತ್ತವೆ ಎಂಬ ಅಂಶವನ್ನು ಗಮನಿಸಬೇಕು ಎಂದು ಹಾಕ್‌ಷ್ಕೀಲ್ಡ್ ಹೇಳುತ್ತಾರೆ.

ಅಮೆರಿಕದ ಬಲಪಂಥ ಕುರಿತ ಹಾಕ್‌ಷ್ಕೀಲ್ಡ್ ಅವರ ಸೂಕ್ಷ್ಮದೃಷ್ಟಿಯಿಂದ ಕೂಡಿದ ಅಸಾಧಾರಣ ವಿಶ್ಲೇಷಣೆಯು ಅನೇಕ ದೇಶಗಳಿಗೆ ಅನ್ವಯಿಸುತ್ತದೆ. ಯೂರೋಪಿನ ದೇಶಗಳಲ್ಲಿ ತೀವ್ರ ಬಲ ಪಂಥೀಯ ಚಳುವಳಿಗಳು, ಭಾರತದಲ್ಲಿ ಹಿಂದುತ್ವ ಶಕ್ತಿಗಳು ತಲೆಎತ್ತಿವೆ. ಜಾಗತೀಕರಣ ಶಕ್ತಿಗಳು ಜಾಗತಿಕವಾಗಿ ಸೃಷ್ಟಿಸಿರುವ ಪ್ರತಿಸ್ಪಂದನೆ ಏಕ ರೂಪದಲ್ಲಿದೆ. ಇದು ಅರ್ಥಮಾಡಿ ಕೊಳ್ಳಬಹುದಾದ ಅಂಶವಾಗಿದ್ದರೂ ಅನಪೇಕ್ಷಣೀಯವಾಗಿದೆ.

ಭಾವಾನುವಾದ: ಕೆ.ಎಂ.ನಾಗರಾಜ್

ಕೇರಳ: ವಿಮಾನ ನಿಲ್ದಾಣಕ್ಕೆಂದು ಬಿಟ್ಟಿದ್ದ ಭೂಮಿಯಲ್ಲಿ ಬತ್ತದ ಕೃಷಿಗೆ ಮುಖ್ಯಮಂತ್ರಿಗಳಿಂದ ಚಾಲನೆ

ಪಟ್ಟಣಮಂತಿಟ್ಟಾ ಜಿಲ್ಲೆಯಲ್ಲಿರುವ ಪ್ರಸ್ತಾಪಿತ ಅರನ್ಮುಳ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಯನ್ನು ಕೆಜಿಎಸ್ ಗುಂಪು ಪ್ರಾಯೋಜಿಸಿತ್ತು. ಆದರೆ ಪರಿಸರ ಕುರಿತಾದ ಆತಂಕಗಳಿಂದಾಗಿ ಅದನ್ನು ರದ್ದುಗೊಳಿಸಲಾಗಿದೆ. ಯೋಜನೆಗೆಂದು ಸ್ವಾಧೀನ ಪಡಿಸಿಕೊಂಡಿದ್ದ ಭೂಮಿಯ 56 ಹೆಕ್ಟೇರ್ ಜಾಗದಲ್ಲಿ ಅಕ್ಟೋಬರ್ 30ರಂದು ಕೇರಳದ ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ಸ್ಥಳೀಯರು ಮತ್ತು ರೈತರ ಹರ್ಷದನಿಗಳ ನಡುವೆ ಬಿತ್ತನೆಗೆ ಚಾಲನೆ ನೀಡಿದರು.

"ಎಲ್‌ಡಿಎಫ್ ಸರಕಾರ ವಿಮಾನ ನಿಲ್ದಾಣ ಸ್ಥಾಪನೆಗೆ ವಿರುದ್ಧವಾಗಿಲ್ಲ, ನೈಸರ್ಗಿಕ ಪರಿಸರವನ್ನು ನಾಶಮಾಡುವ ಪ್ರದೇಶದಲ್ಲಿ ಈ ಸ್ಥಾಪನೆ ಬೇಡ ಎಂದು ನಾವು ಹೇಳಿತ್ತಿದ್ದೇವೆ, ಈ ನಿರ್ಧಾರದಲ್ಲಿ ಯಾವುದೇ ಬದಲಾವಣೆಗಳಿರುವದಿಲ್ಲ. ಎಲ್‌ಡಿಎಫ್ ಸರಕಾರ ರಾಜ್ಯದ ಸಮಗ್ರ ಅಭಿವೃದ್ಧಿ ಬಯಸುತ್ತದೆ" ಎಂದು ಮುಖ್ಯಮಂತ್ರಿಗಳು ಹೇಳಿದರು.

ಸುಮಾರು 2 ದಶಕಗಳಿಂದ ಈ ಭೂಮಿ ಬಂಜರು ಬಿದ್ದಿತ್ತು, ಸುಮಾರು 700 ಎಕರೆ ಭೂಮಿಯನ್ನು ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು ಯುಪಿಎ ಸರಕಾರ ಇದಕ್ಕೆ ಮಂಜೂರಾತಿ ನೀಡಿತ್ತು. ಆದರೆ ಅದಕ್ಕೆ ಪರಿಸರವಾದಿಗಳ ಹಾಗೂ ಸ್ಥಳೀಯರ ವಿರೋಧವಿತ್ತು. 2014ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ)ಲ್ಲಪರಿಸರ ನಾಶವನ್ನು ತಡೆಯಲು ನಿರ್ಮಾಣ ಕಾರ್ಯವನ್ನು ನಿಲ್ಲಿಸಿತು.

ಕಳೆದ ಅಗಸ್ಟ್‌ನಲ್ಲಿ ಕೇರಳ ಸರಕಾರ ಹೈಕೋರ್ಟಿನಲ್ಲಿ ಒಂದು ಅಫಿಡವಿಟ್ ಸಲಲಿಸಿ ವಿಮಾನ ನಿಲ್ದಾಣ ಪ್ರಾಜೆಕಟಿಗೆ ಕೊಟ್ಟ ಮಂಜೂರಾತಿಯನ್ನು ರದ್ದು ಮಾಡಲು ಸಾಧ್ಯವೇ ಎಂದು ಪರೀಕ್ಷಿಸುವುದಾಗಿ ಹೇಳಿತ್ತು. ಇದು ಬಹುಪಾಲು ಭತ್ತ ಬೆಳೆಯುವ ತರಿ ಭೂಮಿ. ಇದನ್ನು ಒಂದು ಖಾಸಗಿ ಕಂಪನಿಗೆ ವಹಿಸಿಕೊಡಲು ಕಾನೂನಿನಲ್ಲಿ ಅವಕಾಶ ಇರಲಿಲ್ಲ ಎಂದ ಮುಖ್ಯಮಂತ್ರಿಗಳು ಕೇರಳದಲ್ಲಿ ಕೃಷಿ ಉತ್ಪಾದನೆ ಹೆಚ್ಚಿಸಬೇಕಾಗಿದೆ ಎಂದು ಹೇಳಿದರು.

ತರಕಾರಿ ಬೆಳೆಯುವುದರಲ್ಲಿ ದೊಡ್ಡ ಬದಲಾವಣೆ ಆಗಿದೆ. ಇದು ಈ ಬಾರಿ ಓಣಂ ಸಮಯದಲ್ಲಿ ಕಾಣಬಂತು. ಸಾಮನ್ಯವಾಗಿ ಈ ಸಮಯದಲ್ಲಿ ಆಗುವ ಬೆಲೆಯೇರಿಕೆ ಈ ಬಾರಿ ಆಗದಂತೆ ಮಾರುಕಟ್ಟೆ ಮಧ್ಯಪ್ರವೇಶ ಮಾಡಲು ಸರಕಾರಕ್ಕೆ ಸಾಧ್ಯವಾಗಿದ ಎಎಂದು ಪಿಣರಾಯಿ ವಿಜಯನ್ ಹೇಳಿದರು.

ಅತ್ಯಂತ ಅಕ್ಷರಸ್ಥ ರಾಜ್ಯದಲ್ಲಿ ವಲಸೆ ಕಾರ್ಮಿಕರಿಗೆ ಸಾಕ್ಷರತೆಯ ಪ್ರಯತ್ನ

ಕೇರಳಕ್ಕೆ ಉದ್ಯೋಗ ಹುಡುಕಿಕೊಂಡು, ಹೆಚ್ಚಾಗಿ ಉತ್ತರ ಭಾರತದಿಂದ ವಲಸೆ ಬಂದ ಸುಮಾರು 25 ಲಕ್ಷ ಕಾರ್ಮಿಕರಿದ್ದು, ಅವರಲ್ಲಿ ಬಹಳಷ್ಟು ಮಂದಿಗೆ ತಮ್ಮ ಮಾತೃಭಾಷೆಯಲ್ಲೂ ಬರೆಯಲು ಬರುತ್ತಿಲ್ಲ. ಇಂತಹ ಕಾರ್ಮಿಕರಿಗೆ ಕಾನೂನಿನ ಅರಿವು ಮತ್ತು ಆರೋಗ್ಯ ಸಂಬಂಧಿ ಅರಿವು ಮೂಡಿಸುವುದರ ಜೊತೆಗೆ ಹಿಂದಿಯಲ್ಲಿ ಮತ್ತು ಮಲಯಾಳಂನಲ್ಲಿ ಬರೆಯುವುದು ಮತ್ತು ಓದುವುದನ್ನು ಕಲಿಸಲು ಕೇರಳ ರಾಜ್ಯ ಸಾಕ್ಷರತಾ ಮಿಶನ್ ಪ್ರಾಧಿಕಾರ ನಿರ್ಧರಿಸಿದೆ.

ಈ ಕಾರ್ಮಿಕರಿಗೆ ಕನಿಷ್ಟ ಭಾಷಾ ನೈಪುಣ್ಯ ಕೊಟ್ಟು ಅವರು ಇಲ್ಲಿಯವರೊಂದಿಗೆ ಬೆರೆಯಲು ಸಾಧ್ಯವಾಗುವಂತೆ ಮಾಡುವುದು, ಆಮೂಲಕ ಅವರು ತಮ್ಮ ಪರಕೀಯ ಭಾವನೆಯನ್ನು ನಿವಾರಿಸಿಕೊಳ್ಳಲು ಸಾಧ್ಯವಾಗಬಹುದು ಎಂಬುದು ಸಾಕ್ಷರತಾ ಪ್ರಾಧಿಕಾರದ ನಿರೀಕ್ಷೆ. ರಾಜ್ಯದ ಅಭಿವೃದ್ಧಿಗೆ ಭಾರೀ ಕೊಡುಗೆ ನೀಡುತ್ತಿರುವ ಇವರು ಈಗ 'ಬಹಿಷ್ಕೃತ'ರಂತಿದ್ದಾರೆ, ಅದನ್ನು ಬದಲಿಸುವುದು ಈ ಯೋಜನೆಯ ಉದ್ದೇಶ.

ಮೊದಲ ಹಂತದ ಕಾರ್ಯಕ್ರಮಕ್ಕೆ ಜನವರಿ 2017ರಂದು ಪೆರಂಬವೂರನ್ನು ಆರಿಸಿಕೊಳ್ಳಲಾಗಿದೆ. ಬಹಳಷ್ಟು ವಲಸೆ ಕಾರ್ಮಿಕರಿರುವ ಅಲ್ಲಿ ಸಮೀಕ್ಷೆ ಮಾಡುವದರ ಮೂಲಕ ಚಾಲನೆ ನೀಡಲಾಗುವದು. ನಂತರದ ದಿನಗಳಲ್ಲಿ ಬೇರೆ ಜಿಲ್ಲೆಗಳಿಗೂ ಅದನ್ನು ವಿಸ್ತರಿಸಲಾಗುವುದು. ಕುಡುಂಬಶ್ರೀ, ಕಾರ್ಮಿಕ ಇಲಾಖೆ, ಸಾಮಾಜಿಕ ನ್ಯಾಯ ಇಲಾಖೆ ಮತ್ತು ರಾಜ್ಯ ಲೈಬ್ರರಿ ಮಂಡಳಿ ಈ ಕೆಲಸದಲ್ಲಿ ನೆರವಾಗುತ್ತಾರೆ ಎಂದು ಹೇಳಲಾಗಿದೆ. ಈ ಹಿಂದೆ 2013ರಲ್ಲಿ ಇಂತಹ ಕಾರ್ಯಕ್ರಮವನ್ನು ಮುಂದಿಡಲಾಗಿತ್ತು. ಅದು ಜಾರಿಗೆ ಬಂದಿರಲಿಲ್ಲ.

ರಾಜ್ಯಗಳ ಸುತ್ತ

ಭಾರತಿ ಗಾಂವ್ಕರ್

ಮಲಪ್ಪುರಂ ನ್ಯಾಯಾಲಯದಲ್ಲಿ ಸ್ಫೋಟ

ಮಲಪ್ಪುರಂನ ಪ್ರಥಮ ದರ್ಜೆಯ ನ್ಯಾಯಾಲಯದ ಆವರಣದಲ್ಲಿ ನವೆಂಬರ್ 1 ರಂದು ಸ್ಫೋಟ ಉಂಟಾಯಿತು. 3 ವಾಹನಗಳಿಗೆ ಹಾನಿ ಉಂಟಾಯಿತಲ್ಲದೇ ಯಾವುದೆ ಸಾವು ನೋವಾಗಿಲ್ಲ. ಪ್ರೆಶರ್ ಕುಕ್ಕರ್, ಕೆಲ ವಿದ್ಯುತ್ ಸಾಮಗ್ರಿಗಳು, ಬ್ಯಾಟರಿ, ಮತ್ತು ಸಿಡಿಮದ್ದಿನ ಪುಡಿ, ಸ್ಫೋಟದ ಸ್ಥಳದಲ್ಲಿ ದೊರಕಿದೆ.

'ದಿ ಬೇಸ್ ಮೂಮೆಂಟ್' ಎಂದು ಬರೆಯಲಾಗಿದ್ದ ಒಂದು ರಟ್ಟಿನ ಪೆಟ್ಟಿಗೆಯೊಂದು ಘಟನಾ ಸ್ಥಳದಲ್ಲಿ ದೊರಕಿದೆ. ಇದು ನಿಷೇದಿತ ಅಲ್–ಉಮ್ಮಾ ಸಂಘಟನೆಯೊಂದಿಗೆ ಮೈತ್ರಿ ಹೊಂದಿದೆ ಎಂದು ತಿಳಿದುಬಂದಿದೆ. ಅಲ್–ಖೈದಾ ಮುಖ್ಯಸ್ಥ ಒಸ್ಸಾಮಾ ಬಿನ್ ಲಾಡೆನ್‌ನ ಭಾವಚಿತ್ರ, ಮೊಹಮ್ಮದ್ ಅಖ್‌ಲಕ್‌ನ ಕೊಲೆ ಖಂಡಿಸಿ ಕರಪತ್ರವೊಂದು ಆ ಪೆಟ್ಟಿಗೆಯಲ್ಲಿ ದೊರಕಿದೆ. ಅಮೋನಿಯಮ್ ನೈಟ್ರೇಟ್ ತುಂಬಿದ ಕುಕ್ಕರ್ ಕೂಡ ಸಿಕ್ಕಿದೆ ಎಂದು ಜಿಲ್ಲಾ ಪೋಲೀಸ್ ಮುಖ್ಯಸ್ಥರು ತಿಳಿಸಿದ್ದಾರೆ.

ಛತ್ತೀಸ್‌ಗಡದಲ್ಲಿ ಸರ್ವಾಧಿಕಾರಶಾಹಿ ದಾಳಿ............... ಪುಟ 2 ರಿಂದ

ಇದು ತೋರಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸುಳ್ಳು ಕೇಸನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲಿನ ಇಂತಹ ನಗ್ನ ಸರ್ವಾಧಿಕಾರಶಾಹಿ ದಾಳಿಗಳ ವಿರುದ್ಧ ಪ್ರತಿಭಟನೆಯಲ್ಲಿ ಎಲ್ಲ ಪ್ರಜಾಪ್ರಭುತ್ವ ಮನಸ್ಸಿನ ಜನರು ಸೇರಿಕೊಳ್ಳಬೇಕು ಎಂದು ಅದು ಕರೆ ನೀಡಿದೆ.

ಕಲಾವಿದರು, ಬುದ್ಧಿಜೀವಿಗಳು, ಸಂಶೋಧಕರ ಖಂಡನೆ

ಐವತ್ತಕ್ಕೂ ಹೆಚ್ಚು ಕಲಾವಿದರು, ಬುದ್ಧಿಜೀವಿಗಳು, ಅಧ್ಯಯನಕಾರರು ಛತ್ತೀಸ್‌ಗಡ ರಾಜ್ಯ ಪೋಲೀಸರ ಕ್ರಮವನ್ನು ಬಲವಾಗಿ ಖಂಡಿಸಿದ್ದಾರೆ.

ಈ ಹಿಂದೆ ಸುಕ್ಮ ಜಿಲ್ಲೆಯ ತಡಮೆಡ್ಲ ಗ್ರಾಮದಲ್ಲಿ 160 ಮನೆಗಳನ್ನು ಸುಟ್ಟ ಘಟನೆ ಮಾವೋವಾದಿಗಳ ಕೃತ್ಯ ಎಂದು ಇದೇ ಪೋಲೀಸರು ಹೇಳಿದ್ದರು.. ಆದರೆ ಹೈಕೋರ್ಟ್ ಆದೇಶದ ಪ್ರಕಾರ ನಡೆದ ಸಿಬಿಐ ತನಿಖೆಯಲ್ಲಿ ಇದು ವಾಸ್ತವವಾಗಿ ರಾಜ್ಯದ ಪೋಲೀಸರು ಮತ್ತು ಅವರು ನೇಮಿಸಿಕೊಂಡ 'ವಿಶೇಷ ಪೋಲಿಸ್ ಅಧಿಕಾರಿಗಳು' ಎಂಬವರೇ ಈ ದುಷ್ಕೃತ್ಯಕ್ಕೆ ಹೊಣೆ ಎಂದು ಬಯಲಿಗೆ ಬಂದಿತು.

ಇದಾದ ನಂತರ ಮೇಲೆ ಹೇಳಿದ ಇಬ್ಬರು ಪ್ರಾಧ್ಯಾಪಕರು, ಮತ್ತಿತರರರ ಪ್ರತಿಕೃತಿಗಳನ್ನು ಪೋಲೀಸರೇ ಸಾರ್ವಜನಿಕವಾಗಿ ಸುಟ್ಟ ವಿಚಿತ್ರ ಘಟನೆ ನಡೆದಿತ್ತು. ಈಗ ಅವರ ಮೇಲೆ ಸುಳ್ಳು ಕೇಸು ಹಾಕಲಾಗಿದೆ. ಕೊಲೆಯಾದ ವ್ಯಕ್ತಿ ಆದಿವಾಸಿಗಳ ಮೇಲಿನ ಪೋಲಿಸ್ ಅತ್ಯಾಚಾರಗಳಿಗೆ ನೆರವಾಗುತ್ತಿದ್ದ ಕಾವಲುಭಟರ ಪಡೆಗಳಿಗೆ ಸೇರಿದವನು ಎನ್ನುವುದೇ ಈ ಕೇಸು ಹಾಕಲು ಕಾರಣ.

ಇದೆಲ್ಲ ರಾಜ್ಯದ ಆದಿವಾಸಿ ಸಮುದಾಯಗಳ ಸಮಸ್ಯೆಗಳ ಬಗ್ಗೆ ಸಾರ್ವಜನಿಕರ ಗಮನ ಕೇಂದ್ರೀಕರಿಸುವ ಸ್ವತಂತ್ರ ಉಪಕ್ರಮಗಳನ್ನು ಹೆದರಿಸಿ–ಬೆದರಿಸಿ ಸುಮ್ಮನಾಗಿಸುವ ಒಂದು ಕಣ್ಣಿಗೆ ರಾಚುವ ಪ್ರಯತ್ನ, ಈ ಇಬ್ಬರು ಪ್ರಾಧ್ಯಾಪಕರು ಈ ಬಗ್ಗೆ ಬಹಳ ಕಾಲದಿಂದ ಗಂಭೀರ ಅಧ್ಯಯನದಲ್ಲಿ ನಿರತರಾಗಿರುವವರು ಎಂದಿರುವ ಈ ಬುದ್ಧಿಜೀವಿಗಳು ಮತ್ತಿತರರು ಸಹಿ ಹಾಕಿದ ಜಂಟಿ ಹೇಳಿಕೆ ಸ್ವಾತಂತ್ರ್ಯದ ಮೇಲಿನ ಈ ಆಕ್ರೋಶಕಾರಿ ಪ್ರಹಾರದ ವಿರುದ್ಧ ಪ್ರತಿಭಟನೆಯನ್ನು ತೀವ್ರಗೊಳಿಸಬೇಕು ಎಂದು ಅಕಡೆಮಿಕ್ ಸಮುದಾಯಕ್ಕೆ ಕರೆ ನೀಡಿದೆ.

ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ಛತ್ತಿಸ್‌ಗಡ ಪೋಲೀಸ್ ಮುಖ್ಯಸ್ಥನನ್ನು ವಜಾಮಾಡಿ –ಎಐಡಿಡಬ್ಲ್ಯುಎ ಆಗ್ರಹ

ಛತ್ತೀಸ್‌ಗಡ ಸರಕಾರ ನಾಗರಿಕ ಸ್ವಾತಂತ್ರ್ಯಗಳನ್ನು ಉಲ್ಲಂಘಿಸುತ್ತಿದೆ, ಪ್ರತಿರೋಧದ ದನಿಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಹೇಳಿದೆ.

ಪ್ರೊ. ಅರ್ಚನಾ ಪ್ರಸಾದ್ ಬಸ್ತಾರ್‌ನ ಬುಡಕಟ್ಟು ಜನಗಳೊಂದಿಗೆ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಈ ವಿಷಯದ ಮೇಲೆ ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವೆಲ್ಲ ಸಾರ್ವಜನಿಕ ಗ್ರಂಥಾಲಯುಗಳಲ್ಲಿ, ವಿಶ್ವವಿದ್ಯಾಲಯುಗಳಲ್ಲಿ ಪರಾಮರ್ಶೆಯ ಅತ್ಯುತ್ತಮ ಸಂಪನ್ಮೂಲ ಸಾಮಗ್ರಿಗಳೆಂದು ಪರಿಗಣಿತವಾಗಿವೆ. ಈ ಸಂಬಂಧ ಕಳೆದ ಬಾರಿ ಅವರು ಇಲ್ಲಿಗೆ ಭೇಟಿ ನೀಡಲು ಹೋದಾಗ ಆಕೆಯನ್ನು ಆ ಸ್ಥಳ ಬಿಟ್ಟು ಹೋಗುವಂತೆ ಹೇಳಲಾಯಿತು. ಈಗ ಹಲವು ತಿಂಗಳ ನಂತರ ಒಬ್ಬ ಆದಿವಾಸಿ ಮಹಿಳೆಯ ಮೇಲೆ ಒತ್ತಡ ಹಾಕಿ ಆಕೆಯ ಪತಿಯ ಹತ್ಯೆಯಲ್ಲಿ ಇವರ್‍ನು ಆರೋಪಿಯಾಗಿಸುವ ಪ್ರಯತ್ನ ನಡೆದಿದೆ ಎಂದಿರುವ ಎಐಡಿಡಬ್ಲ್ಯುಎ ಇವರು ಮತ್ತು ಇತರರ ಮೇಲಿನ ಸುಳ್ಳು ಕೇಸುಗಳನ್ನು ಹಿಂತೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಛತ್ತೀಸ್‌ಗಡದ ಪೋಲೀಸ್ ಮುಕ್ಯಸ್ಥ ಒಬ್ಬ ಆರೆಸ್ಸೆಸ್ ಕಾರ್ಯಕರ್ತ, ಆತ ಎಲ್ಲ ಪ್ರಜಾಪ್ರಭುತ್ವ ಚಳುವಳಿಗಳನ್ನು ಹತ್ತಿಕ್ಕುವ ತನ್ನ ತರಬೇತಿಯನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ, ಛತ್ತೀಸ್‌ಗಡದ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯಾಗಬೇಕಾದರೆ ಆತನನ್ನು ಕೂಡಲೇ ವಜಾಮಾಡಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ದಿಲ್ಲಿಯಲ್ಲಿ ಎಐಡಿಡಬ್ಲ್ಯುಎ ಕಾರ್ಯಕರ್ತೆಯರು ಛತ್ತಿಸ್‌ಗಡ ಭವನದ ಮುಂದೆ ಪ್ರತಿಭಟನೆ ನಡೆಸಿ ಅಲ್ಲಿನ ಆಯುಕ್ತರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಈ ಸರಕಾರೀ ಭವನದ ಮಂದಿಗೆ ಈ ಸುಳ್ಳು ಕೇಸಿನ ಬಗ್ಗೆ ಏನೂ ತಿಳಿದಿರಲಿಲ್ಲವಂತೆ.

ತೆಲಂಗಾಣದಲ್ಲಿ ಮಹಾಜನ ಪಾದಯಾತ್ರೆ: ಚಿತ್ರರಂಗ ಮತ್ತು ವಿರೋಧ ಪಕ್ಷದ ನಾಯಕರ ಬೆಂಬಲ

ಚಿತ್ರನಟ ಮಡಾಲ ರವಿ ಮತ್ತು ಕಾಂಗ್ರೆಸ್‌ನ ಎಮ್‌ಎಲ್‌ಎ ಆಗಿರುವ ಜಿ.ಚಿನ್ನರೆಡ್ಡಿ ಮಹಾಜನ ಪಾದಯಾತ್ರೆಗೆ ತಮ್ಮ ಬೆಂಬಲ ಸೂಚಿಸಿದರು. ಕೆಸಿಆರ್ ಸರಕಾರದ ನೀತಿಗಳನ್ನು ಇಬ್ಬರೂ ನಾಯಕರು ಟೀಕಿಸಿದರು, ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲರಾಗಿರುವದನ್ನು ಅವರು ಖಂಡಿಸಿದರು. ಬರಗಾಲದ ಸಮಸ್ಯೆ, ಭೂರಹಿತರಿಗೆ ಭೂಮಿ, ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಮಸ್ಯೆ, ಜಾತಿ/ವರ್ಗಗಳ ನಡುವಿನ ಅಂತರವನ್ನು ಅಂತ್ಯಗೊಳಿಸುವಂತಹ ವಿಷಯಗಳನ್ನು ಚರ್ಚಿಸಲಾಯಿತು. ಸಿಪಿಐ(ಎಂ) ಇಂತಹ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿರುವದಕ್ಕಾಗಿ ಹಾಗೂ ಜನರಎಲ್ಲ ಸಮಸ್ಯೆಗಳನ್ನೂ ಆಲಿಸಿ ಅಧಿಕಾರಿಗಳ ವರೆಗೂ ತಲುಪುವ ಹಾಗೆ ಮಾಡುತ್ತಿರುವದಕ್ಕೆ ಶ್ಲಾಘನೆ ಮಾಡಿದರು.

ಕಿಸಾನ್ ಸಂಘರ್ಷ ಜಾತಾ: ನಾಲ್ಕೂ ದಿಕ್ಕುಗಳಿಂದ ದಿಲ್ಲಿಯತ್ತ

ಪುಟ 2 ರಿಂದ

ದೇಶದ ಈ ಭಾಗದ ರೈತರು ಗಡಿಯ ಆಚೆ–ಈಚೆಗಿನ ಹಿಂಸಾಚಾರ ಎದುರಿಸಬೇಕಾಗಿ ಬಂದಿದೆ. ಗಡಿ ನಿಯಂತ್ರಣರೇಖೆ ಮತ್ತು ಅಂತರಾಷ್ಟ್ರೀಯ ಗಡಿಗಳ ಬಳಿಯ ರೈತರಿಗೆ ಆಶ್ರಯ ಮತ್ತು ಪುನರ್ವಸತಿ ಕ್ರಮಗಳ ಭರವಸೆ ನೀಡಲಾಗಿತ್ತು. ಆದರೆ ರೈತರು ನಿರಾಶ್ರಿತ ಸ್ಥಿತಿ ಮತ್ತು ನಾಶ ಬಿಟ್ಟು ಏನನ್ನೂ ಪಡೆದಿಲ್ಲ. ಅನೇಕ ತಿಂಗಳಿನಿಂದ ನಡೆಯುತ್ತಿರುವ ಅಶಾಂತಿಯ ಪರಿಣಾಮವಾಗಿ ಕಣಿವೆ ರಾಜ್ಯದ ರೈತರು, ಬೆಳೆಗಾರರು, ಗಂಭಿರ ಹಾನಿಗೊಳಗಾಗಿದ್ದು ಯಾವುದೇ ಪರಿಣಮಕಾರಿ ಕ್ರಮಗಳನ್ನು ಸರಕಾರ ತೆಗೆದುಕೊಂಡಿಲ್ಲ. ಹಾಗಾಗಿ, ಧರಣಿ ಸತ್ಯಾಗ್ರಹ, ಮೆರವಣಿಗೆ ಪ್ರತಿಭಟನೆಗಳು, ಪ್ರತಿರೋಧಗಳಲ್ಲದೇ ಬೇರೆ ದಾರಿಯಿಲ್ಲ ಎಂದು ಉದ್ಘಾಟನಾ ಸಮಾರಂಬದಲ್ಲಿ ಮಾತಾಡುತ್ತ ಹಿರಿಯ ಸಿಪಿಐ(ಎಂ) ಮುಖಂಡರು ಮತ್ತು ಜಮ್ಮು–ಕಾಶ್ಮೀರ ವಿಧಾಸಭೆಯ ಸದಸ್ಯ ಎಂ. ಐ ತರಿಗಾಮಿ ಹೇಳಿದರು.



ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಭಯೋತ್ಪಾದನೆಗೆ ಜಗ್ಗದೆ ಹೊರಟಿರುವ ಜಾತಾ

ಕಿಸಾನ್ ಸಂಘರ್ಷ ಜಾಥಾ ಕರ್ನಾಟಕದಲ್ಲಿ...........

ಪುಟ 16 ರಿಂದ

ಇನ್ನಷ್ಟು ಸಂಕಷ್ಟಕ್ಕೆ ಇಡೂ ಮಾಡುತ್ತಿದ್ದು, ಇವರಿಬ್ಬರ ನೀತಿಗಳು ಒಂದಕ್ಕೊಂದು ಪೂರಕವಾಗಿ ಇವೆ.

ರಾಜ್ಯದಲ್ಲಿ 142 ತಾಲ್ಲೂಕಿನಲ್ಲಿ ಸತತವಾಗಿ ಬರಗಾಲದ ಪರಿಣಾಮವಾಗಿ ರೈತರು ಕಂಗಾಲಾಗಿದ್ದು, ಒಂದು ಬೆಳೆ ಇಲ್ಲ, ಜೊತೆಗೆ ಬೆಲೆ ನಷ್ಟದ ಪರಿಣಾಮಗಳು ಎದುರಾಗಿದೆ. ಉದ್ಯೋಗ ಖಾತ್ರಿಯಲ್ಲೂ ಸಮಸ್ಯೆಗಳು ಎದುರಾಗಿ ಪರಿಹಾರಕ್ಕೆ ಮುಂದಾಗುತ್ತಿಲ್ಲ. ಜನತೆಯನ್ನು ದಿಕ್ಕು ತಪ್ಪಿಸುವ ಕೆಲಸವಾಗಿ ಟಿಪ್ಪು ಜಯಂತಿ ಬಗ್ಗೆ ಪರ ವಿರೋಧ ಎಂದು ಸಾಕಷ್ಟು ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿಕೊಂಡಿದ್ದಾರೆ. ಇವರಿಗೆ ಟಿಪ್ಪು ಮಾತ್ರ ದೇಶದ್ರೋಹಿಯಾಗಿ ಕಾಣಸಿಗುತ್ತಾರೆ. ಬ್ರಿಟಿಷರ ವಿರುದ್ಧ ದೇಶಕ್ಕಾಗಿ ಸ್ವಾತಂತ್ರಕ್ಕಾಗಿ ಹೋರಾಡಿದ ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಝಾನ್ಸಿರಾಣಿ, ಮುಂತಾದ ರಾಜರೂ ಇವರಿಗೆ ದೇಶದ್ರೋಹಿಗಳಾಗಿಲ್ಲ, ಟಿಪ್ಪು ಮಾತ್ರ ದೇಶದ್ರೋಹಿಗಳಾಗಿ ಕಂಡಿದ್ದಾರೆ. ಅಧಿಕಾರದ ಲಾಲಸೆಗೆ ದಿನಕ್ಕೊಂದು ಬಣ್ಣ ಬದಲಿಸಿ ಮಾತನಾಡುವ ಹಂತಕ್ಕೆ ಈ ಎರಡು ಪಕ್ಷಗಳು ಮುಂದಾಗಿವೆ ಎಂದು ಕಟುವಾಗಿ ಟೀಕಿಸಿದರು.

ಕೆಪಿಆರ್‌ಎಸ್ ಪ್ರಧಾನ ಕಾರ್ಯದರ್ಶಿ ಯು.ಬಸವರಾಜುರವರು ಮಾತನಾಡಿ "ಕೃಷಿ ಬಿಕ್ಕಟ್ಟಿನಿಂದಾಗಿ ದೇಶದಲ್ಲಿ ಅಪೌಷ್ಠಿಕತೆ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸರಕಾಗಳನ್ನು ನಂಬದೇ ತಮ್ಮ ಬದುಕನ್ನು ರೂಪಿಸಿಕೊಳ್ಳು ಮುಂದಾಗಿ ಸರಕಾರಿ ಹಾಗೂ ಅರಣ್ಯ ಜಮೀನುಗಳನ್ನು ಅಭಿವೃದ್ಧಿ ಪಡಿಸಿ ಫಲವತ್ತಾದ ಜಮೀನುಗಳನ್ನಾಗಿ ಮಾಡಿಕೊಂಡು ಬಗರ್‌ಹುಕುಂ ಸಾಗುವಳಿದಾರರಾಗಿ ಸುಮಾರು 40 ಲಕ್ಷ ಜನತೆ ತಮ್ಮ ಜೀವನ ನಿರ್ವಹಣೆ ಮಾಡುತ್ತಿರುವ ಲಕ್ಷಾಂತರ ಕುಟುಂಬಗಳ ಬಡವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಕ್ಕು ಪತ್ರ ನೀಡಿ ರಕ್ಷಣೆ ನೀಡುವ ಬದಲು, ಅವರನ್ನು ಒಕ್ಕಲೆಬ್ಬಿಸುವ ಒತ್ತುವರಿ ಮಾಡಿಕೊಂಡು ಲಕ್ಷಾಂತರ ಜಮೀನುಗಳನ್ನು ಭೂ ಬ್ಯಾಂಕ್ ಹೆಸರಿನಲ್ಲಿ ದೊಡ್ಡ ದೊಡ್ಡ ಕಂಪನಿಗಳಿಗೆ ನೀಡುವ ಹುನ್ನಾರಕ್ಕೆ ಮುಂದಾಗಿದೆ ಎಂದು ತಿಳಿಸಿದರು.

ಬಹಿರಂಗ ಸಭೆಯಲ್ಲಿ 4 ಸಾವಿರಕ್ಕೂ ಹೆಚ್ಚಿನ ರೈತರು ಭಾಗವಹಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೀತಿಗಳ ವಿರುದ್ಧ ಧಿಕ್ಕಾರವನ್ನು ಕೂಗಿದರು. ಅಖಿಲ ಭಾರತ ಜಾಥಾವನ್ನು ಅತ್ಯಂತ ವೈಭವಯೂತವಾಗಿ ಮುಂದಿನ ಪ್ರದೇಶಕ್ಕೆ ಕಳುಹಿಸಿಕೊಟ್ಟರು.

ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ ....

ಪುಟ 7 ರಿಂದ

ಅದರ ಸಾಧನೆ ಅಸಾಧಾರಣವಾದದ್ದು ಅದಾಗ್ಯೂ ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಕುತಂತ್ರದಿಂದ ಪತನಗೊಳಿಸಲಾಯಿತು ಎಂದು ಹೇಳಿದರು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಜಿಲ್ಲಾ ಸಂಚಾಲಕ ಗಣೇಶ ರಾಠೋಡ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಗತ್ತಿನ ಎಲ್ಲೆಡೆ ಕಾರ್ಮಿಕರ, ದುಡಿಯುವ ರೈತಾಪಿ ಜನರ ಹೋರಾಟ, ಚಳವಳಿಗಳಿಗೆ ಇಂದಿಗೂ ಸ್ಪೂರ್ತಿಯ ಸೆಲೆಯಾಗಿರುವದ ಅಕ್ಟೋಬರ್ ಕ್ರಾಂತಿ ಹಲವು ತೃತೀಯ ಜಗತ್ತಿನ ರಾಷ್ಟ್ರಗಳ ಸ್ವತಂತ್ರಕ್ಕೆ, ಸ್ವತಂತ್ರ ನಂತರದ ಸ್ವಾವಲಂಬಿ ಬೆಳವಣಿಗೆಗೆ ಒತ್ತಾಸೆಯಾಗಿ ನಿಂತಿತ್ತು. ಜಗತ್ತನ್ನು ಹಿಟ್ಲರ್‌ನ ಫ್ಯಾಸಿಸ್ಟ್ ಆಕ್ರಮಣದ ಅಪಾಯದಿಂದ ರಕ್ಷಿಸಿದ ಕೀರ್ತಿ ರಷ್ಯದ ಸಮಾಜವಾದಿ ವ್ಯವಸ್ಥೆಗೆ ಸಲ್ಲುತ್ತದೆ ಎಂದರು.

ಸಿಐಟಿಯು ಹಾಗೂ ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷೆ ಮೋಹಿನಿ ನಮ್ಟೇಕರ ಅಧ್ಯಕ್ಷತೆ ವಹಿಸಿದ್ದರು. ಎಸ್.ಎಫ್.ಐ.ನ ಮಣಿಕಂಠ, ಗುತ್ತಿಗೆ ಕಾರ್ಮಿಕರ ಸಂಘದ ಮಂಜುನಾಥ, ಬಿಸಿಯೂಟ ನೌಕರರ ಸಂಘದ ಜಯಶ್ರೀ ಗೌಡ ಹಾಜರಿದ್ದರು.

ಪುಸ್ತಕ ಬಿಡುಗಡೆ

ಹಾಸನ:

ಸಮಾಜವಾದಿ ಕ್ರಾಂತಿಯ ಶತಮಾನೋತ್ಸವವನ್ನು ಹಾಸನದಲ್ಲಿ ನವೆಂಬರ್ 07ರಂದು ಆಚರಿಸಲಾಯಿತು. ಕಾರ್ಯಕ್ರಮವನ್ನು ರಷ್ಯಾ ಸಮಾಜವಾದಿ ಕ್ರಾಂತಿಯ ಕುರಿತಾದ 4 ಪುಸ್ತಕಗಳನ್ನು ಬಿಡುಗಡೆ ಮಾಡುವ ಮೂಲಕ ಉದ್ಘಾಟಿಸಲಾಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಎಸ್. ವರಲಕ್ಷ್ಮಿರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಾಧ್ಯಾಪಕರಾದ ರವೀಂದ್ರ ಬಾಬುರವರು ಸಮಾಜವಾದದ ಪ್ರಸ್ತುತತೆ ಕುರಿತು ಮಾತನಾಡಿದರು. ಹಿರಿಯರಾದ ನಾರಾಯಣದಾಸ್ ಇದ್ದರು ಮತ್ತು ಜಿ.ಪಿ.ಸತ್ಯನಾರಾಯಣ್ ಅಧ್ಯಕ್ಷತೆ ವಹಿಸಿದ್ಧರು. ಧರ್ಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೆಚ್.ಆರ್.ನವೀನ್‌ಕುಮಾರ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಬುದ್ಧಿಜೀವಿಗಳು ಮತ್ತು ಮಠಾಧೀಶರು............

ಪುಟ 6 ರಿಂದ

ವಿದೇಶಗಳಲ್ಲೂ ಸ್ಥಾಪಿತಗೊಂಡು ಜನರ ಸೇವೆಗೆಂದು ಹಣ ಸಂಗ್ರಹ, ಆಸ್ತಿ ಸಂಗ್ರಹ ಮಾಡುತ್ತಿವೆ. ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸೇವೆ, ಸಂತ್ರಸ್ತರಿಗೆ ಪರಿಹಾರ ಕೇಂದ್ರ ಹೀಗೆ ಅಮೂರ್ತವಾದ ತತ್ವಾನ್ವೇಷಣೆಯನ್ನು ಸಾಮಾಜಿಕ ಸೇವೆಗಳಿಗೆ ವಿಸ್ತರಿಸುತ್ತಾ, ಕಾಲಕ್ರಮೇಣ ಪರಿಷ್ಕೃತ ಹಿಂದೂ ಸಮಾಜದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಚಾರದಿಂದ ಲಾಭ ತಂದುಕೊಡುವಂಥ ಸೇವಾ ವ್ಯಾಪಾರದಲ್ಲಿ ತೊಡಗಿವೆ.

ಇವನ್ನು ಅನುಸರಿಸಿ, ಸನಾತನವಾದ ಮತ್ತು ದ್ವೈತಮತವನ್ನು ಪೋಷಿಸಿ ಪ್ರಚಾರ ಮಾಡುವ ಮಡಿವಂತ ಬ್ರಾಹ್ಮಣ ಮಠಗಳು ಧರ್ಮಪ್ರಚಾರವೆಂದರೆ ವೈದಿಕಧರ್ಮದ ಪ್ರಚಾರವೆಂದೂ, ಸಮಾಜದ ಸಾಂಸ್ಕೃತಿಕ ಉತ್ಥಾನವೆಂದರೆ ಕೆಳಜಾತಿಗಳ ಬ್ರಾಹ್ಮಣೀಕರಣವೆಂದೂ ಗ್ರಹಿಸಿ ಶಿಕ್ಷಣ, ವೈದ್ಯಕೀಯ ಸೇವೆ, ಬಡವರ ಉದ್ಧಾರದ ಹೆಸರಿನಲ್ಲಿ ಹಣ ಮಾಡಲು, ಆಸ್ತಿ ಸಂಗ್ರಹಿಸಿ, ಆರ್ಥಿಕವಾಗಿ ಬಲಿಷ್ಠವಾಗಿವೆ. ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣರ ಪ್ರಬಲ ಸಂಘಟನೆಯಾಗಿ ಬ್ರಾಹ್ಮಣರ ಸಾಂಸ್ಕೃತಿಕ ಉತ್ತಮಿಕೆ, ಅನ್ಯಕೋಮಿನ ದ್ವೇಷ ಮತ್ತು ಹಿಂದೂ ಐಕ್ಯತೆಯ ಹೆಸರಿನಲ್ಲಿ ರಾಜಕೀಯ ಅಧಿಕಾರಕ್ಕಾಗಿ ಕೆಲಸಮಾಡುವ ಸಂಘಪರಿವಾರಕ್ಕೆ, ಮಠಮಾನ್ಯಗಳ ಈ ಭೂಮಿಕೆ ವರದಾನದಂತೆ ಒದಗಿ ಬಂತು. ಹೀಗಾಗಿ ಎಲ್ಲೆಲ್ಲಿ ದೇವರು, ಧರ್ಮ, ಸಂಸ್ಕೃತಿ ಕೇಂದ್ರಿತ ಚಟುವಟಿಕೆಗಳು ನಡೆಯುತ್ತವೋ ಅಲ್ಲಿ ಸಂಘಪರಿವಾರ, ವ್ಯಾಪಾರಿ ಹಿತಾಸಕ್ತಿಯ ಪರವಾದ ತನ್ನ ರಾಜಕೀಯವನ್ನು, ಅದನ್ನು ಮುಂದೊತ್ತುವ ವ್ಯಕ್ತಿಗಳನ್ನು ಪ್ರತಿಷ್ಠಾಪಿಸುತ್ತಾ ಬಂದಿದೆ. ತನ್ನ ಹಿಂದುತ್ವದ ಅಜೆಂಡಾವನ್ನು ಗಟ್ಟಿಯಾಗಿ ನೆಲೆಗೊಳಿಸುತ್ತಾ ಬಂದಿದೆ.

ಬ್ರಾಹ್ಮಣ ಮಠಗಳನ್ನು ಅನುಸರಿಸಿ ಇತರ ಜಾತಿಯ ಮಠಗಳು ಧಾರ್ಮಿಕ ಉತ್ಥಾನ ಮತ್ತು ಜನಸೇವೆಯ ಹೆಸರಿನಲ್ಲಿ ರಾಜಕೀಯ ಮಾಡುತ್ತಿವೆ. ಕರ್ನಾಟಕದಲ್ಲಿ ಸರ್ಕಾರವನ್ನು ಅಧಿಕಾರಕ್ಕೆ ತರಬಲ್ಲಷ್ಟು–ಕೆಳಗಿಳಿಸಬಲ್ಲಷ್ಟು ವೀರಶೈವ–ಲಿಂಗಾಯತ ಮಠಗಳು ಪಕ್ಷರಾಜಕೀಯದ ಮೆದು ಕೇಂದ್ರಗಳೂ ಆಗಿವೆ. ಸಂಘಪರಿವಾರದ ಹಿಂದೂ ಮಹಾ ಸಭಾ, ವಿಶ್ವ ಹಿಂದೂ ಪರಿಷತ್, ಮುಂತಾದ ಧಾರ್ಮಿಕ ಮುಖದ ರಾಜಕೀಯ ಸಂಘಟನೆಗಳಲ್ಲಿ ವಿವಿಧ ಜಾತಿ ಮತಗಳ ಮಠಾಧೀಶರು ಮತ್ತು ಮಠಮಾನ್ಯಗಳ ಮುಖ್ಯಸ್ಥರು ಸಕ್ರಿಯರಾಗಿ ಭಾಗವಹಿಸಿಯೂ ತಮಗೆ ಮಾತೃಸಂಸ್ಥೆಯಾದ ರಾಷ್ಟ್ರೀಯ ಸೇವಾ ಸಂಘದ ಜೊತೆ ಯಾವ ಸಂಬಂಧವೂ ಇಲ್ಲ ಎಂದು ಸುಳ್ಳು ಹೇಳುತ್ತಾರೆ. 'ನಾವು ಸಮಾನ ಮನಸ್ಕರು' ಎಂದು ರಾಜಕಾರಣಿಗಳ ಭಾಷೆಯಲ್ಲಿ, ಸುಳ್ಳು–ನಿಜಗಳ 'ಕಂದು ನೆಲೆ'ಯಲ್ಲಿ ನಿಂತು ನುಣಿಚಿಕೊಳ್ಳುತ್ತಾರೆ.

ಪೇಜಾವರ ಮತ್ತು ಪಂಕ್ತಿಭೇದ

'ಬುದ್ಧಿಜೀವಿಗಳು ಹಿಂದೂ ಧರ್ಮದ ವಿರೋಧಿಗಳು' ಎಂದು ಪೇಜಾವರ ಮಠಾಧೀಶರು ಹೇಳಿದರೆಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಯಿತು. ಇದಕ್ಕೆ ನಾಟಕದ ಪ್ರಸನ್ನ, ಅಕೆಡಮಿಕ್ ಚಿಂತಕರಾದ ಪೃಥ್ವಿ ದತ್ತ ಚಂದ್ರಶೋಭಿ ತಮ್ಮ ಪತ್ರಿಕಾಅಂಕಣಗಳಲ್ಲಿ ಸುದೀರ್ಘ ಪ್ರತಿಕ್ರಿಯೆ ನೀಡಿ ದಲಿತರು ಮತ್ತು ಜಾತಿಶೋಷಿತರ ಪರವಾಗಿ ಸ್ಪಂದಿಸುವ ಬುದ್ಧಿಜೀವಿಗಳು ಮಾನವೀಯತೆಯನ್ನು ಆಧರಿಸಿ ಯೋಚಿಸುವ ಪ್ರಗತಿಪರರು, ಮತ್ತು ವೈಚಾರಿಕ ನೆಲೆಯುಳ್ಳವರು. ಪೇಜಾವರರಿಗೆ ದಲಿತರ ನೋವನ್ನು ಅರ್ಥಮಾಡಿಕೊಳ್ಳಬಲ್ಲ ಸಂವೇದನಾಶೀಲತೆ ಬೇಕು ಎಂದು ಹೇಳಿದರು. ಮಾಮೂಲಿನಂತೆ ಪೇಜಾವರರು ಎಲ್ಲ 'ಬುದ್ಧಿಜೀವಿಗಳೂ ಹಿಂದೂ ಧರ್ಮದ ವಿರೋಧಿಗಳು ಎಂದು ನಾನು ಹೇಳಿಲ್ಲ' ಎಂಬ ಸ್ಪಷ್ಟೀಕರಣ ನೀಡಿದರು. ಅಂದರೆ ಎಡಪಂಥೀಯ ಬುದ್ಧಿಜೀವಿಗಳು ಹಿಂದೂ ಧರ್ಮದ ವಿರೋಧಿಗಳು ಎಂಬುದು ಅವರ ಇಂಗಿತ. ಎಡಪಂಥೀಯ ಬುದ್ಧಿಜೀವಿಗಳು 'ಹಿಂದುತ್ವದ ವಿರೋಧಿಗಳು' ಎಂಬ ವರ್ಗಹಿತಾಧಾರಿತ ತೀರ್ಮಾನ ಅವರ ಮನದಾಳದಿಂದ ಹೊರಬರುವಾಗ 'ಹಿಂದೂಧರ್ಮದ ವಿರೋಧಿಗಳು' ಎಂದಾಗುತ್ತದೆ. ಏಕೆಂದರೆ ಅವರು ಸಂಘಪರಿವಾರದ ರಾಜಕೀಯ ಅಜೆಂಡಾ ಆದ 'ಹಿಂದುತ್ವವನ್ನು' ತರ್ಕದ ಚೆಂಡನ್ನಾಗಿಸಿ ಸಂಘಪರಿವಾರದ ಭಾವನಾರಹಿತ ಅಧಿಕಾರದ ಗೋಲಿನ ಕಡೆಗೇ ಹೋಗುವಂತೆ ತಡೆ–ಯೊಡ್ಡುತ್ತಾ ಎದುರಾಳಿಗಳ ದಿಕ್ಕು ತಪ್ಪಿಸುವ ಚತುರ. ಎಡಪಂಥೀಯರು ವೈಚಾರಿಕವಾಗಿ ಮಂಡಿಸುವ ಮಾನವೀಯತೆಯ ತಡೆಗಳನ್ನು ತಪ್ಪಿಸಿ ಹಿಂದುತ್ವದ ಗೋಲಿನತ್ತ ತಮ್ಮ ಚೆಂಡನ್ನು ತೂರಿಸಲೆತ್ನಿಸುವ ಕಾಲ್ಚೆಂಡಿನ ಪಟುತ್ವದ ಬುದ್ಧಿಜೀವಿ.

ಮಹಾಭಾರತದಲ್ಲಿ ಯಕ್ಷನು ಹುಟ್ಟಿನಿಂದ ಬ್ರಾಹ್ಮಣನಾಗಿ ಪ್ರವೃತ್ತಿಯಲ್ಲಿ ಶೂದ್ರನಾಗಿದ್ದರೆ ಅಂಥವನು ಬ್ರಾಹ್ಮಣನೆ? ಹುಟ್ಟಿನಿಂದ ಶೂದ್ರನಾಗಿ ಪ್ರವೃತ್ತಿಯಲ್ಲಿ ಬ್ರಾಹ್ಮಣನಾಗಿದ್ದರೆ ಅಂತವನು ಶೂದ್ರನೆ? ಎಂದು ಕೇಳುವ ಪ್ರಶ್ನೆಗಳಿಗೆ, ಬ್ರಾಹ್ಮಣತ್ವ ಮತ್ತು ಶೂದ್ರತ್ವಗಳನ್ನು ವ್ಯಕ್ತಿಯ ಪ್ರವೃತ್ತಿಯಿಂದಲೇ ನಿರ್ಧರಿಸಬೇಕು ಎಂದು ಧರ್ಮರಾಯ ಉತ್ತರಿಸುತ್ತಾನೆ. ಛಾಂದೋಗ್ಯೋಪನಿಷತ್ತಿನಲ್ಲಿ ಅರೆಶಿಕ್ಷಣ ಪಡೆದು ಗುರುಕುಲದಿಂದ ಮರಳುವ ಶ್ವೇತಕೇತುವನ್ನು ಅವನ ತಂದೆಯು ನಮ್ಮ ವಂಶದಲ್ಲಿ ಹೆಸರಿಗೆ ಮಾತ್ರ ಬ್ರಾಹ್ಮಣರಾಗಿದ್ದವರು ಇರಲಿಲ್ಲ. ಆದ್ದರಿಂದ ನಿಜವಾಗಿ ಬ್ರಾಹ್ಮಣನೆನಿಸಲು ಬ್ರಹ್ಮಜ್ಞಾನವನ್ನು ಸರಿಯಾಗಿ ಅರಿತುಕೊ ಎಂದು ಅವನಿಗೆ ಬ್ರಹ್ಮಜ್ಞಾನವನ್ನು ವಿವರಿಸಿ ಹೇಳುತ್ತಾನೆ.

ಪೇಜಾವರ ಸ್ವಾಮಿಗಳು ಪಂಕ್ತಿಭೇದದ ಅಗತ್ಯವನ್ನು ವಿವರಿಸುತ್ತಾ ಬೇರೆ ಪಂಕ್ತಿ ಬಯಸುವ ಮಡಿವಂತ ಬ್ರಾಹ್ಮಣರಿಗೆ ಮಠದಲ್ಲಿ ಪ್ರತ್ಯೇಕ ಅವಕಾಶ ಕಲ್ಪಿಸುವುದು ಪಂಕ್ತಿಭೇದ ಅಲ್ಲ ಎನ್ನುತ್ತಾರೆ. ಈ ಮಡಿವಂತ ಬ್ರಾಹ್ಮಣರು ಯಾವ ಅರ್ಥದಲ್ಲಿ ಬ್ರಾಹ್ಮಣರು? ಬ್ರಾಹ್ಮಣರೆನಿಸಲು ಜುಟ್ಟು–ಜನಿವಾರ–ಅಂಗಾರ–ಗೋಪಿಚಂದನಗಳು ಸಾಕೆ?

ಪೇಜಾವರರು ತಮ್ಮ ಮಠಕ್ಕೆ ಭೇಟಿಕೊಡುವ ಎಷ್ಟೋ ಬ್ರಾಹ್ಮಣರು ಖಾಸಗಿಯಾಗಿ ಮಾಂಸ ತಿನ್ನುವುದರಿಂದ, ಹೆಂಡ ಕುಡಿಯುವುದರಿಂದ ತಾವು ಮಠಕ್ಕೆ ಬರುವ ಬ್ರಾಹ್ಮಣರೊಡನೆಯೂ ಊಟ–ಕ್ಕೆ ಕೂರುವುದಿಲ್ಲ ಎಂದು ತಮ್ಮ ಪಂಕ್ತಿ ಭೇದವನ್ನು ಸಮರ್ಥಿಸುತ್ತಾರೆ. ಆ ಮಾಂಸ ತಿನ್ನುವ, ಹೆಂಡ ಕುಡಿಯುವ ಬ್ರಾಹ್ಮಣರು ಯಾವ ಅರ್ಥದಲ್ಲಿ ಬ್ರಾಹ್ಮಣರು? ಅಂಥವರು ಮಠಕ್ಕೆ ಬಂದಾಗ ಜುಟ್ಟು–ಜನಿವಾರ–ಅಂಗಾರ–ಗೋಪಿಚಂದನಗಳನ್ನು ಧರಿಸಬಹುದೆ?

ಪೇಜಾವರರು ಅಷ್ಟಮಠಗಳ ಇತರ ಯತಿಗಳೊಂದಿಗೆ, ಮಠದಲ್ಲೇ ಇರುವ ತಮ್ಮ ಖಾಸಾ ಶಿಷ್ಯರೊಂದಿಗೆ ಊಟ ಮಾಡುತ್ತಾರೆಯೆ? ಅವರ ವೈಯಕ್ತಿಕ ನೀತಿ–ನಡವಳಿಕೆಗಳ ಬಗ್ಗೆ ಎಂದೂ ಸಂದೇಹ ಮೂಡುವುದಿಲ್ಲವೆ?

ಪೇಜಾವರರೆ ಹೇಳುವಂತೆ, ಮಠದಲ್ಲೇ ವಿವಿಧ ಕಾರಣಗಳಿಗಾಗಿ ಬೇರೆ ಬೇರೆ ಪಂಕ್ತಿಗಳಲ್ಲಿ ಕೂತು, ಊಟ ಮಾಡುವ ಬೇರೆ ಬೇರೆ ಹಿನ್ನೆಲೆಯ ಎಲ್ಲರಿಗೂ ಒಂದೇ ಬಗೆಯ, ಒಂದೇ ಗುಣ ಮಟ್ಟದ, ಖಾದ್ಯಗಳನ್ನು ಒಂದೇ ಭಾವನೆಯಿಂದ ಬಡಿಸಲಾಗುತ್ತದೆಯೆ? ಹಾಗಿಲ್ಲದಿದ್ದರೆ ಖಾದ್ಯಗಳ, ಭಾವನೆಗಳ ಭೇದ ಯಾಕಾಗಿ ಆಗುತ್ತದೆ?

ಮಠಕ್ಕೆ ಸೇರಿರುವ ಗದ್ದೆಗಳಲ್ಲಿ ದುಡಿದು ದವಸ–ಧಾನ್ಯಗಳನ್ನು, ಗುಳ್ಳ, ಕುಂಬಳ, ತರಕಾರಿಗಳನ್ನು ಮಠಕ್ಕೆ ಒದಗಿಸುವ ಶ್ರಮಜೀವಿಗಳ ಶ್ರಮಶಕ್ತಿ ಯಾವಜಾತಿ? ದೇಶದ ಯಾವುದೋ ಮೂಲೆಗಳಿಂದ ಮಠಕ್ಕೆ ಸರಬರಾಜಾಗುವ ದ್ರಾಕ್ಷಿ, ಗೋಡಂಬಿ, ಕಲ್ಲುಸಕ್ಕರೆ, ಜೇನುತುಪ್ಪ, ಹಾಲು ಮೊಸರುಗಳನ್ನು ಸರಬರಾಜು ಮಾಡುವ ಜನರು ಯಾವ ಜಾತಿ, ಯಾವ ಕುಲ, ಏನು ತಿಂದಿರುತ್ತಾರೆ, ಏನು ಕುಡಿದಿರುತ್ತಾರೆ ಎಂದು ತಿಳಿದು ಅವರು ಸರಬರಾಜು ಮಾಡುವ ವಸ್ತುಗಳನ್ನು ಮಠದಲ್ಲಿ ಬಳಸಲಾಗುತ್ತದೆಯೆ? ಪಾದಪೂಜೆ ಮಾಡುವ ಭಕ್ತರು ಕೊಡುವ ಹಣಕ್ಕೆ ಜಾತಿ ಇದೆ–ಯೆ? ದೇಶ ವಿದೇಶಗಳ ಭಕ್ತರು ಭಕ್ತಿಯಿಂದ ಮಠಕ್ಕೆ ಅರ್ಪಿಸುವ ವಂತಿಗೆ–ದಾನ–ಧರ್ಮಗಳ ಮೌಲ್ಯವನ್ನು ಯಾರು ಸೃಷ್ಟಿಸುತ್ತಾರೆ? ಎಲ್ಲೋ ಸುರಿದ ಮಳೆ, ಕಾದ ಬಿಸಿಲು, ಯಾರೋ ಹಾಕಿದ ಶ್ರಮ, ಎಲ್ಲೋ ಯಾರೋ ಬೆಳೆದ, ಅರೆದ ಕಬ್ಬಿನಿಂದ ಮಾಡಿದ ಸಕ್ಕರೆ, ಎಲ್ಲೋ ಬೆಳೆದ ಬೇಳೆಕಾಳು, ಅಕ್ಕಿ, ಗೋಧಿ, ಉದ್ದು, ಹೆಸರು ಮುಂತಾದವುಗಳಿಂದಲ್ಲವೇ ನಮ್ಮ ಮೈ, ಮನಸ್ಸು, ಬುದ್ಧಿ, ವಿವೇಕಗಳು ರೂಪುಗೊಂಡು ಕೆಲಸ ಮಾಡುವುದು? ಇದರಲ್ಲಿ ಜಾತಿ ಮತಗಳನ್ನು ಗುರುತಿಸುವುದು ಸಾಧ್ಯವೆ? ಯಾವ ಮಡಿವಂತರು, ಯಾವ ಜ್ಞಾನಿಗಳು ಇದನ್ನು ಮಾಡಬಲ್ಲರು?

ಮಧ್ವಾಚಾರ್ಯರು ಪ್ರತಿಪಾದಿಸಿದ ಪಂಚಮಹಾಭೇದ ವ್ಯಕ್ತಿ, ಪ್ರಕೃತಿ, ಜಗತ್ತು ಮತ್ತು ದೈವಿಕತೆಯ ಪರಿಕಲ್ಪನೆಗಳ ನಡುವಿನ ಭಾವನಾತ್ಮಕ ಸಂಬಂಧಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ವೈಚಾರಿಕ ವಿಧಾನ. ನಮ್ಮ ಅನುಭವವನ್ನು ಆಧರಿಸಿ ಹುಟ್ಟುವ ಆಲೋಚನೆಗಳನ್ನು ಸಂಗತವಾಗುವ ರೀತಿಯಲ್ಲಿ ಜೋಡಿಸುವುದು ತರ್ಕದ ಉದ್ದೇಶ. ತರ್ಕವು ಆಲೋಚನೆಗಳನ್ನು, ಆಲೋಚನೆಗಳು ಸಂಬಂಧಗಳನ್ನು ನಿರಾಕರಿಸಿದರೆ ತರ್ಕವೇ ಅಂತಿಮ ಕಾಣ್ಕೆಯಾಗಿ ವಿಜೃಂಭಿಸುತ್ತದೆ. ಭಾವನೆಗಳು ಕಾಣಿಸುವುದೇ ಇಲ್ಲ. ಭಗವಂತನು ಭಾವಗೋಚರ ಎನ್ನುವುದು ಇದಕ್ಕೇ. ಕರಿಕಲ್ಲಿನಲ್ಲಿ ಪ್ರೇಮದ ಪ್ರತೀಕವಾದ ಕೃಷ್ಣನ್ನು ಭಾವಿಸುವ ಮನಸ್ಸಿಗೆ ಸಮಾಜದ ಸಹಜೀವಿಗಳಲ್ಲಿನ ಜಾತಿ ಭೇದದ ಅವಮಾನ ನೋವು, ನರಳಿಕೆ, ಕ್ರೋಧಗಳನ್ನು ಪ್ರೀತಿ–ವಿಶ್ವಾಸ–ನಂಬಿಕೆ–ಸಮಾನತೆಗಳ ಹಂಬಲವನ್ನು ಭಾವಿಸುವುದು ಕಷ್ಟವೆ? ಕಷ್ಟ ಎಂದಾದರೆ, ಭಾವಿಸುವ ಮನಸ್ಸನ್ನು ವೈಧಾನಿಕವಾಗಿ ಪೂಜಿಸುವ ಕಲ್ಲಿನೊಂದಿಗೆ ಕಲ್ಲಾಗಿಸುವ ತರ್ಕಬದ್ಧತೆಯನ್ನು ಕೊಳೆತ ಕುಂಬಳಕಾಯಿಯಂತೆ ತಿಪ್ಪೆಗೆಸೆಯಬೇಕು, ಅಲ್ಲವೆ? ●

JANASHAKTHI KANNADA VARA PATRIKE NOV 20, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283







ಕಿಸಾನ್ ಸಂಘರ್ಷ ಜಾಥಾ ಕರ್ನಾಟಕದಲ್ಲಿ

ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ನೇತೃತ್ವದಲ್ಲಿ ದೇಶದ ಉದ್ದಗಲಕ್ಕೂ ಹಮ್ಮಿಕೊಂಡಿರುವ 'ಕಿಸಾನ್ ಸಂಘರ್ಷ ಜಾಥಾ'ವು ಈಗಾಗಲೇ ನವೆಂಬರ್ 2ರಿಂದ ಪ್ರಾರಂಭವಾಗಿದೆ. ಕರ್ನಾಟಕ ಮಾರ್ಗವಾಗಿ ಹಾದು ಹೋಗುವ ಒಂದು ಜಾಥಾವು ತಮಿಳುನಾಡಿನ ವಿಧುರ ನಗರದಲ್ಲಿ ಉದ್ಘಾಟನೆಗೊಂಡು ಹೊರಟಿದ್ದು, ಅದು ನವೆಂಬರ್ 5ರ ಸಂಜೆ ಬೆಂಗಳೂರಿಗೆ ಪ್ರವೇಶ ಪಡೆಯಿತು.

ಬೆಂಗಳೂರು: ನವೆಂಬರ್ 6ರಂದು ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಲ್ಲಿ ಆಕರ್ಷಕವಾದ ಬಹಿರಂಗ ಸಭೆ ಮೂಲಕ ಸ್ವಾಗತ ಕೋರಲಾಯಿತು. ಸಭೆಯನ್ನು ಉದ್ದೇಶಿಸಿ ಎಐಕೆಎಸ್‌ನ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್‌ರವರು ಮಾತನಾಡಿ, ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ರೈತರು ಆತ್ಮಹತ್ಯೆಯ ಹಾದಿ ತುಳಿದಿದ್ದರೂ, ವೈಜ್ಞಾನಿಕ ಬೆಲೆಗಳನ್ನು ನಿಗದಿ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಟೀಕಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು ರವರು ಮಾತನಾಡಿ 'ಅರಣ್ಯ ಮತ್ತು ಸರ್ಕಾರಿ ಭೂಮಿಯನ್ನು ರೈತರಿಗೆ ನೀಡಬೇಕಾದರೆ ಅರಣ್ಯ ಕಾಯ್ದೆಗೆ ತಿದ್ದುಪಡಿ ತರುವುದು ಅಗತ್ಯವಾಗಿದೆ. ಸರ್ಕಾರಿ ಮತ್ತು ಅರಣ್ಯ ಭೂಮಿಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಕೂಡಲೇ ಸಾಗುವಳಿ ಪತ್ರಗಳನ್ನು ನೀಡಬೇಕು. ಬಹುರಾಷ್ಟ್ರೀಯ ಕಂಪನಿಗಳು ನಡೆಸುತ್ತಿರುವ ಒಪ್ಪಂದ ಕೃಷಿಗೆ ನಿಷೇಧ ಹೇರಬೇಕು ಎಂದು ತಿಳಿಸಿದರು.

ಬಹಿರಂಗ ಸಭೆಯಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ಎನ್.ವೆಂಕಟಾಚಲಯ್ಯ, ಟಿ.ಯಶವಂತ್, ಚಂದ್ರಪ್ಪ ಹೊಸ್ಕೇರಾ, ವನಜಾ, ಮತ್ತಿತರ ಮುಖಂಡರು ಇದ್ದರು.



ದೇವನಹಳ್ಳಿ: ಅಲ್ಲಿಂದ ಹೊರಟ ಜಾಥಾವು ಟಿಪ್ಪು ಸುಲ್ತಾನ್ ಹುಟ್ಟಿದ ನಾಡು ದೇವನಹಳ್ಳಿ ಪ್ರದೇಶಕ್ಕೆ ಬಂದಾಗ ಜಾಥಾ ಮುಖಂಡರಿಗೆ ಹೂ ಮಾಲೆ ಹಾಕಿ, ಹೂವಿನ ಸುರಿಮಳೆ ಮೂಲಕ ಸ್ವಾಗತಿಸಿದರು. ರೈತರು, ಕೃಷಿ ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ–ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಆರ್.ಆರ್.ಮನೋಹರ್, ಹರೀಂದ್ರ, ಆರ್.ಚಂದ ್ರತೇಜಸ್ವಿ ಮಂತಾದ ಮುಖಂಡರು ಉಪಸ್ಥಿತರಿದ್ದರು.

ಕೋಲಾರ: ಮರು ದಿನ ಕೋಲಾರಕ್ಕೆ ಆಗಮಿಸಿದ ಜಾಥಾವು ಬಹಿರಂಗ ಸಭೆಯ ಮೂಲಕ ದೇಶ ಹಾಗೂ ರಾಜ್ಯದ ಕೃಷಿ ಮತ್ತು ರೈತರ ಗಂಭೀರ ಸಮಸ್ಯೆಗಳ ಬಗ್ಗೆ ಮುಖಂಡರು ಮಾತನಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಗಾಂಧಿನಗರ ನಾರಾಯಣಸ್ವಾಮಿ, ಜಿ.ಸಿ.ಬಯ್ಯಾರೆಡ್ಡಿ ಮತ್ತಿತರ ಮುಖಂಡರು ಹಾಜರಿದ್ದರು.

ಮುಳಬಾಗಿಲು: ಜಿಲ್ಲೆಯ ಮುಳಬಾಗಿಲಿಗೆ ಬಂದ ಜಾಥಾವನ್ನು ಕೆಪಿಆರ್‌ಎಸ್ ಜಿಲ್ಲಾ ಅಧ್ಯಕ್ಷರಾದ ಪಿ.ಆರ್.ಸೂರ್ಯನಾರಾಯಣ, ಜಿಲ್ಲಾ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್, ಮುಖಂಡರಾಧ ಪುಣ್ಯಹಳ್ಳಿ ಶಂಕರ್, ವಾಸುದೇವರೆಡ್ಡಿ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

ಚಿಕ್ಕಬಳ್ಳಾಪುರದಲ್ಲಿ ಜಾಥಾ

ನವೆಂಬರ್ 8ರಂದು ಚಿಕ್ಕಬಳ್ಳಾಪುರ ಜಿಲ್ಲೆಗೆ ಆಗಮಿಸಿದಾಗ ರೈತರು ಸ್ವಾಗತ ಕೋರಿದರು. ಮುಖಂಡರಾದ ಮುನಿವೆಂಕಟಪ್ಪ, ಚನ್ನರಾಯಪ್ಪ, ಮತ್ತಿತರರು ಇದ್ದರು. ಚಿಕ್ಕಬಳ್ಳಾಪುರದಿಂದ ಶಿಡ್ಲಘಟ್ಟಕ್ಕೆ ಹೊರಟ ಜಾಥಾವು ಶಿಡ್ಲಘಟ್ಟದಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಹೋರಾಟವನ್ನು ಉದ್ದೇಶಿಸಿ ಕಾ. ವಿಜು ಕೃಷ್ಣನ್‌ರವರು ಮಾತನಾಡಿದರು.

ನವೆಂಬರ್ 8ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸಂಚರಿಸಿದ ಜಾಥಾವು ಶಿಡ್ಲಘಟ್ಟದಿಂದ ಹೊರಟು ಚಿಕ್ಕಬಳ್ಳಾಪುರ ತಾಲ್ಲೂಕು ಗಡಿ ಗುಡಿಬಂಡೆಯ ವರ್ಲಕೊಂಡದಲ್ಲಿ ರೈತರು ಅತ್ಯಂತ ವಿಜೃಂಭಣೆಯಿಂದ ಸ್ವಾಗತಕೋರಿದರು. ವರ್ಲಕೊಂಡದಿಂದ ಸುಮಾರು 1200–1300 ಬೈಕ್‌ನಲ್ಲಿ ಸುಮಾರು 3.500ಕ್ಕೂ ಹೆಚ್ಚಿನ ಜನತೆ ರೈತ ಹೋರಾಟದ ಸಂಕೇತವಾದ ಕೆಂಪು ಬಾವುಟಗಳನ್ನು ಹಿಡಿದು ಜಾಥಾವನ್ನು ಬರಮಾಡಿಕೊಂಡು ಅಲ್ಲಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 15–16 ಕಿ.ಮೀ. ವರೆಗೆ ಸಾಗಿದ ಬೈಕ್ ರ್ಯಾಲಿಯೂ ಅತ್ಯಂತ ಆಕರ್ಷಣೀಯವಾಗಿ ಇತ್ತು.

ಅಂದು ಸಂಜೆ 4 ಗಂಟೆಗೆ ಬಾಗೇಪಲ್ಲಿಯಲ್ಲಿ ನಡೆದ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಿಜು ಕೃಷ್ಣನ್ ರವರು "ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶವನ್ನು ಒತ್ತೆ ಹಾಕುವ ಜಾಗತೀಕರಣ ನೀತಿಗಳನ್ನು ಜಾರಿಗೊಳಿಸುತ್ತಿದೆ. ಇದರಿಂದಾಗಿ ದೇಶದಲ್ಲಿ ಗಂಭೀರ ಬಿಕ್ಕಟ್ಟು ಎದುರಾಗುತ್ತಿದೆ. ಇದು ಕೃಷಿ ರಂಗವನ್ನು ತೀವ್ರವಾಗಿ ಬಾಧಿಸುತ್ತಿದ್ದು, ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ಕೃಷಿ ಉಪಕರಣಗಳ ವೆಚ್ಚಗಳು ಮತ್ತು ಸಾಲದ ಬಡ್ಡಿದರವು ದಿನೇ ದಿನೇ ಹೆಚ್ಚುತ್ತಲೇ ಇವೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಅವರು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ದೇಶದ ರೈತರು ಇಂದು ಪ್ರತಿ 26 ನಿಮಿಷಕ್ಕೆ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆತ್ಮಹತ್ಯೆಗಳ ಸಂಖ್ಯೆಯೂ 3.75 ಲಕ್ಷಕ್ಕೆ ಹೆಚ್ಚಳವಾಗಿದೆ. ಏರುತ್ತಿರುವ ಅಗತ್ಯವಸ್ತುಗಳ ಬೆಲೆಗಳು ಮತ್ತು ಆಧುನೀಕರಣದಿಂದಾಗಿ ಕೃಷಿಯಲ್ಲಿ ಕಡಿತಗೊಳ್ಳುತ್ತಿರುವ ಉದ್ಯೋಗದ ಪರಿಣಾಮವಾಗಿ ರೈತರ ಆದಾಯದ ಕೊರತೆ ಉಂಟಾಗಿದೆ ಎಂದು ಆರೋಪಿಸಿದರು.

ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷರು ಹಾಗೂ ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕರೂ ಆದ ಕಾ. ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿ "ಕೇಂದ್ರ ಬಿಜೆಪಿ ಸರ್ಕಾರ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರ ಎರಡೂ ಪಕ್ಷಗಳು ಅನುಸರಿಸುತ್ತಿರುವ ನೀತಿಗಳು ಒಂದೇ ಆಗಿವೆ. ಈ ಎರಡು ಪಕ್ಷಗಳು ರೈತಪರವಾಗಿ ಕೆಲಸ ಮಾಡಲು ಯಾವುದೇ ಅರ್ಹತೆಯನ್ನು ಹೊಂದಿಲ್ಲ. ಒಂದು ನವ ಉದಾರವಾದಿ ನೀತಿಯನ್ನು ವ್ಯವಸ್ಥಿತವಾಗಿ ಜಾರಿ ಮಾಡುತ್ತದೆ. ಮತ್ತೊಂದು ನವ ಉದಾರವಾದಿ, ಜಾಗತೀಕರಣವನ್ನು ಆಕ್ರಮಣಕಾರಿ ಜಾರಿ ಮಾಡುವ ಜೊತೆಗೆ ಕೋಮುವಾದವನ್ನು ವ್ಯಾಪಕವಾಗಿ ಹರಡುವ ಮೂಲಕ ಜನತೆಯನ್ನು

ಪುಟ 15 ಕ್ಕೆ









JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**